# ವಿಪ್ರನುಡಿ

ಸ್ವಾವಲಂಬನೆ-ಸಂಘಟನೆ-ಸಂಸ್ಕಾರ

ಸಂಪುಟ-33, ಶ್ರೀಪ್ಲವನಾಮ ಸಂವತ್ಸರ, ಮಾಘ-ಫಾಲ್ಗುಣಮಾಸ ಮಾರ್ಚ್-2022, ಸಂಚಿಕೆ-12, ಪುಟಗಳು-36, ಬೆಲೆ ರೂ.-15/-



## ವಿಪ್ರನುಡಿ ಬಿಡುಗಡೆ




## ಮುಖ್ಯಮಂತ್ರಿ ಶ್ರೀ ಬೊಮ್ಮಾಯಿ ಭೇಟಿ



## ಮಹಾಸಭಾ–ಮಹಿಳಾ ವಿಭಾಗದ ಉದ್ಘಾಟನೆ



## ಶ್ರೀಮಠ ಹರಿಹರಪುರದಲ್ಲಿ ಕುಂಭಾಭಿಷೇಕ



## ಉಡುಪಿಯಲ್ಲಿ ಮಧ್ವನವಮಿ






श्री आदिशङ्कराचार्य शारदा लक्ष्मीनृसिंह पीठम्, श्री मठम् – हरिहरपुरम्
SRI ADISHANKARACHARYA SHARADA LAKSHMI NARASIMHA PEETAM
ಶ್ರೀ ಆದಿಶಂಕರಾಚಾರ್ಯ ಶಾರದಾ ಲಕ್ಷ್ಮೀನೃಸಿಂಹ ಪೀಠಮ್

SREEMATH, Hariharapura - 577 120, Koppa Taluk
Chikmagalur Dist, Karnataka.
"Bhaktimandiram", No.1370/M
Nehru Road, 4th Cross, 4th 'A' Main, Girinagar
Bangalore - 560 085. Tel: 080 26426116
E-mail: hhpmahakumbhabhishekam@gmail.com
www.hariharapura.in
For Further Information Contact
9448374458, 9141024602, 9141024594

**MAHAKUMBHABHISHEKA MAHOTSAVAM - 15-04-2022**

ಶ್ರೀ ಅಶೋಕ ಹಾರನಹಳ್ಳಿಯವರು
ಅಧ್ಯಕ್ಷರು
ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ

ವಿಷಯ: ದಿವ್ಯಕ್ಷೇತ್ರ ಹರಿಹರಪುರದಲ್ಲಿ ನಡೆಯಲಿರುವ ಐತಿಹಾಸಿಕ ಮಹಾಕುಂಭಾಭಿಷೇಕ ಮಹೋತ್ಸವದ ಕಾರ್ಯಾಧ್ಯಕ್ಷರಾಗಿ ತಮ್ಮನ್ನು ತೊಡಗಿಸಿಕೊಳ್ಳುವುದರ ಬಗ್ಗೆ

ಶ್ರೀ ಅಗಸ್ತ್ಯ ಮಹರ್ಷಿಗಳ ತಪೋಭೂಮಿ ಹಾಗು ಶ್ರೀ ಶಂಕರ ಭಗವತ್ಪಾದರು ಜ್ಞಾನದೇವತೆಯಾದ ಶ್ರೀ ಶಾರದಾ ದೇವಿಯನ್ನು ಪ್ರತಿಷ್ಠಿಸಿರುವ ಜ್ಞಾನಭೂಮಿಯಾದ ಈ ನಮ್ಮ ದಿವ್ಯಕ್ಷೇತ್ರವಾದ ಹರಿಹರಪುರದಲ್ಲಿ ಶ್ರೀ ಶಂಕರ ಗುರುಪಂರಪರೆ ಅನಾದಿ ಕಾಲದಿಂದಲೂ ತಪ, ಅಧ್ಯಯನಾದಿಗಳಲ್ಲಿ ನಿರತರಾಗಿದ್ದುಕೊಂಡು ಭಕ್ತಕೋಟಿಗೆ ಧರ್ಮಬೋಧೆ - ಜ್ಞಾನಪ್ರಸಾರಗಳನ್ನು ಮಾಡಿಕೊಂಡು ಬರುತ್ತಿರುವ ವಿಷಯವು ನಿಮಗೆ ತಿಳಿದೇ ಇದೆ.

ಹಾಗೆಯೇ ಇದೀಗ ಪೀಠದಲ್ಲಿ ವಿರಾಜಮಾನರಾಗಿರುವ **ಪರಮಪೂಜ್ಯ ಶ್ರೀಮದ್ ಜಗದ್ಗುರು ಶಂಕರಾಚಾರ್ಯ ಶ್ರೀ ಶ್ರೀ ಸ್ವಯಂಪ್ರಕಾಶ ಸಚ್ಚಿದಾನಂದ ಸರಸ್ವತೀ ಮಹಾಸ್ವಾಮಿಗಳವರು** ಸಹ ತಮ್ಮ ಅನುಷ್ಠಾನ, ಜಪ, ಅಧ್ಯಯನಗಳ ಜೊತೆಗೆ ತಮ್ಮ ಗುರುಪರಂಪರೆ ಅನಾದಿಕಾಲದಿಂದಲೂ ಮಾಡಿಕೊಂಡು ಬರುತ್ತಿರುವ ಜ್ಞಾನಪ್ರಸಾರ ಕಾರ್ಯವನ್ನು ಇನ್ನೂ ಅನೇಕ ಕಾರ್ಯಕ್ರಮಗಳ ಮುಖಾಂತರ ಮಾಡುತ್ತಿರುವುದು ನಮ್ಮೆಲ್ಲರಿಗೂ ತಿಳಿದೇ ಇದೆ.

ಪ್ರಸ್ತುತ ಪರಮಪೂಜ್ಯ ಮಹಾಸ್ವಾಮಿಗಳವರು ಸಂಕಲ್ಪಿಸಿದ ಈ ಪೀಠದ ಪುನರ್ನಿರ್ಮಾಣ ಮಹಾಕಾರ್ಯ ಗತ ಹನ್ನೊಂದು ವರ್ಷಗಳಿಂದ ಜರುಗುತ್ತಿದ್ದು ಇದೀಗ ಸಂಪನ್ನಗೊಂಡಿದ್ದು, ಅಗಸ್ತ್ಯ ಮಹರ್ಷಿ ಕರಾರ್ಚಿತ ಶ್ರೀ ಲಕ್ಷ್ಮೀನರಸಿಂಹ ಸ್ವಾಮಿ ಮತ್ತು ಜಗದ್ಗುರು ಆದಿಶಂಕರರು ಪ್ರತಿಷ್ಠಾಪಿಸಿರುವ ಶ್ರೀ ಶಾರದಾ ಪರಮೇಶ್ವರೀ ದೇವಸ್ಥಾನಗಳ ಪ್ರತಿಷ್ಠಾ, ಮಹಾಕುಂಭಾಭಿಷೇಕಗಳನ್ನು ಇದೇ ಶುಭಕೃತ್ ಸಂವತ್ಸರದ ಚೈತ್ರ **ಶುದ್ಧ ಚತುರ್ದಶಿ (ಏಪ್ರಿಲ್ 15, 2022) ಶುಕ್ರವಾರದಂದು** ನೆರವೇರಿಸಲು ಪರಮಪೂಜ್ಯ ಮಹಾಸ್ವಾಮಿಗಳವರು ನಿಶ್ಚಯ ಮಾಡಿರುತ್ತಾರೆ.

**ಹರಿಹರಪುರದಲ್ಲಿ ಲೋಕಕಲ್ಯಾಣಾರ್ಥವಾಗಿ ನಡೆಯಲಿರುವ ಐತಿಹಾಸಿಕವಾದ ಈ ಮಹಾಕಾರ್ಯವು ತಮ್ಮ ಕಾರ್ಯಾಧ್ಯಕ್ಷತೆಯಲ್ಲಿ ನೆರವೇರಬೇಕೆಂದು ಪರಮಪೂಜ್ಯ ಮಹಾಸ್ವಾಮಿಗಳವರು ಇಚ್ಛೆಪಟ್ಟಿರುತ್ತಾರೆ.**

**ಜಗದ್ಗುರು ಶ್ರೀ ಆದಿಶಂಕರಾಚಾರ್ಯ ಗುರುಪರಂಪರೆಯ ಹರಿಹರಪುರ ಮಹಾಪೀಠದಿಂದ ಸಲ್ಲುತ್ತಿರುವ ಈ ಗೌರವವನ್ನು ತಾವು ಸ್ವೀಕರಿಸಿ, ಮಹಾಕುಂಭಾಭಿಷೇಕ ಮಹಾಕಾರ್ಯವನ್ನು ಯಶಸ್ವಿಯಾಗಿ ನಡೆಸಿಕೊಟ್ಟು, ಸೇವೆಯನ್ನು ಸಲ್ಲಿಸಿ, ಶ್ರೀ ಶಾರದಾ ಲಕ್ಷ್ಮೀನೃಸಿಂಹರ, ಶ್ರೀ ಶಂಕರ ಭಗವತ್ಪಾದರ ಮತ್ತು ಪರಮಪೂಜ್ಯ ಮಹಾಸ್ವಾಮಿಗಳವರ ಪೂರ್ಣಾನುಗ್ರಹಕ್ಕೆ ಪಾತ್ರರಾಗಬೇಕೆಂದು ಈ ಮೂಲಕ ತಮ್ಮನ್ನು ಕೇಳಿಕೊಳ್ಳುತ್ತಿದ್ದೇವೆ.**

ಇಂತಿ ವಂದನೆಗಳೊಂದಿಗೆ,

ದಿನಾಂಕ: 10-02-2022
ಸ್ಥಳ: ಹರಿಹರಪುರ

**ಡಾ|| ಬಿ.ಎಸ್. ರವಿಶಂಕರ್**
ಆಡಳಿತಾಧಿಕಾರಿಗಳು, ಶ್ರೀಮಠ, ಹರಿಹರಪುರ

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ (ರಿ)
ಗಾಯತ್ರೀ ಭವನ, ನಂ.3070, (14ನೇ ಅಡ್ಡರಸ್ತೆ), 9ನೇ ಮುಖ್ಯರಸ್ತೆ, ಗಾಯತ್ರೀ ಭವನ ರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು-70
ದೂರವಾಣಿ : 26771695, 26770066
E-mail : info@akbms.com
Website : www.akbms.com

ಅಧ್ಯಕ್ಷರು :
ಅಶೋಕ ಹಾರನಹಳ್ಳಿ
ಪ್ರಧಾನ ಕಾರ್ಯದರ್ಶಿ :
ಶ್ರೀಧರಮೂರ್ತಿ ಎಸ್.
ಖಜಾಂಚಿ :
ವೆಂಕಟೇಶ ಎಸ್. ನಾಯಕ್
ಸಂಘಟನಾ ಕಾರ್ಯದರ್ಶಿ :
ಡಾ|| ಬಿ.ಎಸ್. ರಾಘವೇಂದ್ರ ಭಟ್

ವಿಪ್ರನುಡಿ ಪ್ರಕಟಣಾ ಸಮಿತಿ

ಪ್ರಧಾನ ಸಂಪಾದಕರು :
ಡಾ|| ಎಂ.ಕೆ. ಶ್ರೀಧರ್
ಗೌರವ ಸಲಹೆಗಾರರು :
ಎಂ.ಕೆ. ಭಾಸ್ಕರರಾವ್
ಡಾ|| ಎಂ. ಸೂರ್ಯಪ್ರಸಾದ್
ಸಮಿತಿ ಸದಸ್ಯರು :
ಜ್ಯೋತಿಷಿ ವಿ|| ಡಾ|| ಮುದ್ರಾಡಿ ವಾಸುದೇವ ಭಟ್
ನಾರಾಯಣ ಭಟ್ ಹುಳೇಗಾರು
ಪ್ರಭಾಕರ ಕೆ.ಸಿ.
ಕಾರ್ತಿಕ್ ಬಾಪಟ್
ಹೆಚ್.ವಿ. ಸುಬ್ಬರಾವ್

ರಕ್ಷಾಪುಟ ಚಿತ್ರ :
ಶ್ರೀ ಎಂ.ಪಿ.ಎಂ. ನಟರಾಜ್

ಕಛೇರಿ ಸಮಯ : ಮಂಗಳವಾರದಿಂದ ಶನಿವಾರ
ಬೆಳಿಗ್ಗೆ 10.00 ರಿಂದ 2.00
ಸಂಜೆ 4.00 ರಿಂದ 8.00
ಭಾನುವಾರ ಬೆಳಿಗ್ಗೆ 10.00 ರಿಂದ 2.00
ವಾರದ ರಜಾ : ಸೋಮವಾರ

ಮುದ್ರಕರು : ಪರಿಮಳ ಮುದ್ರಣಾಲಯ
ನಂ 184, 14ನೇ ಮುಖ್ಯರಸ್ತೆ, ಹನುಮಂತನಗರ
ಬೆಂಗಳೂರು-560 050. ದೂ. : 26606061.

# ನಲ್ನುಡಿ-ಸುಭಾಷಿತ

**ಅಪೂರ್ವಃ ಕೋಪಿ ಕೋಶೋಽಯಂ ವಿದ್ಯತೇ ತವಭಾರತಿ ।**
**ವ್ಯಯತೋ ವೃದ್ಧಮಾಯಾತಿ ಕ್ಷಯಮಾಯಾತಿ ಸಂಚಯಾತ್ ॥**

ದೇವಿ ಶಾರದೆಯೇ! ನಿನ್ನ (ಜ್ಞಾನ) ಭಂಡಾರವು ಅತಿ ಅಪೂರ್ವವೂ, ವರ್ಣನೆಗೆ ನಿಲುಕದ್ದೂ ಆಗಿದೆ. ಖರ್ಚು ಮಾಡಿದಷ್ಟೂ ಇದು ಹೆಚ್ಚಾಗುತ್ತದೆ. ಕೂಡಿದ್ದಷ್ಟೂ ಕ್ಷೀಣವಾಗುತ್ತದೆ.

**ಸರ್ವದ್ರವ್ಯೇಷು ವಿದ್ಯೈವ ದ್ರವ್ಯಮಾಹುರನುತ್ತಮಮ್।**
**ಅಹಾರ್ಯತ್ವಾತ್ ಅನರ್ಘ್ಯತ್ವಾತ್ ಅಕ್ಷಯತ್ವಾತ್ ಚ ಸರ್ವದಾ॥ (ಸುಭಾಷಿತ ರತ್ನ ಭಂಡಾಗಾರ)**

ದ್ರವ್ಯ ಅಥವಾ ವಸ್ತುಗಳಲ್ಲೆಲ್ಲಾ ವಿದ್ಯೆಯೇ ಅತಿ ಉತ್ತಮವಾದ ದ್ರವ್ಯವೆಂದು ಹೇಳುತ್ತಾರೆ. ಇದು ಎಂದಿಗೂ ಅಮೂಲ್ಯವೇ. ಈ ವಿದ್ಯೆಯನ್ನು ಯಾರೂ ಕದಿಯಲು ಆಗುವುದಿಲ್ಲ. ಇದು ಕ್ಷಯಿಸುವುದಿಲ್ಲ. ಪಡೆದಷ್ಟೂ ಅಕ್ಷಯವಾಗುತ್ತದೆ.

ಮೇಲ್ಕಂಡ ಸುಭಾಷಿತದಲ್ಲಿ ವಿದ್ಯೆಯ ಮಹತ್ವವನ್ನು ಸಾರಲಾಗಿದೆ. ವಿದ್ಯೆ, ಬುದ್ಧಿ, ವಿವೇಕ, ಪ್ರಜ್ಞಾನಗಳ ಅಧಿದೇವತೆಯಾದ, ಶಾರದೆಯನ್ನು ಸ್ತುತಿಸಲಾಗಿದೆ. ಭೌತಿಕ ಹಾಗೂ ಐಷಾರಾಮಿ ಭೋಗ ವಸ್ತುಗಳನ್ನು ಗಳಿಸುವ ಬದಲು ವಿದ್ಯಾರ್ಜನೆ ಮಾಡಬೇಕು. ಹಣ-ಸಂಪತ್ತು, ವಿದ್ಯೆಯನ್ನು ಹಂಚಿದಷ್ಟೂ ಅವು ಹೆಚ್ಚುತ್ತವೆ. **"ಬಚ್ಚಿಟ್ಟಿದ್ದು ಪರರಿಗೆ"** ಎಂಬಂತೆ ಕೂಡಿಟ್ಟ ಹಣ ಅನ್ಯರ ಪಾಲಾಗುತ್ತದೆ. ಐಹಿಕ ವಸ್ತುಗಳಿಗಿಂತ ರಹಸ್ಯವಾದ, ಸೂಕ್ತಕಾಲದಲ್ಲಿ ಪ್ರಕಟವಾಗುವ ವಿದ್ಯೆ ಅಮೂಲ್ಯವಾದ ಅಕ್ಷಯವಾದ ಶ್ರೇಷ್ಠದ್ರವ್ಯ. ಕಷ್ಟಪಟ್ಟು ಗಳಿಸಿದ ವಿವಿಧ ರೀತಿಯ ವಿದ್ಯೆಯು ಸಂದರ್ಭ, ಸನ್ನಿವೇಶಕ್ಕೆ ಅನುಗುಣವಾಗಿ ಸಹಾಯಮಾಡುತ್ತದೆ. ವಿದ್ಯೆಕಲಿತ, ಸುಶಿಕ್ಷಿತಳಾದ ಮಹಿಳೆಯಿಂದ ಮನೆ ಬೆಳಗುತ್ತದೆ. ವಿದ್ಯಾವಂತ ಕುಟುಂಬ, ಸಮಾಜದಿಂದಲೇ ರಾಷ್ಟ್ರಪ್ರಗತಿಯಾಗುತ್ತದೆ. ಮಾದಕದ್ರವ್ಯ ಮುಂತಾದ ದುಶ್ಚಟಗಳಿಗೆ ದಾಸರಾಗಿ ಹಾದಿ ತಪ್ಪುವ ಯುವಜನತೆ ಈ ದಿಶೆಯಲ್ಲಿ ಪ್ರಯತ್ನಪಟ್ಟು ವಿದ್ಯಾರ್ಜನೆ ಮಾಡಬೇಕು ಎಂಬುದೇ ಕಳಕಳಿಯ ಮನವಿ.

**ಪ್ರತಿ ತಿಂಗಳ ಜಾಹೀರಾತಿನ ದರ ಹೀಗಿದೆ.**

| | | | | |
|---|---|---|---|---|
| 1. | ಹೊರ ರಕ್ಷಾ ಪುಟ (ವರ್ಣ) | .. | ರೂ. | 30,000/= |
| 2. | ಒಳ ರಕ್ಷಾ ಪುಟ (ವರ್ಣ) | .. | ರೂ. | 20,000/= |
| 3. | ಒಳ ಪುಟ (ವರ್ಣ) | .. | ರೂ. | 15,000/= |
| 4. | ಒಳ ಪುಟ (ಕಪ್ಪು ಬಿಳುಪು) | .. | ರೂ. | 10,000/= |
| 5. | ಒಳ ಅರ್ಧ ಪುಟ (ಕಪ್ಪು ಬಿಳುಪು) | .. | ರೂ. | 5,000/= |
| 6. | ಒಳ ಕಾಲು ಪುಟ (ಕಪ್ಪು ಬಿಳುಪು) | .. | ರೂ. | 2,500/= |
| 7. | ಎರಡು ಸಾಲಿನ ಪ್ರಕಟಣೆ | .. | ರೂ. | 1,000/= |
| 8. | ಒಂದು ಪುಟ ಪ್ರಾಯೋಜಕತ್ವ | .. | ರೂ. | 2,000/= |

-ಸಂಚಾಲಕರು-ಜಾಹೀರಾತು ವಿಭಾಗ

## ವಿಪ್ರನುಡಿಗೆ ಚಂದಾದಾರರಾಗಲು ಮನವಿ

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ ಮುಖವಾಣಿಯಾದ 'ವಿಪ್ರನುಡಿ' ತಮಗೆ ತಲುಪಿದೆ. ಸಂಚಿಕೆ ಇನ್ನಷ್ಟು ಚೆನ್ನಾಗಿ ಮೂಡಿಬರಲು ತಮ್ಮ ಸಲಹೆಗೆ ಸ್ವಾಗತ. ಮುದ್ರಣ ದುಬಾರಿಯಾಗಿರುವ ಈ ಕಾಲದಲ್ಲಿ ಪತ್ರಿಕೆಯನ್ನು ಎಲ್ಲರಿಗೂಈ ತಲುಪಿಸಲು ಕಷ್ಟಸಾಧ್ಯ. ಆದ್ದರಿಂದ ತಾವು 'ವಿಪ್ರನುಡಿ'ಗೆ ಚಂದಾದಾರರಾಗಬೇಕೆಂದು ಸಂಪಾದಕ ಮಂಡಳಿಯ ವಿನಂತಿ. ಮೂರು ವರ್ಷಕ್ಕೆ 500/= ರೂ.ಗಳನ್ನು ನೀಡಿ ವಿಪ್ರನುಡಿ ಸದಸ್ಯರಾಗಬೇಕಾಗಿ ಕೋರಿಕೆ. ಈ ವಿಪ್ರನುಡಿ ಸದಸ್ಯರ ಚಂದಾ ಹಣವನ್ನು ಪ್ರತ್ಯೇಕವಾಗಿ ತೆಗೆದಿಡಲಾಗುತ್ತದೆ. ದಯವಿಟ್ಟು ತಾವು ಹಾಗೂ ತಮ್ಮ ಬಂಧುಗಳು ಶೀಘ್ರವೇ ಚಂದಾದಾರರಾಗಬೇಕೆಂದು ಸಂಪಾದಕ ಮಂಡಲಿ ವಿನಂತಿಸುತ್ತದೆ.

ಈಗ ನೀವು website ಮೂಲಕ Online ನಲ್ಲಿ ಚಂದಾದಾರರಾಗಬಹುದು.

# ತಿಂಗಳ ರಾಶಿ ಫಲ

–ಜ್ಯೋತಿಷಿ ವಿ॥ ಮುದ್ರಾಡಿ ವಾಸುದೇವ ಭಟ್



**ಮೇಷ ರಾಶಿ** : ಈ ರಾಶಿಯವರಿಗೆ ಗುರುಬಲ ಚೆನ್ನಾಗಿದೆ. ಹೀಗಾಗಿ ತಿಂಗಳಾರಂಭ ಶುಭಾರಂಭವಾಗಿರುತ್ತದೆ. ಆದ್ದರಿಂದ ಆರೋಗ್ಯ, ಸಮಾಜದಿಂದ ಗೌರವ, ಸಂಪತ್ತಿನ ಲಾಭ, ಮಿತ್ರರಿಂದ ಸಹಾಯ ಇದರಿಂದಾಗಿ ಮಾನಸಿಕ ಸುಖ ಶಾಂತಿ ಸಮೃದ್ಧಿಯಾಗಲಿ. ಆದರೆ ತಿಂಗಳಾಂತ್ಯದಲ್ಲಿ ಇದ್ದಕ್ಕಿದ್ದಂತೆ ವಿಪರೀತ ಖರ್ಚು, ಆಯಾಸ, ತಿರುಗಾಟಗಳು ಉಂಟಾಗಲಿರುವುದು.



**ವೃಷಭ** : 'ಕರ್ಮ ಸಿದ್ಧಿಂ ದಿನೇಶಃ' ಎಂಬಂತೆ ಕೈಗೊಂಡು, ಪ್ರಾರಂಭಿಸಿದ್ದು ಮುಟ್ಟಿದ್ದು ಎಲ್ಲವೂ ಚೆನ್ನಾಗಿ ನಡೆಯಲಿರುವುದು. ಹೀಗಾಗಿ ಧನಪ್ರಾಪ್ತಿ, ಆರೋಗ್ಯ, ರಾಜಕೀಯದಿಂದ ಅನುಕೂಲ ಉಂಟಾಗುವುದು. ಈ ಮಧ್ಯೆ ಹಿತಶತ್ರುಗಳ ಕಾಟ, ಕುಟುಂಬ ಕಲಹಕ್ಕೆ ಎಡೆಯಿರುವುದು. ದೇವೀ ಆರಾಧನೆಯಿಂದ, ಸುಬ್ರಹ್ಮಣ್ಯ ಆರಾಧನೆಯಿಂದ ಇಷ್ಟ ಸಿದ್ಧಿಸುವುದು.



**ಮಿಥುನ** : ಮೇಲ್ನೋಟಕ್ಕೆ ಎಲ್ಲವೂ ಚೆನ್ನಾಗಿರುತ್ತದೆ. ಒಳಗಿನ ಗುಟ್ಟು ಶಿವನೇ ಬಲ್ಲ. ನೋಡುವವರ ಕಣ್ಣಿಗೆ ಚೆನ್ನಾಗಿರುತ್ತದೆ. ಆಟಕ್ಕುಂಟು ಲೆಕ್ಕಕ್ಕಿಲ್ಲ ಇದು ಪರಿಸ್ಥಿತಿ. ಮಾತ್ರವಲ್ಲ ನಿಮ್ಮೊಟ್ಟಿದ್ದವರಿಗೇ ಲಾಭ. ನೀವು ನಿಂತಲ್ಲೇ ಇರಬೇಕಾಗುತ್ತದೆ. ಅಷ್ಟಮದ ಅಂಗಾರಕ ಒಂದೇ ಸಲ ಎಲ್ಲ ವ್ಯವಹಾರ ನಿಲ್ಲಿಸಿಬಿಡಬಹುದು. ವಿಪರೀತ ಖರ್ಚು. ವ್ಯರ್ಥ ತಿರುಗಾಟ. ದೇಹಾಯಾಸ, ಅನಾರೋಗ್ಯಕ್ಕೆ ಎಡೆಯಿರುವುದು. ದೂರತಿರುಗಾಟ ನಿಲ್ಲಿಸುವುದುತ್ತಮ. ಕುಲದೇವರ, ಶ್ರೀನಿವಾಸದೇವರ ಅನುಗ್ರಹವಿದ್ದಲ್ಲಿ ಇಷ್ಟಾರ್ಥ ಸಿದ್ಧಿಸುವುದು.



**ಕರ್ಕಾಟಕ** : ಗುರುಬಲವಿಲ್ಲ. ಎಲ್ಲ ಗ್ರಹಗಳೂ ಅಷ್ಟಮಕ್ಕೆ ಸಮೀಪ ಇರುವರು. ಇದರಿಂದ ವೃಥಾ ತಿರುಗಾಟ, ಆಯಾಸ. ವಿಪರೀತ ಖರ್ಚು. ಅನುಕೂಲದ ಬದಲು ಪ್ರತಿಕೂಲ ಉಂಟಾಗಬಹುದು. ಮಿತ್ರರೂ ಶತ್ರುಗಳಾಗಬಹುದು. ಸಮಾಜದಲ್ಲಿ ಅಗೌರವ ಉಂಟಾಗಬಹುದು. ಮೋಸಹೋಗಬಹುದು. ಒಂದು ಗಳಿಗೆ ಖಿನ್ನತೆ ಆವರಿಸಬಹುದು. ಧೈರ್ಯಂ ಸರ್ವತ್ರ ಸಾಧನಂ ಎಂಬಂತೆ ಎದೆಗುಂದದಿರಬೇಕು. ಮೌನವ್ರತಾಚರಣೆ ಆಚರಿಸಬೇಕು. ಪ್ರಾಣದೇವರ ಸ್ಮರಣೆ ಮಾಡಬೇಕು. ಇದರಿಂದ ಇಷ್ಟಾರ್ಥ ಸಿದ್ಧಿಸುವುದು.



**ಸಿಂಹರಾಶಿ** : ಗುರುಬಲವಿದೆ. ಆನೆ ನಡೆದದ್ದೇ ದಾರಿ ಎಂಬಂತೆ ಮುಟ್ಟಿದ್ದು ಚಿನ್ನವಾಗಬಹುದು. ಶತ್ರುಗಳೂ ಮಿತ್ರರಾಗುವರು. ಕೈಗೊಂಡ ಕಾರ್ಯಕಲಾಪಗಳೆಲ್ಲ ಸುಖಾಂತ್ಯವಾಗಲಿರುವುದು. ರಾಜಕೀಯದಿಂದಲೂ ಅನುಕೂಲವಾಗಲಿರುವುದು. ವಿದ್ಯಾರ್ಥಿಗಳಿಗೂ ಶ್ರೇಯಸ್ಸಿರುವುದು. ತಿಂಗಳಾತ್ಯದಲ್ಲಿ ಗ್ರಹಗಳ ಬದಲಾವಣೆ ಇರುವುದರಿಂದ ಜಾಗ್ರತೆ ಇರುವುದು ಉತ್ತಮ.



**ಕನ್ಯಾರಾಶಿ** : 'ವಿಪರೀತೇ ವಿಪರ್ಯಯಃ' : ಎಂಬಂತೆ ಗುರುಬಲವಿಲ್ಲ. ಇದರಿಂದಾಗಿ ಇಷ್ಟಾರ್ಥ ಸಿದ್ಧಿಸುವುದಿಲ್ಲ. ಅನಗತ್ಯ ಖರ್ಚು. ಮಾನಸಿಕ ಅಶಾಂತಿ. ದೇಹಾಲಸ್ಯ, ಅನಾರೋಗ್ಯ, ಒಟ್ಟಿನಲ್ಲಿ ಎಲ್ಲಿಗಾದರೂ ಹೋಗಿಬಿಡಬೇಕೆಂಬ ಭಾವನೆ ಉಂಟಾಗಬಹುದು. 'ಶ್ರೀನಿವಾಸ ನೀನೇ ಪಾಲಿಸೋ' ಎನ್ನುವುದರಲ್ಲಿ ಶ್ರೇಯಸ್ಸಾಗಲಿರುವುದು.



**ತುಲಾ ರಾಶಿ:** ಒಳ್ಳೆಯ ಆಹಾರ, ವಿಹಾರ, ಸಜ್ಜನರ ಸಹವಾಸ, ವ್ಯವಹಾರದಲ್ಲಿ ಅನುಕೂಲ, ದೇಹಾರೋಗ್ಯ, ಮಾನಸಿಕ ನೆಮ್ಮದಿ ರಾಜಕೀಯದಿಂದ ಅನುಕೂಲ ಎಲವೂ ಚೆನ್ನಾಗಿರುವುದು. ಒಂದೆಡೆಯಿಂದ ಧನಾಗಮವಿರುತ್ತದೆ. ಇನ್ನೊಂದೆಡೆ ಖರ್ಚು ಜಾಸ್ತಿ ಆಗುತ್ತಾ ಇರುತ್ತದೆ. ನಂಬಿದವರು ಕೈಕೊಡಬಹುದು. ಆದರೂ ವ್ಯವಹಾರ ನಡೆಯುತ್ತಾ ಇರುತ್ತದೆ.



**ವೃಶ್ಚಿಕ ರಾಶಿ** : ಚೇಳಿನಂತಹ ಸ್ವಭಾವದವರು, ಹಿಡಿದ ಕೆಲಸವನ್ನು ಬಿಡದೆ ಮಾಡುವವರು. ಹಠಸ್ವಭಾವದವರು. ಉದಾರಿಗಳಾದರೆ ನಿಮಗಿರುವ ಸ್ಥಾನಮಾನ ಯಾರಿಗೂ ಸಿಗಲಾರದು. ಮಾತಿನಿಂದಲೇ ಸರ್ವಸ್ವ ನಷ್ಟವಾಗಬಹುದು. ಊರೂರು ಅಲೆದಾಡುವ ಸಂದರ್ಭಕ್ಕೆ ಜಾಗ್ರತೆ ಇರುವುದುತ್ತಮ. ದೇವೀ ಆರಾಧನೆ ಮತ್ತು ಸುಬ್ರಹ್ಮಣ್ಯ ಆರಾಧನೆ ಹಾಗೂ ಉದ್ದು ದಾನದಿಂದ ಇಷ್ಟಾರ್ಥ ಸಿದ್ಧಿಸುವುದು.



**ಧನುರಾಶಿ** : ವಾಚಾಳಿಗಳು. ತಾನು ಹೇಳಿದ್ದು ಸರಿ ಎನ್ನುವವರು. ಸುಮ್ಮನಿರಲಾರರು. ಹೊಗಳಿದರೆ ಅಟ್ಟಕ್ಕೇರುವವರು. ತೆಗಳಿದರೆ ಉರಿದು ಬೀಳುವವರು. ಈ ತಿಂಗಳು ಅರುಣೋದಯಕಾಲ. ಮುಂದೆ ಒಂದೊಂದೇ ಕೈಗೊಂಡ ಕೆಲಸಕಾರ್ಯಕಲಾಪಗಳೆಲ್ಲ ಸಂಪೂರ್ಣವಾಗಲಿರುವುದು. ಇದರಿಂದಾಗಿ ಮಾನಸಿಕ ಶಾಂತಿ, ಆರೋಗ್ಯ, ಭಾಗ್ಯ, ಧನಾಗಮವಾಗಲಿರುವುದು. ಇದು ಭಾಗ್ಯೋದಯ ಕಾಲವಾಗಿರುವುದು. ಎಲ್ಲ ಕೆಲಸಕ್ಕೂ ಮುನ್ನುಗ್ಗಿರಿ. ಜಯಶೀಲರಾಗುವಿರಿ.



**ಮಕರ ರಾಶಿ** : ಗುರು ಅಸ್ತನಾಗಿದ್ದಾನೆ. ಇದರಿಂದಾಗಿ ನಿಮ್ಮ ಕೈಗೊಂಡ ಕಾರ್ಯಕಲಾಪಗಳೆಲ್ಲವು ಕುಂಠಿತವಾಗಲಿರುವುದು. ಹಿತಶತ್ರುಗಳ ಕಾಟ ಜಾಸ್ತಿಯಾಗಬಹುದು.ಮಾನಸಿಕ ಆದಾಯ ಉಂಟಾಗಬಹುದು. ವ್ಯರ್ಥ ತಿರುಗಾಟ. ದೇಹಾಯಾಸ, ಅನಾರೋಗ್ಯ, ವ್ಯರ್ಥಖರ್ಚು, ಸ್ಥಾನಮಾನಕ್ಕೆ ಧಕ್ಕೆ ಎಲ್ಲ ವ್ಯವಹಾರಿಗಳಿಗೂ ಪ್ರತಿಕೂಲ ಫಲಕಾಲ. ಜಾಗ್ರತೆ ಇರುವುದೇ ಎಲ್ಲಕ್ಕೂ ಪರಿಹಾರ. ಇಷ್ಟದೇವರ, ಶ್ರೀನಿವಾಸ ದೇವರ ದರ್ಶನದಿಂದ ಭಾಗ್ಯವೃದ್ಧಿಯಾಗಲಿರುವುದು.



**ಕುಂಭ ರಾಶಿ:** ನೋಡುವವರ ಕಣ್ಣಿಗೆ ಸುಖವಾಗಿರುವಿರಿ. ಒಳಗಿನ ಗುಟ್ಟು ದೇವರೇ ಬಲ್ಲ. ಎಲ್ಲ ಗ್ರಹಗಳೂ ನಿಮ್ಮ ರಾಶಿ ಸುತ್ತಮುತ್ತ ತಿರುಗುತ್ತಲಿದ್ದಾರೆ. ನೀವೂ ಅದರಂತೆ ವೃಥಾ ತಿರುಗಾಟ ಮಾಡುವ ಪ್ರಸಂಗವಾಗುತ್ತದೆ. ನ್ಯಾಯಾಲಯಕ್ಕೂ ಸುತ್ತಬಹುದು. ಹೀಗಾಗಿ ವ್ಯವಹಾರದಲ್ಲಿ, ಆರೋಗ್ಯದಲ್ಲಿ, ಆರ್ಥಿಕವಾಗಿಯೂ ಪ್ರತಿಕೂಲವಾಗಬಹುದು. ಈಶ್ವರಾರಾಧನೆಯಿಂದ ಇಷ್ಟ ಸಿದ್ಧಿಯಾಗುತ್ತದೆ.



**ಮೀನರಾಶಿ** : ನೀವು ವಿದ್ಯಾವಂತರು, ರೂಪವಂತರು, ಪರೋಪದೇಶ ಪಂಡಿತರು. ವ್ಯವಹಾರ ಕುಶಲರು, ಸಂಚಾರಿಗಳು, ಜೀವನವನ್ನು ಲಘುವಾಗಿ ನಿಭಾಯಿಸುವವರು ಎಲ್ಲವೂ ಸರಿಯಾಗಿಯೇ ಹೋಗುತ್ತಿರುತ್ತದೆ. ಮಕ್ಕಳಿದ್ದರೆ ಮದುವೆಯ ಚಿಂತೆ. ವ್ಯವಹಾರದಲ್ಲಿ ಲಾಭವಿಲ್ಲದಿರುವ ಚಿಂತೆ. ಕೊಡಿಟ್ಟ ಹಣವೆಲ್ಲ ಒಂದು ಬದಿಯಲ್ಲಿ ಖರ್ಚಾಗುತ್ತಾ ಇರುತ್ತದೆ. ಇಷ್ಟದೇವರ ಪ್ರಾರ್ಥನೆಯಿಂದ ಇಷ್ಟಾರ್ಥ ಸಿದ್ಧಿಸುತ್ತದೆ.

**ಸರ್ವೇಜನಾಃ ಸುಖಿನೋಭವಂತು,**
**ಎಲ್ಲರಿಗೂ ಒಳ್ಳೆಯದಾಗಲಿ. ಶುಭಮಸ್ತು.**

# ಅಧ್ಯಕ್ಷರ ನುಡಿ



**ಆತ್ಮೀಯ ವಿಪ್ರಬಂಧುಗಳೇ,**

**ನಿಮ್ಮೆಲ್ಲರಿಗೂ ಮಹಾ ಶಿವರಾತ್ರಿಯ ಹಾರ್ದಿಕ ಶುಭಾಶಯಗಳು. ಲೋಕದ ಸಮಸ್ತ ಜೀವರಾಶಿಗಳನ್ನು ಪೊರೆಯುವ ಮಹಾದೇವ ಸಕಲ ಸಂಕಷ್ಟಗಳಿಗೆ ಪರಿಹಾರ ನೀಡಲಿ ಎಂದು ಪ್ರಾರ್ಥಿಸುತ್ತಾ, ನಿಮ್ಮೆಲ್ಲರ ಗಮನವನ್ನು ಇತ್ತೀಚಿನ ಮಹಾಸಭೆಯ ಚಟುವಟಿಕೆಗಳತ್ತ ಸೆಳೆಯಬಯಸುತ್ತೇನೆ. ಕಾರಣಾಂತರಗಳಿಂದ ಸ್ಥಗಿತಗೊಂಡಿದ್ದ ವಿಪ್ರನುಡಿ ಪತ್ರಿಕೆಯ ಮರುಚಾಲನೆಯನ್ನು ನೀವೆಲ್ಲರೂ ತುಂಬು ಮನಸ್ಸಿನಿಂದ ಸ್ವಾಗತಿಸಿದ್ದೀರಿ. ಈ ನಿಮ್ಮ ಪ್ರೋತ್ಸಾಹಕ್ಕೆ ಹಾಗೂ ಹಾರೈಕೆಗಳಿಗೆ ಮಹಾಸಭಾ ಹಾಗೂ ವಿಪ್ರನುಡಿ ತಂಡ ಆಭಾರಿ ಯಾಗಿದೆ. ಅಧಿಕಾರವೆಂಬುದು ಕೇಂದ್ರ ಕಛೇರಿಯಲ್ಲಿ ಕೇಂದ್ರಿತವಾಗಿ ಹೆಪ್ಪುಗಟ್ಟದೆ ನಾನಾ ವಲಯಗಳಲ್ಲಿ, ಪ್ರಾಂತ್ಯಗಳಲ್ಲಿ ಸಮತೋಲನ ದಲ್ಲಿ ವಿಕೇಂದ್ರೀತವಾಗಬೇಕು. ಈ ನಿಟ್ಟಿನಲ್ಲಿ ಮಹಾಸಭಾ ಕಾರ್ಯಪ್ರವೃತ್ತವಾಗಿ ಹಲವು ಉಪಸಮಿತಿಗಳು ಹಾಗೂ ತಾಲ್ಲೂಕು ಉಪಸಮಿತಿಗಳನ್ನು ನೇಮಿಸಿಕೊಂಡು ಸಂಘಟನೆಗೆ ಬಲ ತುಂಬಲು ಸಂಪೂರ್ಣ ಸ್ವಾತಂತ್ರ್ಯವನ್ನು ನೀಡಲಾಗಿದೆ. ಅದರಲ್ಲಿ ಪ್ರಮುಖವಾಗಿ ರಾಜ್ಯ ಮಟ್ಟದ ಮಹಿಳಾ ಘಟಕ, ಯುವ ಘಟಕಗಳಿಗೆ ಚಾಲನೆ ನೀಡಿ ಸಂಚಾಲಕರನ್ನು ನೇಮಿಸಲಾಗಿದೆ. ಅದೇ ರೀತಿ ಸದಸ್ಯತ್ವ ನೋಂದಣಿ ಹಾಗೂ ಪರಿಷ್ಕರಣೆ ಸಮಿತಿ, ಕಟ್ಟಡ ಸಮಿತಿ, ಆರೋಗ್ಯ ಮತ್ತು ವೈದ್ಯಕೀಯ ಸಮಿತಿ, ವಿದ್ಯಾವಾಸಿನಿ ವಿಪ್ರ ವಸತಿ ನಿಲಯ ಮೇಲ್ವಿಚಾರಣ ಸಮಿತಿ, ವಧು-ವರಾನ್ವೇಷಣಾ ವಿಭಾಗ, ಕಾನೂನು ಸಲಹಾ ಸಮಿತಿಗಳನ್ನಾಗಿ ವಿವಿಧ ಉಸ್ತುವಾರಿ ಸಮಿತಿಗಳನ್ನು ನೇಮಿಸಲಾಗಿದೆ.**

ಮಹಾಸಭೆಯ ಪ್ರಥಮ ಕಾರ್ಯಕಾರಿಣಿ ಸಭೆಯಲ್ಲಿ ಮಹಾಸಭೆಯ ಬೈಲಾವನ್ನು ಪರಿಷ್ಕರಿಸಲು ವಿಷಯವನ್ನು ಮಂಡಿಸಿ ಉಪಸಮಿತಿಯನ್ನು ರಚಿಸುವ ನಿರ್ಧಾರ ಕೈಗೊಳ್ಳಲಾಗಿತ್ತು. ಅದರಂತೆ ಉಪಸಮಿತಿಯನ್ನು ರಚಿಸಿ ದಿನಾಂಕ 15-02-2022 ರಂದು ಉಪಸಮಿತಿಯು ಸಭೆ ಸೇರಿ ಸುದೀರ್ಘ ಚರ್ಚೆಯನ್ನು ಮಾಡಲಾಗಿ, ಆ ಸಭೆಯಲ್ಲಿ ತಾಲ್ಲೂಕು ಮತ್ತು ಜಿಲ್ಲಾ ಸಂಘಗಳ ಸಭೆಯ ಪದಾಧಿಕಾರಿಗಳನ್ನು ಕರೆದು ಬೈಲಾ ತಿದ್ದುಪಡಿ ಬಗ್ಗೆ ಅವರ ಅಭಿಪ್ರಾಯವನ್ನು ಸಂಗ್ರಹಿಸಿ ಉಪಸಮಿತಿಯು ಮತ್ತೆ ಸಭೆ ಸೇರಿ ಬೈಲಾ ತಿದ್ದುಪಡಿ ಬಗ್ಗೆ ಶಿಫಾರಸ್ಸು ಮಾಡಲು ತೀರ್ಮಾನಿಸಿದೆ.

ಕರ್ನಾಟಕದಾದ್ಯಂತ ಸದಸ್ಯತ್ವ ಅಭಿಯಾನವನ್ನು ಕಾರ್ಯಕಾರಿ ಸಮಿತಿ ಸದಸ್ಯರು ಹಾಗೂ ಸಂಘಟನಾ ಕಾರ್ಯದರ್ಶಿಗಳು ಹಮ್ಮಿಕೊಂಡಿದ್ದಾರೆ. ಎಲ್ಲೆಡೆ ಸಂಘಟನೆ ಹಾಗೂ ಸದಸ್ಯತ್ವ ಅಭಿಯಾನದ ಬಗ್ಗೆ ಅಭೂತಪೂರ್ವ ಬೆಂಬಲ ದೊರೆಕಿರುವುದು ಸಂತಸದ ಸುದ್ದಿ.

ಮಹಾಸಭೆಯ ನಿಯೋಗವು ದಿನಾಂಕ 22-02-2022ರಂದು ಕರ್ನಾಟಕ ಸರ್ಕಾರದ ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ ಬೊಮ್ಮಾಯಿಯವರನ್ನು ಭೇಟಿಯಾಗಿ ಮಹಾಸಭಾ ನಿರ್ಮಿಸಲು ಉದ್ದೇಶಿಸಿರುವ ಸಮುದಾಯ ಭವನಕ್ಕೆ ಸರಕಾರದ ವತಿಯಿಂದ ಅನುದಾನಕ್ಕೆ ವಿನಂತಿಸಲಾಯಿತು. ಆರ್ಥಿಕವಾಗಿ ಹಿಂದುಳಿದ ಬ್ರಾಹ್ಮಣ ವರ್ಗಕ್ಕೆ ಶೈಕ್ಷಣಿಕ ಮೀಸಲಾತಿಯ ಅನುಷ್ಠಾನಕ್ಕೆ ಸೂಕ್ತ ಕ್ರಮಕೈಗೊಳ್ಳುವಂತೆ ಒತ್ತಾಯಿಸಲಾಯಿತು. ಮುಖ್ಯಮಂತ್ರಿಗಳು ಈ ಎಲ್ಲಾ ವಿಷಯಗಳ ಬಗ್ಗೆ ಸಕಾರಾತ್ಮಕವಾಗಿ ಸ್ಪಂದಿಸಿ, ಅಗತ್ಯ ಕ್ರಮಗಳ ಬಗ್ಗೆ ಭರವಸೆಯನ್ನು ನೀಡಿರುತ್ತಾರೆ.

ಇದೇ ವಿಪ್ರನುಡಿಯು ಆಂಗ್ಲ ಭಾಷೆಯಲ್ಲೂ ಬರುವಂತಾಗ-ಬೇಕೆಂದು ಹಲವರು ಅಪೇಕ್ಷಿಸಿದ್ದಾರೆ. ಈ ನಿಟ್ಟಿನಲ್ಲಿ ತತ್‌ಕ್ಷಣಕ್ಕೆ ಕಾರ್ಯಪ್ರವೃತ್ತರಾಗಿ ಹಿರಿಯ ವಿದ್ವಾಂಸರಾದ ಸತ್ಯೇಶ್ ಬೆಳ್ಳೂರ್ ಅವರ ನೇತೃತ್ವದಲ್ಲಿ ವಿಪ್ರನುಡಿ English Journal ಸಿದ್ದವಾಗುತ್ತದೆ. ಮೊದಲಿಗೆ ವಿಪ್ರನುಡಿಯ ಆಂಗ್ಲ ಅವತರಣಿಕೆ "ಇ-ಪ್ರತಿ" ಯ ರೂಪದಲ್ಲಿ ಲಭ್ಯವಾಗಲಿದೆ. ನಂತರ ಸೂಕ್ತ ಸಮಯದಲ್ಲಿ ಮುದ್ರಿತ ಪ್ರತಿಯ ಅಗತ್ಯತೆಗಳ ಬಗ್ಗೆ ನಿರ್ಧಾರ ಕೈಗೊಳ್ಳ ಲಾಗುವುದು.

ಹೀಗೆ ವಿನೂತನ ಸಾಧ್ಯತೆಗಳಿಗೆ ಮಹಾಸಭಾ ತೊಡಗಿಸಿ ಕೊಳ್ಳುತ್ತಿದೆ. ನಿಮ್ಮ ಸಹಕಾರ ಹೀಗೆ ಮುಂದುವರಿಯಲಿ, ಹಿಂದೆಂದಿಗಿಂತಲೂ, ಈಗಿನ ಪ್ರಕ್ಷುಬ್ಧ ವಾತಾವರಣದಲ್ಲಿ ಸಂಘಶಕ್ತಿ ಮತ್ತು ದೇಶಪ್ರೇಮಕ್ಕೆ ಅಗ್ರಪಂಕ್ತಿಯ ಅವಶ್ಯಕತೆಯಿದೆ ಎಂದು ಭಾವಿಸಿದ್ದೇನೆ. ಮುಂದಿನ ಸಂಚಿಕೆಯಲ್ಲಿ ಮಹಾಸಭಾದ ಇನ್ನಷ್ಟು ಚಟುವಟಿಕೆಗಳ ಪ್ರಗತಿಯೊಂದಿಗೆ ಮತ್ತೆ ಭೇಟಿಯಾಗೋಣ.

**ಸರ್ವೇಜನಾಃ ಸುಖಿನೋಭವಂತು,**

**-ಅಶೋಕ ಹಾರನಹಳ್ಳಿ**

# ಸಂಪಾದಕೀಯ

ಆತ್ಮೀಯ ವಿಪ್ರಬಂಧುಗಳೇ,

ಮಾರ್ಚ್ 8, ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ. ಜಗತ್ತಿನಾದ್ಯಂತ ಮಹಿಳೆಯರು ಈ ದಿನವನ್ನು ಅತ್ಯಂತ ಸಂಭ್ರಮದಿಂದ ಆಚರಿಸುತ್ತಾರೆ. ಮಹಿಳೆಗೆ ನಮ್ಮ ಭಾರತೀಯ ಪರಂಪರೆಯಲ್ಲಿ ಮಹತ್ವದ ಸ್ಥಾನವನ್ನು ನೀಡಲಾಗಿದೆ. ಮಹಿಳೆಯು ಜಗತ್ತಿನ ಆದಿ ಸ್ವರೂಪ. ನಮ್ಮ ವೇದಗಳು, ವೀರಕಾವ್ಯಗಳು, ಪುರಾಣಗಳು, ಜಾನಪದ ಕಥೆಗಳಲ್ಲಿ ಮಹಿಳೆಯರ ಶಕ್ತಿ, ಸಹನೆ, ತ್ಯಾಗಗಳ ಬಗ್ಗೆ ಅಪಾರ ಮಾಹಿತಿ ಇದೆ. ಕ್ಷಮೆಯಲ್ಲಿ ಅವಳು ಸಹನಾಶೀಲಳಾದ ಭೂಮಿಯಂತೆ (**ಕ್ಷಮಯಾ ಧರಿತ್ರೀ** ।). ಸ್ತ್ರೀ ಎಂಬ ಪದದಲ್ಲೇ ಸತ್ತ್ವ, ರಜಸ್, ತಮೋಗುಣ ಗಳನ್ನು ಪ್ರೇರೇಪಿಸುವವಳು ಎಂಬ ಮಾಹಿತಿ ಇದೆ. (**ಸತ್ವಂ ರಜಃ ತಮಃ ಈರಯತಿ ಅಥವಾ ಪ್ರೇರಯತಿ ಇತಿ ಸ್ತ್ರೀ** ।) ವೇದಕಾಲದ ಋಷೀಕರಾದ ಸಂಧ್ಯಾ, ಅಪಾಲ ಬ್ರಹ್ಮಚಾರಿಣಿಯರಾಗಿದ್ದು ತಪಸ್ಸನ್ನು ಮಾಡಿ ಮೋಕ್ಷ ಪಡೆದವರು. ಛಾಂದೋಗ್ಯ ಉಪನಿಷತ್ತಿನ ಯಾಜ್ಞವಲ್ಕ್ಯರ ಪತ್ನಿಯಾದ ಗಾರ್ಗಿಯು ತನ್ನ ಪತಿಯೊಂದಿಗೆ ತತ್ತ್ವಶಾಸ್ತ್ರ ಚರ್ಚೆಯಲ್ಲಿ ಸರಿಸಮವಾಗಿ ಭಾಗವಹಿಸಿದ್ದರ ಮಾಹಿತಿ ಇದೆ. ಮಹಾಪತಿವ್ರತೆಯರಾದ ಅನಸೂಯಾ, ಅರುಂಧತಿ, ಸೀತಾ ಮುಂತಾದವರು ಭಾರತೀಯ ಸ್ತ್ರೀತ್ವದ ಪರಮೋಚ್ಚ ಸಂಕೇತವಾಗಿ ಆದರ್ಶಪ್ರಿಯರಾಗಿದ್ದಾರೆ. ಆದ್ದರಿಂದಲೇ ವಾಲ್ಮೀಕಿ ಮಹರ್ಷಿಗಳು ರಾಮಾಯಣವನ್ನು ಬರೆದಾಗ ಇದು ರಾಮನ ಚರಿತ್ರೆಯಷ್ಟೇ ಅಲ್ಲ ಮಹತ್ತರವಾದ ಸೀತೆಯ ಚರಿತೆಯೂ ಹೌದು ಎಂದು ನುಡಿದಿದ್ದಾರೆ (**ಸೀತಾಯಾಃ ಚರಿತಂ ಮಹತ್**।)

ಜಗದ್ಗುರು ಶಂಕರಾಚಾರ್ಯರ ಪ್ರಕಾರ ಎಂದಾದರೂ ಒಂದು ಪಕ್ಷ ಕೆಟ್ಟಪುತ್ರನು ಹುಟ್ಟಬಹುದು. ಆದರೆ ಎಂದೂ ಕೆಟ್ಟ ತಾಯಿಯು ಜನಿಸುವುದಿಲ್ಲ. (**ಕುಪುತ್ರೋ ಜಾಯೇತ ಕ್ವಚಿದಪಿ ಕುಮಾತಾ ನ ಭವತಿ**।) ಆದ್ದರಿಂದಲೇ ಶಂಕರಾಚಾರ್ಯರು ಕೇದಾರನಾಥದಲ್ಲಿ ಇದ್ದವರು ಯೋಗದ ಮೂಲಕ ತಮ್ಮ ಪ್ರೀತಿಪಾತ್ರ ತಾಯಿಯು ಮರಣಶಯ್ಯೆಯಲ್ಲಿ ಇರುವುದನ್ನು ತಿಳಿದು ಕಾಲಡಿಗೆ ಧಾವಿಸಿ ಬಂದು ಎಲ್ಲ ದೇವರನ್ನು ತಾಯಿಗೆ ತೋರಿಸಿ ಮುಕ್ತಿಗೆ ಸಹಾಯ ಮಾಡಿದರು. ತಾಯಿಗಿಂತ ಶ್ರೇಷ್ಠ ದೇವತೆ ಇಲ್ಲ ಎಂದು ಲೋಕಕ್ಕೆ ಸಾರಿದರು. (**ನ ಮಾತುಃ ಪರದೇವತಾ** ।) ತೈತ್ತಿರೀಯ ಉಪನಿಷತ್ತಿನಲ್ಲಿ ತಾಯಿಗೆ ಮೊದಲ ಸ್ಥಾನವನ್ನು ನೀಡಲಾಗಿದೆ. ತಾಯಿಯೇ ದೇವರು ಆಗಲಿ ಎಂಬ ಆಶಯವಿದೆ (**ಮಾತೃದೇವೋ ಭವ** ।)

ಹೀಗೆ ಸ್ತ್ರೀಯರಿಗೆ ಉಜ್ವಲ ಸ್ಥಾನವನ್ನು ನೀಡಿರುವ ಭಾರತ ದೇಶದಲ್ಲಿ ಸ್ವಾತಂತ್ರ್ಯದ ನಂತರ ಲಭಿಸಬೇಕಾದ್ದು ಬಹಳಷ್ಟಿದೆ. ಭಾರತ ಸರ್ಕಾರದ ಸಂಸತ್ ಸದಸ್ಯರಲ್ಲಿ ಶೇಕಡ 33 ಸ್ತ್ರೀಯರಿಗೆ ಮೀಸಲನ್ನು ನೀಡಬೇಕಾಗಿದೆ. ಸ್ತ್ರೀಯರ ಮೇಲೆ ದೌರ್ಜನ್ಯಗಳು ಹೆಚ್ಚುತ್ತಿವೆ. ಇವುಗಳಿಗೆ ಸಂಪೂರ್ಣವಾಗಿ ಕಡಿವಾಣ ಹಾಕಬೇಕಾಗಿದೆ. ಇದಕ್ಕಾಗಿ ಬಹಳ ಕಠಿಣವಾದ ಶಾಸನಗಳನ್ನು ಕೇಂದ್ರ, ರಾಜ್ಯ ಸರ್ಕಾರಗಳು ಜಾರಿಗೊಳಿಸಬೇಕಾಗಿದೆ. ಸರ್ಕಾರೇತರ ಸಂಸ್ಥೆಗಳು ಈ ದಿಶೆಯಲ್ಲಿ ನಿರಂತರ ಪ್ರಯತ್ನ ಮಾಡಬೇಕಾಗಿದೆ.

ಬಹಳ ಕಾಲದಿಂದಲೂ ವಿಪ್ರ ಮಹಿಳೆಯರು ಹಲವಾರು ಸಾಮಾಜಿಕ, ಸಾಹಿತ್ಯಕ, ದೇಶಕಟ್ಟುವ ಕೆಲಸಗಳಲ್ಲಿ ಮುಂದಿದ್ದಾರೆ. ಮನೆ-ಕಛೇರಿ, ಗೃಹಿಣಿ ಉದ್ಯೋಗ ಕೆಲಸಗಳನ್ನು ಒಟ್ಟಿಗೆ ಸಮರ್ಥವಾಗಿ ನಿರ್ವಹಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಹೊಸದಾಗಿ ರೂಪುಗೊಂಡಿರುವ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಮಹಿಳಾ ಸಂಘವು ಸನ್ಮಾನ್ಯ ಅಧ್ಯಕ್ಷರಾದ ಅಶೋಕ ಹಾರನಹಳ್ಳಿ ಅವರ ಮಾರ್ಗದರ್ಶನದಲ್ಲಿ ಹಲವಾರು ಚಟುವಟಿಕೆಗಳನ್ನು ಹಮ್ಮಿಕೊಂಡು ಕಾರ್ಯಪ್ರವೃತ್ತವಾಗಿದೆ. ಇದಕ್ಕೆ ಮಹಿಳಾ ಪದಾಧಿಕಾರಿಗಳಿಗೆ ಹಾರ್ದಿಕ ಅಭಿನಂದನೆಗಳು. ಮುಂಬರುವ ದಿನಗಳಲ್ಲಿ ವಿಪ್ರಸ್ತ್ರೀ ಶಕ್ತಿ ಜಾಗೃತವಾಗಿ ಸರ್ವತೋಮುಖ ಬೆಳವಣಿಗೆ ಉಂಟಾಗಲಿ ಎಂದು ನಮ್ಮೆಲ್ಲರ ಹಾರೈಕೆ.

**ವಂದನೆಗಳೊಂದಿಗೆ,**

ತಮ್ಮ ವಿಶ್ವಾಸಿ,

**ಪ್ರೊ. ॥ಎಂ.ಕೆ. ಶ್ರೀಧರ್**

**ಸೂಚನೆ : ವಿಪ್ರನುಡಿ ಪತ್ರಿಕೆಯಲ್ಲಿ ಮುದ್ರಿತವಾಗುವ ಲೇಖನಗಳಲ್ಲಿ ಅಭಿವ್ಯಕ್ತವಾಗುವ ಅಭಿಪ್ರಾಯಗಳು ಲೇಖಕರ ವೈಯಕ್ತಿಕ ಅಭಿಪ್ರಾಯಗಳೇ ಹೊರತು ಅವು ಪತ್ರಿಕೆಯ ಸಂಪಾದಕರ, ಪ್ರಕಾಶಕರ - ಮುದ್ರಕರ ಅಭಿಪ್ರಾಯವಲ್ಲ. ವಿಪ್ರನುಡಿಯಲ್ಲಿ ಪ್ರಕಟವಾಗುವ ಯಾವುದೇ ಜಾಹೀರಾತುಗಳಿಗೆ (ರಿಯಲ್ ಎಸ್ಟೇಟ್, ಜ್ಯೋತಿಷ್ಯ, ವಾಣಿಜ್ಯಕ್ಕೆ ಸಂಬಂಧಿಸಿದ್ದು) ಮಹಾಸಭೆಯು ಜವಾಬ್ದಾರರಾಗಿರುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ಜಾಹಿರಾತುದಾರರನ್ನೇ ಸಂಪರ್ಕಿಸಬೇಕು.**

**-ಸಂಪಾದಕ ಮಂಡಳಿ**

# ಮಹಾಸಭೆಯ ನಿಯೋಗದಿಂದ ಮುಖ್ಯಮಂತ್ರಿ ಭೇಟಿ.

**ಬೆಂಗಳೂರು :** ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಇಂದು ಬೆಂಗಳೂರಿನಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷ ಹಾಗೂ ಮಾಜಿ ಅಡ್ವೋಕೇಟ್ ಜನರಲ್ ಅಶೋಕ್ ಹಾರನಹಳ್ಳಿ ನೇತೃತ್ವದ ನಿಯೋಗ ಭೇಟಿ ಮಾಡಿ ಮಾತುಕತೆ ನಡೆಸಿತು.

ಈ ಸಂದರ್ಭದಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ ನಾಗೇಶ್, ಶಾಸಕರಾದ ರವಿಸುಬ್ರಮಣ್ಯ , ಉದಯ್ ಗರುಡಾಚಾರ್, ವಿಧಾನ ಪರಿಷತ್ ಸದಸ್ಯ ಯು.ಬಿ. ವೆಂಕಟೇಶ್, ಮಹಾಸಭಾ ಸಂಘಟನಾ ಕಾರ್ಯದರ್ಶಿ ರಾಘವೇಂದ್ರ ಭಟ್, ಹಿರಿಯ ಪದಾಧಿಕಾರಿ ರಾಜೇಂದ್ರ ಪ್ರಸಾದ್ ಮತ್ತು ಇತರರು ಉಪಸ್ಥಿತರಿದ್ದರು.

ಮಹಾಸಭಾ ನಿರ್ಮಿಸಲು ಉದ್ದೇಶಿಸಿರುವ ಸಮುದಾಯ ಭವನಕ್ಕೆ ಸರಕಾರದ ವತಿಯಿಂದ ಅನುದಾನ ಬಿಡುಗಡೆ ಮಾಡುವುದೂ ಸೇರಿದಂತೆ ವಿವಿಧ ಬೇಡಿಕೆಗಳ ಬಗ್ಗೆ ಮುಖ್ಯಮಂತ್ರಿಗಳಿಗೆ ಈ ಸಂದರ್ಭದಲ್ಲಿ ಮನವಿ ಸಲ್ಲಿಸಲಾಯಿತು.

ಆರ್ಥಿಕವಾಗಿ ಹಿಂದುಳಿದ ವರ್ಗಗಳಿಗೆ ಶೈಕ್ಷಣಿಕ ಮೀಸಲಾತಿ ಸೌಲಭ್ಯ ಅನುಷ್ಠಾನಕ್ಕೆ ಅಧ್ಯಕ್ಷ ಅಶೋಕ್ ಹಾರನಹಳ್ಳಿ ಇದೇ ಸಂದರ್ಭದಲ್ಲಿ ಮುಖ್ಯಮಂತ್ರಿಗಳನ್ನು ವಿನಂತಿಸಿದರು.

**ಸಿಎಂ ಭರವಸೆ :** ನಿಯೋಗದ ಮನವಿಗೆ ಉತ್ತರಿಸಿದ ಮುಖ್ಯಮಂತ್ರಿಗಳು ಮಹಾಸಭಾದ ಸಮುದಾಯ ಭವನದ ನಿರ್ಮಾಣಕ್ಕೆ ಅನುದಾನ ಬಿಡುಗಡೆಯ ಭರವಸೆ ನೀಡಿದರಲ್ಲದೇ ಆರ್ಥಿಕವಾಗಿ ಹಿಂದುಳಿದ ವರ್ಗಗಳಿಗೆ ಶೈಕ್ಷಣಿಕ ಕ್ಷೇತ್ರದಲ್ಲಿ ಮೀಸಲಾತಿ ಕಲ್ಪಿಸಲು ಅಗತ್ಯಕ್ರಮ ಕೈಗೊಳ್ಳುವ ಭರವಸೆ ನೀಡಿದರು.

## ವಿಪ್ರನುಡಿಗೆ ಮರುಚಾಲನೆ

**ದಿನಾಂಕ 11–02–2022 ಮಹಾಸಭಾದ ಕೇಂದ್ರ ಕಛೇರಿ ಗಾಯತ್ರಿ ಭವನದಲ್ಲಿ ನಡೆದ ಸರಳ ಸಮಾರಂಭದಲ್ಲಿ ಬಸವನಗುಡಿಯ ಶಾಸಕರಾದ ಶ್ರೀ ರವಿಸುಬ್ರಮಣ್ಯ ಅವರು ವಿಪ್ರನುಡಿ ಪತ್ರಿಕೆಗೆ ಮರುಚಾಲನೆ ನೀಡಿದರು.** ಈ ಸಂದರ್ಭದಲ್ಲಿ ಮಹಾಸಭಾ ಅಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿ ಅವರು ಮಾತನಾಡಿ, ಒಂದು ಪ್ರದೇಶದ ಜನರ ಸಂಸ್ಕೃತಿ ಅರಿಯಬೇಕೆಂದರೆ ಆ ಭಾಗದಲ್ಲಿ ಸಿಗುವ ಪತ್ರಿಕೆ ನೋಡಿದರೆ ಆ ಭಾಗದ ಜನರ ಒಟ್ಟಾರೆ ಅಭಿಪ್ರಾಯ ಮತ್ತು ಅಭಿರುಚಿಗಳ ಪರಿಚಯವಾಗುತ್ತದೆ ಎಂದು ವಿವರಿಸುತ್ತಾ ಮುಂದಿನ ದಿನಗಳಲ್ಲಿ ಕರ್ನಾಟಕದ ಉದ್ದಗಲಕ್ಕೂ ವಾಸವಾಗಿರುವ ವಿಪ್ರರ ಸಂಸ್ಕೃತಿ ಮತ್ತು ವಿಪ್ರ ಸಂಸ್ಕೃತಿ ಪೂರಕ ಲೇಖನಗಳನ್ನು ಮನೆಮನೆಗಳಿಗೆ ಪರಿಚಯಿಸುವ ಮುಖವಾಣಿಯಾಗಿ ವಿಪ್ರನುಡಿ ಹೊರಹೊಮ್ಮಲಿದೆ ಎಂದು ತಿಳಿಸಿದರು. ಅಷ್ಟೇ ಅಲ್ಲ ಇದರ "ಇ – ಪತ್ರಿಕೆ" ಯು ಇದೇ ಬರುವ 16 ಫೆಬ್ರವರಿಯಂದು ಎಲ್ಲರಿಗೂ ಲಭ್ಯವಾಗಲಿದೆ ಎಂದು ತಿಳಿಸಿದರು ಮತ್ತು ವಿಪ್ರನುಡಿಯ ಇಂಗ್ಲಿಷ್ ನಲ್ಲಿಯೂ ಕೂಡ ಅತೀಶೀಘ್ರದಲ್ಲಿ website ನಲ್ಲಿ ಲಭ್ಯವಾಗಲಿದೆ ಎಂದು ತಿಳಿಸಿದರು ಹಾಗು ಇದು ಕನ್ನಡದ ಯಥಾವತ್ ತರ್ಜುಮೆಯಾಗಿರದೆ ಸ್ವತಂತ್ರ ಇಂಗ್ಲಿಷ್ ಇ–ಪ್ರತಿ (ಡಿಜಿಟಲ್) ಆಗಿ ಹೊರಹೊಮ್ಮಲಿದೆ ಎಂದು ತಿಳಿಸಿದರು.



## ಅಧ್ಯಕ್ಷರಿಂದ ಉನ್ನತ ಶಿಕ್ಷಣ ಸಚಿವರ ಭೇಟಿ

ಕರ್ನಾಟಕ ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯ ಸಚಿವರಾದ ಡಾ॥ ಸಿ.ಎನ್. ಅಶ್ವಥ್ ನಾರಾಯಣ್ ಅವರನ್ನು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಅಧ್ಯಕ್ಷರಾದ ಶ್ರೀ ಅಶೋಕ್ ಹಾರನಹಳ್ಳಿ ಅವರು ಭೇಟಿಯಾಗಿ ಸಮುದಾಯದ ಅಭಿವೃದ್ಧಿ ಕಾರ್ಯಗಳಿಗೆ ಮುಂದಿನ ಬಜೆಟ್‌ನಲ್ಲಿ ಸರ್ಕಾರದಿಂದ ನೆರವನ್ನು ಕೋರಿದರು. ಸಚಿವರು ಈ ಸಂದರ್ಭದಲ್ಲಿ ಸರ್ಕಾರದಿಂದ ಸಮುದಾಯದ ಅಭಿವೃದ್ಧಿಗೆ ಎಲ್ಲಾ ರೀತಿಯ ನೆರವನ್ನು ಒದಗಿಸಲು ಸಹಕಾರ ನೀಡುವುದಾಗಿ ಹೇಳಿದರು ಹಾಗೂ ವೈಯಕ್ತಿಕವಾಗಿ ಸಹ ಸಮುದಾಯದ ಅಭಿವೃದ್ಧಿಗೆ ಸಹಕಾರ ನೀಡುವುದಾಗಿ ತಿಳಿಸಿದರು. ಸಚಿವರ ಭೇಟಿ ಸಂದರ್ಭದಲ್ಲಿ ಮಹಾಸಭಾದ ಉಪಾಧ್ಯಕ್ಷರಾದ ಡಿ.ವಿ. ರಾಜೇಂದ್ರ ಪ್ರಸಾದ್ ಹಾಗೂ ಹಾಸನದ ಕುಮಾರ್ ಉಪಸ್ಥಿತರಿದ್ದರು.

**ಯಾವ ಪುರುಷನು ಎಲ್ಲಾ ಬಯಕೆಗಳನ್ನು ಬಿಟ್ಟು ಆಸಕ್ತಿಯಿಲ್ಲದವನಾಗಿ, ಮಮಕಾರವಿಲ್ಲದವನಾಗಿ ಮತ್ತು ಅಹಂಕಾರರಹಿತನಾಗಿ ಸಂಚರಿಸುವನೋ ಅವನು ಶಾಂತಿಯನ್ನು ಪಡೆಯುತ್ತಾನೆ. –ಭಗವದ್ಗೀತೆ**

# ಮಹಾಸಭೆಯ ರಾಜ್ಯ ಮಹಿಳಾ ವಿಭಾಗದ ಉದ್ಘಾಟನೆ



ವಿಪ್ರ ಮಹಿಳಾ ಸಂಘಟನೆ ಬಲಯುತವಾಗುವ ಅವಶ್ಯಕತೆ ಇದ್ದು ಪ್ರತಿ ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡು ಸಂಘಟನೆ ಮಾಡಬೇಕೆಂದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷ ಅಶೋಕ್ ಹಾರನಹಳ್ಳಿ ಕರೆ ನೀಡಿದರು. ಶನಿವಾರ ಸಂಜೆ ನಗರದ ಗಾಯತ್ರಿ ಭವನದಲ್ಲಿ ನಡೆದ ಸಮಾರಂಭದಲ್ಲಿ ಮಹಾಸಭಾದ ಮಹಿಳಾ ಘಟಕದ ಉದ್ಘಾಟನೆ ನೆರವೇರಿಸಿ ಮಾತನಾಡಿದ ಅವರು ವಿಪ್ರ ಮಹಿಳಾ ಘಟಕ ಸಂಘಟನಾತ್ಮಕವಾಗಿ ಸ್ವಾವಲಂಬನೆ ಸಾಧಿಸುವುದರ ಜತೆಗೇ ರಾಜ್ಯದ ಉದ್ದಗಲಕ್ಕೂ ವಿಸ್ತರಿಸುವ ಮೂಲಕ ಸಂಘಟನೆ ಬಲಯುತಗೊಳ್ಳಬೇಕೆಂದರು.

ಆರ್ಥಿಕವಾಗಿ ಹಿಂದುಳಿದ ಮತ್ತು ಸಂಕಷ್ಟದಲ್ಲಿರುವ ಸಮಾಜದ ಸಂತ್ರಸ್ತ ಮಹಿಳೆಯರ ನೆರವಿಗೆ ಯೋಜನೆಗಳನ್ನು ಜಾರಿಗೊಳಿಸಲು ಮಹಾಸಭಾ ಚಿಂತನೆ ನಡೆಸಿದೆ. ಈಗಾಗಲೇ ಹಲವು ಯೋಜನೆಗಳು ಅನುಷ್ಠಾನ ಹಂತದಲ್ಲಿವೆ. ವಿದೇಶಗಳಲ್ಲಿ ನೆಲೆಸಿರುವ ಸಮುದಾಯದ ಸ್ಥಿತಿವಂತರೂ ಮಹಾಸಭೆಯ ಚಟುವಟಿಕೆಗಳಿಗೆ ನೆರವು ನೀಡುವ ಭರವಸೆ ನೀಡಿದ್ದಾರೆ ಎಂದು ಹೇಳಿದರು.

ಸನಾತನ ಧರ್ಮದಲ್ಲಿ ಮಹಿಳೆಯರಿಗೆ ಪೂಜ್ಯ ಸ್ಥಾನವಷ್ಟೇ ಅಲ್ಲ ಪುರುಷನ ಪ್ರತಿ ನಿರ್ಧಾರಗಳಲ್ಲೂ ಮಹಿಳೆಯ ಪಾಲ್ಗೊಳ್ಳುವಿಕೆಗೆ ಅವಕಾಶ ನೀಡಲಾಗಿದೆ. ಕುಟುಂಬ ವ್ಯವಸ್ಥೆಯ ಅನೇಕ ಧಾರ್ಮಿಕ ವಿಧಿಗಳ ಆಚರಣೆಗಳ ಸಂದರ್ಭದಲ್ಲಿ ಪತ್ನಿಯ ಪಾಲ್ಗೊಳ್ಳುವಿಕೆ ಕಡ್ಡಾಯವಾಗಿದೆ ಎಂದರು. ತಾವು ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡ ಕಳೆದ ಎರಡು ತಿಂಗಳ ಅವಧಿಯಲ್ಲಿ ಮಹಾಸಭೆಯ ಚಟುವಟಿಕೆಗಳಿಗೆ ಅನೇಕ ದಾನಿಗಳು ನೆರವು ನೀಡುವ ಭರವಸೆ ನೀಡಿದ್ದಾರೆ. ಈಗಾಗಲೇ 25 ಲಕ್ಷಕ್ಕೂ ರೂ. ಹೆಚ್ಚು ಹಣ ದೇಣಿಗೆಯಾಗಿ ಬಂದಿದೆ ಎಂದು ಪ್ರಕಟಿಸಿದರು. ಇದಕ್ಕೂ ಮುನ್ನ ಮಾತನಾಡಿದ ಮಹಾಸಭಾದ ಮಹಿಳಾ ಘಟಕದ ಸಂಚಾಲಕಿ ಶ್ರೀಮತಿ ರೂಪಾ ಶಾಸ್ತ್ರಿ ಆರ್ಥಿಕವಾಗಿ ಸಂಕಷ್ಟದಲ್ಲಿರುವ ವಿಪ್ರ ಮಹಿಳೆಯರಿಗೆ ನೆರವು ನೀಡಲು ಉದ್ದೇಶಿಲಾಗಿದ್ದು ಇದಕ್ಕಾಗಿ ಪ್ರತ್ಯೇಕ ವ್ಯವಸ್ಥೆಯೊಂದನ್ನೂ ಜಾರಿಗೊಳಿಸುವುದಾಗಿ ತಿಳಿಸಿದರು. ಮಹಿಳೆಯರು ತಯಾರಿಸುವ ಗೃಹ ಉಪಯೋಗಿ ಉತ್ಪನ್ನಗಳ ಮಾರಾಟಕ್ಕೆ ವ್ಯವಸ್ಥೆ ಕಲ್ಪಿಸುವುದಾಗಿಯೂ ಭರವಸೆ ನೀಡಿದರು.

## ವಿಪ್ರ ಮಹಿಳೆಯರ ರ್‍ಯಾಲಿ

ಇದೇ ತಿಂಗಳ ಮಾರ್ಚ್ 13 ರಂದು ಬೆಂಗಳೂರಿನಲ್ಲಿ ವಿಪ್ರ ಮಹಿಳೆಯರ ಸಂಘಟನೆಯ ಬಗ್ಗೆ ಜಾಗೃತಿ ಮೂಡಿಸಲು ಬೈಕ್ ರ್‍ಯಾಲಿ ನಡೆಸಲು ಉದ್ದೇಶಿಸಿದ್ದು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕೆಂದು ಮನವಿ ಮಾಡಿದರು. ಸಮಾರಂಭದಲ್ಲಿ ಉಪಸ್ಥಿತರಿದ್ದ ಸಮಾಜ ಸೇವಕಿ ಶ್ರೀಮತಿ ಮೇದಿನಿ ಗರುಡಾಚಾರ್ ಅವರು ವಿಪ್ರ ಮಹಿಳಾ ಸಂಘಟನೆ ಹೆಚ್ಚು ಬಲಯುತಗೊಳ್ಳಬೇಕೆಂದು ಕರೆ ನೀಡಿದರು.

ಸಮಾರಂಭದಲ್ಲಿ ಮಹಿಳಾ ವಿಭಾಗದ ಸಂಚಾಲಕರಾದ ಶ್ರೀಮತಿ ರೂಪಾಶಾಸ್ತ್ರಿ, ಮಹಾಸಭಾದ ಮಾಜಿ ಅಧ್ಯಕ್ಷ ಡಾ. ಎಂ.ಆರ್.ವಿ. ಪ್ರಸಾದ್, ಮುಖಂಡರಾದ ಹೆಚ್.ಎನ್. ಹಿರಿಯಣ್ಣಸ್ವಾಮಿ, ರಾಜೇಂದ್ರ ಪ್ರಸಾದ್, ಪುರುಷೋತ್ತಮ್, ರಾಜ್ಯ ಸಂಘಟನಾ ಕಾರ್ಯದರ್ಶಿ ಡಾ॥ ರಾಘವೇಂದ್ರ ಭಟ್ ಉಪಸ್ಥಿತರಿದ್ದು ಶುಭ ಹಾರೈಸಿದರು. ಶ್ರೀಮತಿ ಸಾವಿತ್ರಿ ರಮೇಶ್ ಸ್ವಾಗತಿಸಿದರು. ವಿವಿಧ ಜಿಲ್ಲೆಗಳಿಂದ ಆಗಮಿಸಿದ್ದ ಮಹಿಳಾ ಪ್ರತಿನಿಧಿಗಳು ಅಧ್ಯಕ್ಷ ಅಶೋಕ ಹಾರನಹಳ್ಳಿಯವರನ್ನು ಇದೇ ಸಂದರ್ಭದಲ್ಲಿ ಸನ್ಮಾನಿಸಿದರು.

## ಉದಾರ ದೇಣಿಗೆ ನೀಡಲು ಮನವಿ

**ಸನ್ಮಾನ್ಯ ಅಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿಯವರ ಸಮರ್ಥ ಮಾರ್ಗದರ್ಶನದಲ್ಲಿ ಗಾಯತ್ರೀ ಭವನದ ನವೀಕರಣವನ್ನು, ವಿದ್ಯಾವಾಸಿನಿ ಮಹಿಳಾ ವಿದ್ಯಾರ್ಥಿನಿಲಯದ ನವೀಕರಣವನ್ನು ಹಮ್ಮಿಕೊಳ್ಳಲಾಗುತ್ತಿದೆ. ಈ ಕಾಮಗಾರಿಗೆ ಸಾಕಷ್ಟು ಧನ ಸಂಪನ್ಮೂಲದ ಅಗತ್ಯವಿದೆ. ಈ ದಿಶೆಯಲ್ಲಿ ತಮ್ಮ ಸಹಾಯವನ್ನು ನಿರೀಕ್ಷಿಸುತ್ತೇವೆ. ಮಹಾಸಭಾದ ಅಂಗಸಂಸ್ಥೆಯಾದ ಸಪ್ತರ್ಷಿ ಫೌಂಡೇಷನ್ ಹೆಸರಿನಲ್ಲಿ ತಾವು ಚೆಕ್ ಅನ್ನು ನೀಡಬಹುದು. ತಾವು ಉದಾರವಾಗಿ ನೀಡಿದ ಹಣಕ್ಕೆ 80ಜಿ ತೆರಿಗೆ ವಿನಾಯಿತಿ ಇದೆ. ತಾವು ನಮ್ಮೊಂದಿಗೆ ಈ ಕಾರ್ಯದಲ್ಲಿ ಕೈಜೋಡಿಸಬೇಕಾಗಿ ಸವಿನಯ ಕೋರಿಕೆ.**

**ಬ್ಯಾಂಕ್ ವಿವರ**

| | | |
|---|---|---|
| ಬ್ಯಾಂಕ್ | : | ಕರ್ನಾಟಕ ಬ್ಯಾಂಕ್ |
| ಖಾತಾ ಹೆಸರು | : | ಸಪ್ತರ್ಷಿ ಫೌಂಡೇಷನ್ |
| ಖಾತಾ ಸಂಖ್ಯೆ | : | 1072500102061001 |
| ಐಎಫ್‌ಎಸ್‌ಸಿ | : | KARB0000107 |
| ಶಾಖೆ | : | ಬನಶಂಕರಿ ಎರಡನೇ ಹಂತ, ಬೆಂಗಳೂರು |

**ಹಸನ್ಮುಖಿಯಾಗಿರು, ಹಿತವಾಗಿರುವುದನ್ನೇ ಮಾತನಾಡು,
ಸತ್ಯ ಧರ್ಮಾಚರಣೆಗಳನ್ನು ಬಿಡದಿರು, ಮನಸ್ಸಿನ ಉದ್ವೇಗ ಮತ್ತು
ಭೋಗಾಕಾಂಕ್ಷೆಗಳಲ್ಲಿ ಮಿತಿಯಿರಲಿ, ಯಾವುದರಲ್ಲೂ ಅತಿರೇಖ ಬೇಡ.**

# ಮಹಾಸಭಾದ ಬೆಂಗಳೂರು ಉತ್ತರ ವಲಯದ ಪ್ರಾರಂಭೋತ್ಸವ



**ದಿನಾಂಕ 06-03-2022 ರಂದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಬೆಂಗಳೂರು ಉತ್ತರ ವಲಯದ ಉದ್ಘಾಟನಾ ಸಮಾರಂಭ ಅತ್ಯಂತ ವಿಜೃಂಭಣೆಯಿಂದ ನಡೆಯಿತು.** ಪ್ರಾರ್ಥನೆ, ಹೋಮ-ಹವನಾದಿಗಳಿಂದ ಬೆಳಗ್ಗೆ 8 ಗಂಟೆಗೆ ಪ್ರಾರಂಭವಾದ ಕಾರ್ಯಕ್ರಮ ವಿದ್ವಾನ್ ಪೂಜ್ಯ ಡಾ॥ ವಿದ್ಯಾಭೂಷಣ ಅವರ ದಾಸ ಕೀರ್ತನೆ ಮತ್ತು ದೇವರನಾಮಗಳೊಂದಿಗೆ ಸಂಜೆ ಏಳು ಗಂಟೆಗೆ ಸಂಪನ್ನಗೊಂಡಿತು. ನಂತರ ಶ್ರೀ ಜಯಸಿಂಹ ಅವರ ನೇತೃತ್ವದಲ್ಲಿ ಉತ್ತರ ವಲಯದ ಸಮಸ್ತ ವಿಪ್ರವೃಂದ, ಮಹಾಸಭಾ ಅಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿ ಅವರನ್ನು ಬಹಳ ಅದ್ದೂರಿಯಿಂದ ವಾದ್ಯಗೋಷ್ಠಿಗಳ ಮೂಲಕ ಬರಮಾಡಿಕೊಂಡು ಸಭಾ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಈ ಸಂಧರ್ಭದಲ್ಲಿ ಮಾತನಾಡಿದ ಮಹಾಸಭಾ ಅಧ್ಯಕ್ಷರು, ಮಹಾಸಭಾ ಹಂತಹಂತವಾಗಿ ನೂತನ ಕಾರ್ಯಯೋಜನೆಗಳನ್ನು ಜಾರಿಗೊಳಿಸುತ್ತಿದೆ ಎಂದು ಹೇಳಿದರು ಹಾಗೂ ಈ ಎಲ್ಲ ಯೋಜನೆಗಳು ಬೆಂಗಳೂರು ದಕ್ಷಿಣ ಹಾಗು ಉತ್ತರ ವಲಯವಷ್ಟೇ ಅಲ್ಲ, ಕರ್ನಾಟಕದ ಪ್ರತಿ ನಗರಗಳು, ಪಟ್ಟಣಗಳು ಹಾಗು ಹಳ್ಳಿಗಳಿಗೆ ತಲುಪುವಂತೆ ನೋಡಿಕೊಳ್ಳಬೇಕು ಹಾಗು ಮುಂದಿನ ದಿನಗಳಲ್ಲಿ ಪ್ರತಿಯೊಬ್ಬರೂ ಮಹಾಸಭಾದ ಸದಸ್ಯತ್ವವನ್ನು ಪಡೆದು ಮಹಾಸಭಾ ಬಲಗೊಳಿಸಬೇಕು ಎಂದು ವಿನಂತಿಸಿದರು, ಇದೇ ಸಂದರ್ಭದಲ್ಲಿ ರೈಲ್ವೆ ವಲಯದ ADGPಯಾಗಿ ಕಾರ್ಯ ನಿರ್ವಹಿಸುತ್ತಿರುವ ಹಾಗೂ POLICE COMMISSIONER OF BANGALORE ಆಗಿ ಸೇವೆ ಸಲ್ಲಿಸಿದ ಶ್ರೀ ಭಾಸ್ಕರ್ ರಾವ್ ಅವರು ಮಾತನಾಡಿ ಬ್ರಾಹ್ಮಣರು ಯಾವ ಸಂಕೋಚವಿಲ್ಲದೆ ಆತ್ಮವಿಶ್ವಾಸ ದಿಂದ ಪ್ರತಿ ರಂಗದಲ್ಲೂ ಮುಂದೆ ಬರಬೇಕು ಎಂದು ಸಭಿಕರನ್ನುದ್ದೇಶಿಸಿ ಮಾತನಾಡಿದರು.

ಇದೇ ಸಂದರ್ಭದಲ್ಲಿ ಸಮಾರಂಭಕ್ಕೆ ಆಗಮಿಸಿದ ಮಾಜಿ ಮಂತ್ರಿಗಳಾದ ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು ಅವರು ಹಾಗೂ ಶ್ರೀ ಎಚ್.ಕೆ. ಪಾಟೀಲ್ ಅವರು ಮಾತನಾಡಿ ಶ್ರೀ ಅಶೋಕ ಹಾರನಹಳ್ಳಿ ಅವರ ಮುಂದಾಳತ್ವದಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಇನ್ನೂ ಹೆಚ್ಚಿನ ಪ್ರಗತಿ ಸಾಧಿಸುವುದರಲ್ಲಿ ಯಾವುದೇ ಅನುಮಾನವಿಲ್ಲ ಎಂದು ಹೇಳಿದರು.

ಈ ಸಂದರ್ಭದಲ್ಲಿ ಸಮಾಜದ ನಾನಾ ವಿಭಾಗದ ಗಣ್ಯರು ಆಗಮಿಸಿ ಮಹಾಸಭಾದ ಯಶಸ್ಸಿಗೆ ಹಾಗು ಮಹಾಸಭಾದ ಕಾರ್ಯಕ್ರಮಗಳಿಗೆ ಕೈ ಜೋಡಿಸುವುದಾಗಿ ಭರವಸೆ ನೀಡಿದರು ಈ ಸಂದರ್ಭದಲ್ಲಿ ಮಹಾಸಭಾದ ಪದಾಧಿಕಾರಿಗಳು ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರು ಭಾಗಿಯಾಗಿದ್ದರು. ಕಾರ್ಯಕ್ರಮ ವನ್ನು ಮಹಾಸಭಾದ ಉತ್ತರ ವಲಯದದ ಪ್ರಧಾನ ಸಂಚಾಲಕ ರಾದ ಶ್ರೀ ಎಲ್. ಜಯಸಿಂಹ ಅವರು ಅತ್ಯಂತ ಅಚ್ಚುಕಟ್ಟಾಗಿ ಆಯೋಜಿಸಿದ್ದರು.

## ರಾಜ್ಯಾದ್ಯಂತ ಸದಸ್ಯತ್ವ ಅಭಿಯಾನ



**ಉಡುಪಿ :** ಉಡುಪಿ ಜಿಲ್ಲೆಯ – ಕುಂದಾಪುರದ ಶ್ರೀ ಕುಂದೇಶ್ವರ ದೇವಸ್ಥಾನದಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಅಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿ ಅವರ ಮಾರ್ಗದರ್ಶನದಂತೆ ಇಂದು ಉಡುಪಿ ಜಿಲ್ಲೆಯ ಕುಂದಾಪುರದ ಶ್ರೀ ಕುಂದೇಶ್ವರ ದೇವಸ್ಥಾನದಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಉಡುಪಿ ಜಿಲ್ಲೆಯ ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀಕೃಷ್ಣಾನಂದ ಛಾತ್ರ, ಶ್ರೀ ಚನ್ನಕೇಶವ ಭಟ್ಟರು, ಶ್ರೀ ತಾರಾನಾಥ ಹೊಳ್ಳ ಹಾಗೂ ಉಡುಪಿ ಜಿಲ್ಲೆಯ ತಾಲೂಕಿನ ಪದಾಧಿಕಾರಿಗಳ ಜೊತೆಯಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಸದಸ್ಯತ್ವ ಅಭಿಯಾನದ ಬಗ್ಗೆ ಚರ್ಚಿಸಲಾಯಿತು ಮತ್ತು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಎಲ್ಲ ಯೋಜನೆಗಳ ಬಗ್ಗೆ ಚರ್ಚಿಸಲಾಯಿತು. ಸಭೆಯನ್ನು ಬಹಳ ಅಚ್ಚುಕಟ್ಟಾಗಿ ಶ್ರೀ ಕೃಷ್ಣಾನಂದ ಛಾತ್ರರವರು ಏರ್ಪಡಿಸಿದ್ದರು.

## ಶ್ರೀರಾಮಚಂದ್ರಾಪುರಮಠ –ಉಪ್ಪಿನಂಗಡಿ

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ರಾಜ್ಯಾಧ್ಯಕ್ಷ ಶ್ರೀ ಅಶೋಕ ಹಾರನಹಳ್ಳಿ ರವರ ಮಾರ್ಗದರ್ಶನದಂತೆ ದಕ್ಷಿಣಕನ್ನಡ ಜಿಲ್ಲೆಯ ಉಪ್ಪಿನಂಗಡಿ ಸಮೀಪವಿರುವ ಶ್ರೀರಾಮಚಂದ್ರಾಪುರ ಮಠದಲ್ಲಿ ಮಹಾಸಭಾದ ರಾಜ್ಯ ಉಪಾಧ್ಯಕ್ಷರಾದ ಮಹೇಶ ಕಜೆ ಮತ್ತು ರಾಜ್ಯ ಸಂಘಟನಾ ಕಾರ್ಯದರ್ಶಿ ಬಿ.ಎಸ್. ರಾಘವೇಂದ್ರ ಭಟ್ ಮತ್ತು ರಾಜ್ಯ ಕಾರ್ಯಕಾರಿಸಮಿತಿಯ ಸದಸ್ಯರಾದ ಕಶೆಕೋಡಿ ಸೂರ್ಯನಾರಾಯಣ ಭಟ್ ಮತ್ತು ಕೆ. ಮಂಜುನಾಥ ಶಾಸ್ತ್ರಿ ಪದಾಧಿಕಾರಿಗಳು ಎಲ್ಲರೂ ಸೇರಿ ಸದಸ್ಯತ್ವ ಅಭಿಯಾನದ ಬಗ್ಗೆ ಶ್ರೀಮಠದಲ್ಲಿ ಸಭೆಯನ್ನು ನಡೆಸಿ ನಂತರ ಶ್ರೀಮತ್ ಜಗದ್ಗುರು ಶಂಕರಾಚಾರ್ಯ ಶ್ರೀಮದ್ರಾಘವೇಶ್ವರ ಭಾರತೀಮಹಾಸ್ವಾಮಿಗಳ ಆಶೀರ್ವಾದವನ್ನು ಪಡೆದು ಶ್ರೀಗಳ ಅಮೃತ ಹಸ್ತದಿಂದ ಸದಸ್ಯತ್ವ ಅಭಿಯಾನಕ್ಕೆ ಚಾಲನೆ ನೀಡಲಾಯಿತು.



## ಅರಸೀಕೆರೆ ಬ್ರಾಹ್ಮಣ ಸಂಘದಿಂದ ಅಧ್ಯಕ್ಷರಿಗೆ ಸನ್ಮಾನ



**ಅರಸೀಕೆರೆ :** ಅರಸೀಕೆರೆ ತಾಲ್ಲೂಕು ಬ್ರಾಹ್ಮಣ ಸಂಘದಿಂದ ಅಭಿನಂದನಾ ಸಮಾರಂಭ ಮತ್ತು ಮಹಾಸಭಾದ ಸದಸ್ಯತ್ವ ಅಭಿಯಾನಕ್ಕೆ ಚಾಲನೆ ನೀಡಿದರು. ದಿನಾಂಕ 13–2–2022 ರಂದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ ನೂತನ ಅಧ್ಯಕ್ಷರಾದ ಶ್ರೀ ಅಶೋಕಹಾರನಹಳ್ಳಿ ಇವರಿಗೆ ಅರಸೀಕೆರೆ ತಾಲ್ಲೂಕು ಬ್ರಾಹ್ಮಣ ಸಂಘ, ಬ್ರಾಹ್ಮಣ ಯುವಕ ಸಂಘ, ಸೀತಾ ಮಹಿಳಾ ಸಂಘ, ಶ್ರೀ ಚಂದ್ರಶೇಖರಭಾರತೀ ವಿದ್ಯಾಸಂಸ್ಥೆ ಹಾಗೂ ಇತರೆ ಅಂಗಸಂಸ್ಥೆಗಳ ಸಂಯುಕ್ತ ಆಶ್ರಯದಲ್ಲಿ ಅಭಿನಂದನಾ ಸಮಾರಂಭ ಏರ್ಪಡಿಸಲಾಗಿತ್ತು, ಇದೇ ಸಂದರ್ಭದಲ್ಲಿ ಮಹಾಸಭಾ ಅಧ್ಯಕ್ಷರು ಮಹಾಸಭಾದ ಸದಸ್ಯತ್ವ ಅಭಿಯಾನಕ್ಕೆ ಚಾಲನೆ ನೀಡಿದರು.


**ರಾಜರಾಜೇಶ್ವರಿನಗರದಲ್ಲಿರುವ ಸ್ಮಾರ್ತ ಬ್ರಾಹ್ಮಣ ಕುಟುಂಬಕ್ಕೆ ಬ್ರಾಹ್ಮಣ ಮಹಿಳೆ ಅಡಿಗೆಯವರು ಬೇಕಾಗಿದ್ದಾರೆ**
**ಸಂಪರ್ಕಿಸಿ : 8277343031 ಕೆ. ರಾಮಚಂದ್ರ**

ಬೆಂಗಳೂರು ದಕ್ಷಿಣ ಭಾಗದ ಇಸ್ರೋ ಲೇಔಟ್‌ನಲ್ಲಿರುವ ಕುಟುಂಬದಲ್ಲಿ ಮಗುವನ್ನು ನೋಡಿಕೊಳ್ಳಲು ಹಾಗೂ ಅಡಿಗೆ ಸಹಾಯಕ್ಕೆ 18 ವರ್ಷ ಮೇಲ್ಪಟ್ಟ ಸಹಾಯಕಿಯೊಬ್ಬರು ಅಥವಾ ಮಧ್ಯ ವಯಸ್ಸಿನ ಮಹಿಳೆಯೊಬ್ಬರು ತಕ್ಷಣದಲ್ಲಿ ಬೇಕಾಗಿದ್ದಾರೆ. ಆಸಕ್ತರು ಸಂಪರ್ಕಿಸಿ : ಶ್ರೀಮತಿ ವೀಣಾ ಹೆಚ್.ಎಸ್. 9481471227



**ಹುಬ್ಬಳ್ಳಿ :** ಇಂದು ಹುಬ್ಬಳ್ಳಿಯಲ್ಲಿ ಮಾಜಿ ಮುಖ್ಯಮಂತ್ರಿ ಶ್ರೀ ಜಗದೀಶ್ ಶೆಟ್ಟರ್‌ರವರು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಉಪಾಧ್ಯಕ್ಷರಾದ ಶ್ರೀ ಪ್ರಮೋದ ಮನೋಳಿ ಅವರನ್ನು ಸನ್ಮಾನಿಸಿದರು. ಈ ಸಂದರ್ಭದಲ್ಲಿ ಶ್ರೀ ಜಗದೀಶ್ ಶೆಟ್ಟರವರಿಗೆ ಉತ್ತರ ಕರ್ನಾಟಕದ ಹುಬ್ಬಳ್ಳಿಯಲ್ಲಿ ಬ್ರಾಹ್ಮಣ ಮಹಾಸಭಾದ ಕಟ್ಟಡ ನಿರ್ಮಾಣ ಮಾಡಲು ಸರ್ಕಾರದ ಜಮೀನನ್ನು ಕೊಡಲು ಕೋರಲಾಯಿತು. ರಘು ಧಾರವಾಡಕರ, ದೊಡ್ಡಯ್ಯ ,ವೀರಣ್ಣಸವಡಿ, ಸಿದ್ದುಮೊಗಲಿಶೆಟ್ಟರ್ ಮುಂತಾದವರು ಉಪಸ್ಥಿತರಿದ್ದರು.

ದಿನಾಂಕ 08-02-2022 ರಂದು ಹುಬ್ಬಳ್ಳಿಯ ಶಾಂತಿ ಕಾಲೊನಿ ಶ್ರೀ ವರಸಿದ್ಧಿವಿನಾಯಕ ದೇವಸ್ಥಾನದಲ್ಲಿ ಮಹಾಸಭಾದ ಯೋಜನೆಗಳನ್ನು ಚರ್ಚೆ ಮಾಡಿದ ನಂತರ ಸದಸ್ಯತ್ವ ಅಭಿಯಾನಕ್ಕೆ ವೇ.ಮೂ. ಮಂಗಳಮೂರ್ತಿ ಅವರು ಚಾಲನೆ ನೀಡಿದರು. ಶ್ರೀ ಪ್ರಮೋದ ಮನೋಳಿ, ಧಾರವಾಡಕರ, ಕಿರಣ್ ಎಚ್.ಎಸ್. ರಾಮಭಧ್ರ, ಗೋವಿಂದಭಟ್, ದಿಲೀಪ , ಹಾಗೂ ಮಹಿಳಾ ಮಂಡಳಿ ಸದಸ್ಯರು ಹಾಜರಿದ್ದರು.

## ರಾಜ್ಯ ಸಂಚಾಲಕರಾಗಿ ಸಂದೀಪ್ ನೇಮಕ



ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಯುವ ವಿಭಾಗದ ರಾಜ್ಯ ಸಂಚಾಲಕರಾಗಿ ವಕೀಲರಾದ ಸಂದೀಪ್ ರವಿ ಅವರನ್ನು ಮಹಾಸಭಾ ಅಧ್ಯಕ್ಷರು ನೇಮಕಾತಿ ಆದೇಶ ಪತ್ರವನ್ನು ನೀಡಿ ನೇಮಿಸಿದ್ದಾರೆ.

**ವಿಜಯನಗರ : ಹೊಸಪೇಟೆ ಚಿತ್ತವಾಡ್ಗಿ ಶ್ರೀ ದತ್ತಾತ್ರೇಯ ದೇವಸ್ಥಾನದಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಸದಸ್ಯತ್ವ ಅಭಿಯಾನ ಕಾರ್ಯಕ್ರಮವನ್ನು ಗುರುವಾರ ಹಮ್ಮಿಕೊಳ್ಳಲಾಗಿತ್ತು.**



ನಗರದ ಚಿತ್ತವಾಡ್ಗಿಯ ದತ್ತಾತ್ರೇಯ ದೇವಸ್ಥಾನದಲ್ಲಿ ಹಮ್ಮಿಕೊಂಡಿದ್ದ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಸದಸ್ಯತ್ವ ಅಭಿಯಾನ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಮಹಾಸಭಾದ ರಾಜ್ಯ ಸಮಿತಿ ಪ್ರತಿನಿಧಿ ,ಉಮೇಶ್ ಅವರು ಬ್ರಾಹ್ಮಣ ಸಮುದಾಯ, ಜನರು ಸಂಘಟಿತರಾಗುವ ಮೂಲಕ ಜೀವನದಲ್ಲಿ ಬರುವ ಸಂಕಟಗಳನ್ನು ಸಮರ್ಥವಾಗಿ ಎದುರಿಸಲು ಮುಂದಾಗಬೇಕು ಎಂದು ತಿಳಿಸಿದರು ಹಾಗೂ ಮಹಾಸಭಾ ಈ ನಿಟ್ಟಿನಲ್ಲಿ ಈಗಾಗಲೇ ಹಲವಾರು ಯೋಜನೆಗಳನ್ನು ಹಮ್ಮಿಕೊಂಡಿದ್ದು ಹಂತಹಂತವಾಗಿ ಕಾರ್ಯಪ್ರವೃತ್ತವಾಗಲಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಚಿತ್ತವಾಡ್ಗಿ ಬ್ರಾಹ್ಮಣ ಸಂಘದ ಅಧ್ಯಕ್ಷ ಶ್ರೀನಿವಾಸ, ದತ್ತಜಯಂತಿ ಆಚರಣೆ ಸಮಿತಿ ರವೀಂದ್ರ, ಹಿರಿಯ ಮುಖಂಡರಾದ, ಧಾರ್ಮಿಕ ಪರಿಷತ್ ಮುಖಂಡ ಅನಿಲ್ ಜೋಶಿ, ವಕೀಲ ಕಲ್ಲಂಭಟ್ ಸೇರಿದಂತೆ ಇತರರಿದ್ದರು.

ಅಣ್ಣಿಗೇರಿ ಪಟ್ಟಣದಲ್ಲಿ ಕಂಬದ ಹನುಮಂತ ದೇವರ ಗುಡಿಯಲ್ಲಿ ಗುರುವಾರ ಮಧ್ವನವಮಿ ಆಚರಣೆ ನಂತರ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಸದಸ್ಯತ್ವ ಅಭಿಯಾನಕ್ಕೆ ಚಾಲನೆ ನೀಡಲಾಯಿತು.



ವಿಪ್ರನುಡಿ ಪತ್ರಿಕೆಗೆ ಗಣನೀಯ ಮೊತ್ತದ ಜಾಹಿರಾತು ಸಂಗ್ರಹಿಸಿ ಅಧ್ಯಕ್ಷರಿಗೆ ಚೆಕ್ ನೀಡುತ್ತಿರುವ ಮಹಾಸಭಾ ಉಪಾಧ್ಯಕ್ಷ ಶ್ರೀ ರಾಜೇಂದ್ರ ಪ್ರಸಾದ್



## ಹಾವೇರಿ ಜಿಲ್ಲೆ ಹಾನಗಲ್ ತಾಲೂಕಿನಲ್ಲಿ ವಿಪ್ರ ಸಂಘಟನೆ ಸಭೆ ಹಾಗೂ ಸದಸ್ಯತ್ವ ಅಭಿಯಾನ:

ದಿನಾಂಕ 23 –2 –22 ರಂದು ಹಾವೇರಿ ಜಿಲ್ಲೆ ಹಾನಗಲ್ ತಾಲೂಕಿನಲ್ಲಿ ವಿಪ್ರ ಸಂಘಟನೆ ಸಲುವಾಗಿ ಪ್ರವಾಸ ಕೈಗೊಳ್ಳಲಾಗಿತ್ತು. ಬೊಮ್ಮನಹಳ್ಳಿ ಬೆಳಗಾಲಪೇಟೆ, ಆಲದಕಟ್ಟಿ, ಅಕ್ಕಿಆಲೂರ್, ಹಾನಗಲ್ ಪಟ್ಟಣದಲ್ಲಿ ವಿಪ್ರ ಸಭೆಗಳು ನಡೆದವು. ಈ ಸಭೆಗಳಲ್ಲಿ ಪ್ರಮುಖರು, ಮಹಿಳಾ ವಿಪ್ರರು ಭಾಗವಹಿಸಿದ್ದರು. ಸಭೆಯಲ್ಲಿ ಸಂಘಟನಾತ್ಮಕ ವಿಚಾರಗಳನ್ನು ಪ್ರಸ್ತಾಪಿಸಲಾಯಿತು, ಸಭೆಯಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಕಾರ್ಯಕಾರಿ ಮಂಡಳಿ ಸದಸ್ಯರಾದ ವಿಜಯ ನಾಡಜೋಶಿ ಮಾತನಾಡಿದ ನಂತರ ರಾಜ್ಯ ಅಧ್ಯಕ್ಷರಾದ ಮಾನ್ಯ ಶ್ರೀ ಅಶೋಕ ಹಾರನಹಳ್ಳಿ ಅವರು ವಿಪ್ರರ ಸಲುವಾಗಿ ಉತ್ತರ ಕರ್ನಾಟಕದ ವಿಪ್ರ ಬಾಂಧವರಿಗೆ ನಾನಾ ಯೋಜನೆಗಳನ್ನು ತರುವ ಚಿಂತನೆಯಲ್ಲಿ ಇದ್ದಾರೆ, ಸಮಾಜವನ್ನು ಗಟ್ಟಿಗೊಳಿಸಲು ಎಲ್ಲರೀತಿಯ ಸಹಾಯ ಮಾಡುವದಾಗಿ, ಹುಬ್ಬಳ್ಳಿಯಲ್ಲಿ ಕಾರ್ಯಾಲಯವನ್ನು ಮಾಡುವುದಾಗಿ ಹೇಳಿದ್ದಾರೆ. ವಿಪ್ರರು ಮನೆ ಮನೆಯಲ್ಲಿ ಎಲ್ಲರೂ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಸದಸ್ಯರು ಆಗಬೇಕೆಂದು ಅಧ್ಯಕ್ಷರ ಕಳಕಳಿಯ ವಿನಂತಿ ಇರುತ್ತದೆ ಎಂದು ತಿಳಿಸಿದರು.

ಸಭೆಯಲ್ಲಿ ವಿಪ್ರ ಮಹಿಳಾ ಸಂಘಟನೆಯ ಕಾರ್ಯಕಾರಿ ಸದಸ್ಯರಾದ ಶ್ರೀಮತಿ ದೇಸಾಯಿ, ಶ್ರೀಮತಿ ಕಾಶೀಕರ್ ಉಪಸ್ಥಿತರಿದ್ದರು. ಬ್ರಾಹ್ಮಣ ಸಭೆಯ ಅಧ್ಯಕ್ಷರಾದ ಶ್ರೀ ತಮ್ಮಣ್ಣ ವೇದಂ ಭಟ್ ಅಧ್ಯಕ್ಷತೆ ವಹಿಸಿದ್ದರು. ವಿಪ್ರ ಪ್ರಮುಖರಾದ ಕೆ.ಎಲ್. ದೇಶಪಾಂಡೆ, ರವೀಂದ್ರ ದೇಶಪಾಂಡೆ, ಕೃಷ್ಣ ಆರ್ ಪೂಜಾರ್, ಆನಂದ್ ನಾಯಕ್, ಸುಧೀಂದ್ರ ಗಾಜಿಪುರ, ವಿನಯ್ ಬಂಕನಾಳ, ಭೀಮಸೇನ ಪಾಟೀಲ್, ಚಂದ್ರಕಾಂತ ದೀಕ್ಷಿತ್ ಶರಶ್ಚಂದ್ರ ದೇಸಾಯಿ, ಶ್ರೀಮತಿ ಮಾಧುರಿ ಕಾಮನಹಳ್ಳಿ, ಕಾವ್ಯ ಪೂಜಾರ್, ಮಧುಲಿಕಾ ದೇಸಾಯಿ, ಗೌರಿ ಕುಲಕರ್ಣಿ ಹಾಗೂ ಯುವ ವಿಪ್ರರು ಭಾಗವಹಿಸಿ ವಿಪ್ರ ಸದಸ್ಯರಾಗುವುದರೊಂದಿಗೆ ಸಭೆಯನ್ನು ಯಶಸ್ವಿಗೊಳಿಸಿದರು.

## ಉತ್ತರಕನ್ನಡ ಜಿಲ್ಲೆಯಲ್ಲಿ ಸದಸ್ಯತ್ವ ಅಭಿಯಾನಕ್ಕೆ ಚಾಲನೆ



ದಿನಾಂಕ 23–02–2022ರಂದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಅಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿ ಅವರ ಮಾರ್ಗದರ್ಶನದಂತೆ ಉತ್ತರಕನ್ನಡ ಜಿಲ್ಲೆಯ ಸಿದ್ಧಾಪುರ ತಾಲೂಕಿನಲ್ಲಿ ರಾಜ್ಯ ಉಪಾಧ್ಯಕ್ಷರಾದ ಶ್ರೀ ಶಶಿಭೂಷಣ ಹೆಗಡೆ, ರಾಜ್ಯ ಸಂಘಟನಾ ಕಾರ್ಯದರ್ಶಿ ಬಿ.ಎಸ್. ರಾಘವೇಂದ್ರ ಭಟ್ ಮತ್ತು ಕಾರ್ಯಕಾರಿ ಸಮಿತಿ ಸದಸ್ಯರಾದ ಕೃಷ್ಣಪ್ರಸಾದ್ ಹೆಗಡೆ, ಶ್ರೀಕೃಷ್ಣ ಶಿವರಾಮ ಹೆಗಡೆ ಮತ್ತು ನಾರಾಯಣ ಜಿ ಹೆಗಡೆ ಇವರ ನೇತೃತ್ವದಲ್ಲಿ ಹಾಗೂ ಉತ್ತರಕನ್ನಡ ಜಿಲ್ಲೆಯ ಎಲ್ಲಾ ತಾಲೂಕುಗಳ ಹಿರಿಯ ಮುಖಂಡರ ಜೊತೆಯಲ್ಲಿ ಸಭೆಯನ್ನು ಏರ್ಪಡಿಸ ಲಾಗಿತ್ತು. ಸಭೆಯಲ್ಲಿ ಮಹಾಸಭಾದ ಎಲ್ಲ ಯೋಜನೆ ಗಳನ್ನು ಸವಿವರವಾಗಿ ವಿವರಿಸಿ ರಾಜ್ಯಮಟ್ಟದಲ್ಲಿ ಮಹಾಸಭೆಯ ಸದಸ್ಯತ್ವವನ್ನು ಬಲಗೊಳಿಸುವ ನಿಟ್ಟಿನಲ್ಲಿ ಉತ್ತರ ಕನ್ನಡ ಜಿಲ್ಲೆಯಿಂದ ಹೆಚ್ಚಿನ ಸಂಖ್ಯೆಯಲ್ಲಿ ಮಹಾಸಭೆಗೆ ಸದಸ್ಯತ್ವ ನೊಂದಣಿಯನ್ನು ಮಾಡಬೇಕೆಂದು ಸರ್ವಾನುಮತದಿಂದ ಒಪ್ಪಿ ಸದಸ್ಯತ್ವ ಅಭಿಯಾನಕ್ಕೆ ಚಾಲನೆಯನ್ನು ನೀಡಲಾಯಿತು ಹಾಗೂ ಜಿಲ್ಲಾ ಉಪಸಮಿತಿಯನ್ನು ಮತ್ತು ತಾಲೂಕು ಸಮಿತಿಯನ್ನು ರಚಿಸಿ ಸದಸ್ಯತ್ವಕ್ಕೆ ಚಾಲನೆಯನ್ನು ನೀಡಲಾಯಿತು. ಸಭೆಯನ್ನು ಸಿದ್ಧಾಪುರದಲ್ಲಿರುವ ಶ್ರೀ ಶೃಂಗೇರಿ ಶಂಕರಮಠದಲ್ಲಿ ಬಹಳ ಅಚ್ಚುಕಟ್ಟಾಗಿ ಏರ್ಪಡಿಸಲಾಗಿತ್ತು.

## ದಿನಾಂಕ 22 –02 –2022 ರಂದು ಖಾನಾಪುರದಲ್ಲಿ ಸದಸ್ಯತ್ವ ಅಭಿಯಾನ



ಬೆಳಗಾವಿ ಜಿಲ್ಲೆಯ ಖಾನಾಪುರದ ಶ್ರೀರಾಮ ಮಂದಿರದಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಸದಸ್ಯತ್ವ ಅಭಿಯಾನಕ್ಕೆ ಚಾಲನೆ ನೀಡಲಾಯಿತು. ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಕೇಂದ್ರ ಕಾರ್ಯಕಾರಿ ಸಮಿತಿ ಸದಸ್ಯ ವಿಲಾಸ ಜೋಶಿ ಮತ್ತು ಪ್ರಿಯಾ ಪುರಾಣಿಕ ಅವರು ಸಭೆಯಲ್ಲಿ ಉಪಸ್ಥಿತರಿದ್ದು ಸಂಘಟನೆ ಬಗ್ಗೆ ಮಾತನಾಡಿದರು. ಮಹಾಸಭಾ ಅಧ್ಯಕ್ಷ ಅಶೋಕ ಹಾರನಹಳ್ಳಿ ಮಾರ್ಗದರ್ಶನದಲ್ಲಿ ನಡೆದ ಬೆಳವಣಿಗೆಗಳ ಬಗ್ಗೆ ಸಭೆಯಲ್ಲಿ ವಿವರಿಸಲಾಯಿತು.

ಆರ್ಥಿಕವಾಗಿ ಹಿಂದುಳಿದ ಬ್ರಾಹ್ಮಣರ ಬಗ್ಗೆ ವಿಶೇಷ ಮೀಸಲಾತಿ ಮತ್ತು ಭವನ ನಿರ್ಮಿಸುವುದರ ಬಗ್ಗೆ ಅಧ್ಯಕ್ಷರಾದ ಹಾರನಹಳ್ಳಿ ನೇತೃತ್ವದ ನಿಯೋಗವು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಭೇಟಿ ಮಾಡಿದ್ದರ ಬಗ್ಗೆ ಸಭೆಯಲ್ಲಿ ವಿಲಾಸ ಜೋಶಿ ವಿವರಿಸಿದರು.

ಸಭೆಯಲ್ಲಿ ಮಹಾಸಭೆ ಸದಸ್ಯರಾಗಲು ಹೆಚ್ಚಿನ ಆಸಕ್ತಿ ತೋರಿದರು. ಇಂತಹ ಸಂಘಟನಾತ್ಮಕ ಸಭೆಗಳು ಹಿಂದೆ ಆಗಿರಲಿಲ್ಲ. ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ಸಭೆಗಳು ಆಗಲಿ ಎನ್ನುವ ಅಭಿಪ್ರಾಯವನ್ನು ಹಾಜರಿದ್ದವರು ವ್ಯಕ್ತಪಡಿಸಿದರು. ಮಾಲತೇಶ ಕುಲಕರ್ಣಿ, ಪ್ರಸನ್ನ ಕುಲಕರ್ಣಿ, ಅರವಿಂದ ಕುಲಕರ್ಣಿ, ನಾರಾಯಣ ದೇಶಪಾಂಡೆ, ಉದಯ ದೇಶಪಾಂಡೆ, ಪ್ರಭಾಕರ ಭಟ್, ವಿಜಯ ಪಾಟೀಲ, ಶಾರ್ದೂಲ ಜೋಶಿ ಉಪಸ್ಥಿತರಿದ್ದರು.

## ಗೋಮುಖ ರಾಯರಮಠದಲ್ಲಿ ಸದಸ್ಯತ್ವ ಅಭಿಯಾನ

ಫೆಬ್ರವರಿ 10 ರಂದು ಗುಲ್ಬರ್ಗಾದಲ್ಲಿ **ಗೋಮುಖ ರಾಯರಮಠದಲ್ಲಿ ಸದಸ್ಯತ್ವ ಅಭಿಯಾನಕ್ಕೆ ಚಾಲನೆ ನೀಡಲಾಯಿತು.** ಈ ಸಂದರ್ಭದಲ್ಲಿ ಮಹಾಸಭಾಗೆ ಆಯ್ಕೆಯಾದ ಸಹ ಕಾರ್ಯದರ್ಶಿ ಶ್ರೀ ರಾಘವೇಂದ್ರ ಕುಲಕರ್ಣಿ ಹಾಗೂ ಕಾರ್ಯಕಾರಿ ಸಮಿತಿಯ ಸದಸ್ಯರಾದ ಶ್ರೀ ರಂಗನಾಥ ದೇಸಾಯಿ, ಶ್ರೀ ಪ್ರಶಾಂತ್ ಕೊರಳ್ಳಿ ಹಾಗೂ ಶ್ರೀ ಮಂಜುನಾಥ ಕುಲಕರ್ಣಿ ಅವರನ್ನು ಅಭಿನಂದಿಸಲಾಯಿತು. ಮಾಜಿ ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷರಾದ ಶ್ರೀ ನರಹರಿ ಪಾಟೀಲ್ ಅಧ್ಯಕ್ಷತೆ ವಹಿಸಿದ್ದರು.



## ನೂತನ ಪದಾಧಿಕಾರಿಗಳಾಗಿ ಆಯ್ಕೆ



**ದಿ. 23–02–2022ರಂದು ಬಸವನಗುಡಿ ಕ್ಷೇತ್ರದ ಜನಪ್ರಿಯ ಶಾಸಕರಾದ ಶ್ರೀ ಎಲ್.ಎ. ರವಿಸುಬ್ರಹ್ಮಣ್ಯ ಅವರ ಸಮ್ಮುಖದಲ್ಲಿ ಹಾಗೂ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷರಾದ ಶ್ರೀ ಅಶೋಕ್ ಹಾರನಹಳ್ಳಿ ರವರ ಆಶೀರ್ವಾದದೊಂದಿಗೆ ಬಸವನಗುಡಿ ಕ್ಷೇತ್ರ ಬ್ರಾಹ್ಮಣ ಸಂಘ (ರಿ) ಇದರ ನೂತನ ಅಧ್ಯಕ್ಷಿಣಿಯನ್ನಾಗಿ ಆರ್.ವಿ. ಸುಬ್ರಹ್ಮಣ್ಯರವರ ಧರ್ಮಪತ್ನಿ ಶ್ರೀಮತಿ ಶಾರದಾ ಸುಬ್ರಹ್ಮಣ್ಯರವರನ್ನು ಅವಿರೋಧವಾಗಿ ಆಯ್ಕೆಮಾಡಲಾಯಿತು.** ಹಾಗೂ ಸಂಘದ ನೂತನ ಪದಾಧಿಕಾರಿಗಳನ್ನು ಪುನಃರಚಿಸಲಾಯಿತು. ಶ್ರೀಮತಿ ಶಾರದಾ ಸುಬ್ರಹ್ಮಣ್ಯ–ಅಧ್ಯಕ್ಷರು, ಶ್ರೀ ಶ್ರೀಕಂಠ ಬಾಬು–ಕಾರ್ಯಧ್ಯಕ್ಷರು ಶ್ರೀ ಟಿ.ಎಲ್.ಎಸ್. ಕುಮಾರ್ (ಸಪ್ತಗಿರಿ) ಪ್ರಧಾನ ಕಾರ್ಯದರ್ಶಿ, ಶ್ರೀ ಎ.ಎಸ್. ವಿಜಯಕುಮಾರ್ (ಸಪ್ತಗಿರಿ) ಖಜಾಂಚಿ, ಹಾಗೂ ಶ್ರೀ ಆರ್.ಎಸ್. ಶ್ರೀಷ ಜಮದಗ್ನಿ–ಜಂಟಿ ಕಾರ್ಯದರ್ಶಿ. ಮಹಾಸಭೆಯು ಸಂಘಕ್ಕೆ ಹಾಗೂ ಪದಾಧಿಕಾರಿಗಳಿಗೆ ಶುಭಕೋರಿ –ಸಮಾಜಮುಖೀ ಕೆಲಸವನ್ನು ಮುಂದುವರೆಸುವಂತೆ ಹಾರೈಸುತ್ತದೆ.

Orchid Travel & Tours

IATA | AUSSIE SPECIALIST | USA | Switzerland. get natural. | 100% PURE NEW ZEALAND SPECIALIST GOLD 2017 | BRIT Agent

# OUR OFFICE NETWORK :

**HO: # 98, 1st floor,**
**D.V.G. Road, Basavanagudi,**
**BANGALORE, India - 560004**
**Phone : +91 80 26617178**
**www.orchidtours.net**

## OUR TOURS :

**Domestic Tours : Ahobilam |Explore Gujarat | Temple Triangle | Char Dham | Himachal Special | Pancha Dwaraka | Exclusive Rajasthan | Bhubaneshwar Puri Jagannathan | Andhra Pradesh Special |Andaman |**

## INTERNATIONAL TOUR :

**UK and Europe Tour | USA Tour with Bahamas Cruise | China-Hong Kong - Macau | Japan | Dubai - Abu Dhabi | Singapore and Malaysia | Cambodia and Thailand | Srilanka | Australia New Zealand |**

# ಮಹಾಸಭೆಯು ಹಮ್ಮಿಕೊಂಡಿರುವ ವಿವಿಧ ಯೋಜನೆಗಳ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಅಧ್ಯಕ್ಷರು ರಚಿಸಿರುವ ವಿವಿಧ ಸಮಿತಿಗಳು

## ನೂತನವಾಗಿ ನಿಯೋಜಿತವಾದ ಸಂಚಾಲಕರು ಹಾಗೂ ವಲಯ ಉಪಾಧ್ಯಕ್ಷರು

**ಸಂಚಾಲಕರು :**

ಶ್ರೀಮತಿ ರೂಪಾ ಶಾಸ್ತ್ರಿ, ಬೆಂಗಳೂರು – **ರಾಜ್ಯ ಮಹಿಳಾ ವಿಭಾಗ**

ಶ್ರೀ ಸಂದೀಪ್ ರವಿ, ಬೆಂಗಳೂರು – **ರಾಜ್ಯ ಯುವ ಘ**

**ಸಂಘಟನಾ ಕಾರ್ಯದರ್ಶಿ**

ಶ್ರೀ ಜಯಸಿಂಹ ಎಲ್, ಬೆಂಗಳೂರು – ಬೆಂ.ಉತ್ತರ ಕ್ಷೇತ್ರ

**ವಲಯ ಉಪಾಧ್ಯಕ್ಷರು**

ಶ್ರೀ ಟಿ.ಹೆಚ್. ಚಂದ್ರಶೇಖರ್, ಹಾಸನ – ಹಾಸನ

ಶ್ರೀ ನಟರಾಜ ಜೋಯಿಸ್, ಮೈಸೂರು – ಮೈಸೂರು

## ಪತ್ರಿಕಾ ಮಾಧ್ಯಮ ಸಮಿತಿ

ಮಹಾಸಭೆಯ ಚಟುವಟಿಕೆಗಳ ಕುರಿತು ಮಾಧ್ಯಮಗಳ ಜೊತೆ ಸಂವಹನಕ್ಕಾಗಿ ಈ ಸಮಿತಿ ರಚನೆಯಾಗಿದೆ.

**ಸಂಚಾಲಕರು :**

1. ಶ್ರೀ ಯಗಟಿ ಮೋಹನ್ -- ಮೊ. 9880184350

**ಸದಸ್ಯರು**

2. ಶ್ರೀ ಜಿ. ಮೋಹನ್ -- ಮೊ. 9845021221
3. ಶ್ರೀ ಅ.ನ. ಪ್ರಹ್ಲಾದರಾವ್ -- ಮೊ. 9611227565
4. ಶ್ರೀ ಪ್ರಕಾಶಚಂದ್ರ -- ಮೊ. 9844063128
5. ಶ್ರೀ ಪೃಥ್ವಿರಾಜ್ -- ಮೊ. 9738693936
6. ಶ್ರೀ ಶೇಷಾದ್ರಿ ಸಾಮಗ -- ಮೊ. 9880107414

## ವಿದ್ಯಾವಾಸಿನಿ ವಿಪ್ರ ವಸತಿ ನಿಲಯ

ಮಹಾಸಭಾದ ಮಹಿಳಾ ವಸತಿ ನಿಲಯದ ಮೇಲ್ವಿಚಾರಣೆ, ದಿನನಿತ್ಯ ಉಸ್ತುವಾರಿ, ಹಾಗೂ ನಿರ್ವಹಣೆಗೆ ಉಪಸಮಿತಿಯನ್ನು ಕೆಳಕಂಡಂತೆ ರಚಿಸಲಾಗಿದೆ.

**ಸಂಚಾಲಕರು :**

1. ಶ್ರೀಮತಿ ಸಮುದ್ಯತ – ಮೊ. 9741338731

**ಸದಸ್ಯರು**

2. ಶ್ರೀಮತಿ ಸಾವಿತ್ರಿ ರಮೇಶ್ – ಮೊ. 99007–88954
3. ಶ್ರೀಮತಿ ವೈಜಯಂತಿ ಶರ್ಮ – ಮೊ.
4. ಶ್ರೀ ಕೃಷ್ಣಸ್ವಾಮಿ ಎ.ಎನ್. – ಮೊ. 9845010995
5. ಶ್ರೀ ಎನ್.ಎಸ್. ನರಸಿಂಹಮೂರ್ತಿ– ಮೊ. 94496–10740/ 26695678

## ಸದಸ್ಯತ್ವ ನೊಂದಾವಣೆ ಹಾಗೂ ಸದಸ್ಯತ್ವ ಪಟ್ಟಿ ಪರಿಷ್ಕರಣೆ ಸಮಿತಿ

ಮಹಾಸಭಾಗೆ ಸದಸ್ಯತ್ವ ನೊಂದಾವಣೆ ಅರ್ಜಿ ಪರಿಶೀಲನೆ ಹಾಗೂ ಪ್ರಸ್ತುತ ಸದಸ್ಯತ್ವ ಪಟ್ಟಿಯ ಪರಿಷ್ಕರಣೆ ಮಾಡಲು ಈ ಕೆಳಕಂಡಂತೆ ಉಪಸಮಿತಿಯನ್ನು ರಚಿಸಲಾಗಿದೆ.

**ಸಂಚಾಲಕರು :**

1. ಶ್ರೀ ವಿ. ಸತ್ಯೇಂದ್ರ --ಮೊ. 9844001238

**ಸದಸ್ಯರು**

2. ಶ್ರೀ ವಿಜಯಕುಮಾರ್ --ಮೊ. 9845023901
3. ಶ್ರೀ ಗೋವಿಂದರಾವ್ --ಮೊ. 9844854852
4. ಶ್ರೀ ಮೋಹನ್ (ಗಿರಿನಗರ) --ಮೊ. 9743327825
5. ಶ್ರೀಮತಿ ಹೆಚ್.ಟಿ. ಗೀತಾ (ಸಂಗೀತ)--ಮೊ. 8197437968
6. ಶ್ರೀ ಶಂಕರಪ್ರಸಾದ್ --ಮೊ. 9845301382

## ಬೈಲಾ ತಿದ್ದುಪಡಿ ಸಮಿತಿ

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಪ್ರಸ್ತುತ ಜಾರಿಯಲ್ಲಿರುವ ಬೈಲಾ ಪರಿಶೀಲಿಸಿ, ಪರಿಷ್ಕರಿಸುವ ಅವಶ್ಯಕತೆ ಇದ್ದಲ್ಲಿ ಅಂತಹ ಅಂಶಗಳನ್ನೊಳಗೊಂಡ ವರದಿಯನ್ನು ನೀಡಲು ಈ ಕೆಳಕಂಡ ಸದಸ್ಯರ ಉಪಸಮಿತಿಯನ್ನು ರಚಿಸಲಾಗಿದೆ.

**ಸಂಚಾಲಕರು :**

1. ಶ್ರೀ ಹೆಚ್.ಎನ್. ಹಿರಿಯಣ್ಣಸ್ವಾಮಿ – ಮೊ. 9845030460

**ಸದಸ್ಯರು**

2. ಶ್ರೀ ನಟರಾಜ್ ಭಾಗ್ವತ್ – ಮೊ. 9448146175
3. ಶ್ರೀ ಕೆ. ದಿವಾಕರ್ – ಮೊ. 9448072605
4. ಶ್ರೀ ಸುಂದರಪ್ಪ – ಮೊ. 9945076785
5. ಶ್ರೀ ಶ್ರೀನಿವಾಸರಾವ್ ಎಸ್.ಎಸ್ – ಮೊ. 93412–42235
6. ಶ್ರೀ ಜಿ.ಎಂ. ಹೆಗಡೆ – ಮೊ. 9901944688

## ವಧು–ವರಾನ್ವೇಷಣಾ ವಿಭಾಗ

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ವತಿಯಿಂದ ಆಯೋಜಿಸಿರುವ ವಧು–ವರಾನ್ವೇಷಣಾ ವಿಭಾಗದ ಕಾರ್ಯ ನಿರ್ವಹಣೆಗಾಗಿ ಕೆಳಕಂಡಂತೆ ಸಮಿತಿ ರಚಿಸಲಾಗಿದೆ.

1. ಶ್ರೀಮತಿ ಜಯಲತಾ ಸತ್ಯನಾರಾಯಣ್ – **ಸಂಚಾಲಕರು**
2. ಶ್ರೀಮತಿ ರಮಾ ಶ್ರೀನಾಥ್ – **ಸದಸ್ಯರು**
3. ಶ್ರೀಮತಿ ಪಾರ್ವತಿ ಸ್ವಾಮಿ – **ಸದಸ್ಯರು**
4. ಶ್ರೀಮತಿ ಗಾಯತ್ರಿ ರಾವ್ – **ಸದಸ್ಯರು**

## ಕಟ್ಟಡ ಸಮಿತಿ

ಸಪ್ತರ್ಷಿ ಫೌಂಡೇಷನ್ (ರಿ.) ಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಹಂಚಿಕೆಯಾಗಿರುವ ನಾಗರಿಕ ಸೌಲಭ್ಯ ನಿವೇಶನವನ್ನು ಅಭಿವೃದ್ಧಿಪಡಿಸಲು, ಕಟ್ಟಡ ನಿರ್ಮಿಸಲು, ವರದಿ ನೀಡಲು ಈ ಕೆಳಕಂಡ ಉಪಸಮಿತಿಯನ್ನು ರಚಿಸಲಾಗಿದೆ.

**ಸಂಚಾಲಕರು :**

1. ಶ್ರೀ ಹೆಚ್.ಎನ್. ಹಿರಿಯಣ್ಣಸ್ವಾಮಿ – ಮೊ. 9845030460

**ಸದಸ್ಯರು**

2. ಶ್ರೀ ಎಂ.ವಿ. ಸತ್ಯನಾರಾಯಣ – ಮೊ. 9448288861
3. ಶ್ರೀ ಆರ್.ಎನ್. ಸ್ವಾಮಿ – ಮೊ. 9448034905
4. ಶ್ರೀ ನಟರಾಜ್ (ಚಿಕ್ಕಮಗಳೂರು) – ಮೊ. 9844076596
5. ಶ್ರೀ ಶ್ರೀವತ್ಸ – ಮೊ. 8105385529
6. ಶ್ರೀ ರವಿಕುಮಾರ್ ಆರ್. (ಸಿಸಿಟಿವಿ) – ಮೊ. 9844136209

## ಕಾನೂನು ಸಲಹಾ ಸಮಿತಿ

ವಿಪ್ರ ಸಮುದಾಯದಲ್ಲಿ ಉಂಟಾಗಬಹುದಾದ ವ್ಯಾಜ್ಯ, ಕಾನೂನು ತೊಡಕು, ಸಾಂಸಾರಿಕ ಭಿನ್ನಾಭಿಪ್ರಾಯಗಳಿಗೆ ಸೂಕ್ತ ಸಲಹೆ ನೀಡಲು ಕೆಳಕಂಡ ಹಿರಿಯ ವಕೀಲರ ಸಮಿತಿಯನ್ನು ರಚಿಸಲಾಗಿದೆ.

**ಸಂಚಾಲಕರು :**

1. ಶ್ರೀ ಟಿ.ಎನ್. ರಮೇಶ್ – ಮೊ. 9945519208
   ವಕೀಲರು ಬೆಂಗಳೂರು–560070.

**ಸದಸ್ಯರು**

2. ಶ್ರೀ ಬಿ.ಆರ್. ವಿಶ್ವನಾಥ್ – ಮೊ. 9845034560
   ವಕೀಲರು ಬೆಂಗಳೂರು–560004.
3. ಶ್ರೀ ಪಿ.ಹೆಚ್.ರಾಮಲಿಂಗಮ್ – ಮೊ. 9448469249
   ವಕೀಲರು ಬೆಂಗಳೂರು 560052.

### ಮಹಾಸಭಾ ರಾಜ್ಯ ಕಾರ್ಯಕಾರಿಣಿ ಸಮಿತಿಯ ನೂತನ ಸದಸ್ಯರುಗಳು

(ಕಳೆದ ಸಂಚಿಕೆಯಿಂದ ಮುಂದುವರೆದುದು)

ಶ್ರೀ ಎಂ.ಆರ್. ಶಿವಶಂಕರ್ – ಬೆಂಗಳೂರು
ಶ್ರೀ ಎನ್. ಅನಂತಮೂರ್ತಿ ಶರ್ಮ – ಬೆಂಗಳೂರು
ಶ್ರೀ ಆರ್. ಸತ್ಯನಾರಾಯಣ – ಬೆಂಗಳೂರು

ಶಾಸ್ತ್ರಿ ನಗರ, ತ್ಯಾಗರಾಜನಗರ ಅಂಚೆ, ಬೆಂಗಳೂರು–560 028. ಇಲ್ಲಿ 4 ಬೆಡ್ ರೂಮ್ ಸೌಲಭ್ಯವಿರುವ ಡ್ಯೂಪ್ಲೆಕ್ಸ್ ಹೌಸ್ ಬಾಡಿಗೆಗೆ ದೊರೆಯುತ್ತದೆ ತಿಂಗಳ ಬಾಡಿಗೆ ರೂ. 25,000/–.
ಸಂಪರ್ಕಿಸಿ : ರವಿ, ಮೊ. : 9738204794,
ಜಗನ್ನಾಥ್ : 9986081943

## ಆರೋಗ್ಯ ಮತ್ತು ವೈದ್ಯಕೀಯ ವಿಭಾಗ

ಮಹಾಸಭಾ ವತಿಯಿಂದ ನೂತನವಾಗಿ ಆರೋಗ್ಯ ಮತ್ತು ವೈದ್ಯಕೀಯ ವಿಭಾಗವನ್ನು ರಚಿಸಿ, ಈ ಕೆಳಕಂಡಂತೆ ಸದಸ್ಯರನ್ನು ಸಮಿತಿಗೆ ನೇಮಿಸಲಾಗಿದೆ.

**ಸಂಚಾಲಕರು :**

1. ಡಾ॥ ಸಿ.ಎ. ಕಿಶೋರ್ – ಮೊ. 9880286998

**ಸದಸ್ಯರು**

2. ಡಾ॥ ಶ್ರೀಮತಿ ಲತಾ ವೆಂಕಟರಾಮ್
3. ಡಾ॥ ಭಾನು ಪ್ರಕಾಶ್
4. ಶ್ರೀಮತಿ ಪ್ರತಿಮಾ ಸುಭಾಷ್
5. ಶ್ರೀ ಶ್ರೀಕಾಂತ್ ಎಸ್
6. ಶ್ರೀಮತಿ ಸುಮ ನಾಗರಾಜ್ ಹಾಸ್ಯಗಾರ
7. ಡಾ॥ ಸಹನಾ ವೇವುಂಡಿ
8. ಶ್ರೀ ವಿನಯ ಕಶ್ಯಪ್
9. ಶ್ರೀಮತಿ ಬಿ.ಕೆ. ಸುಮತಿ

### ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ (ರಿ.)
### ವಧು–ವರ ಮಾಹಿತಿ ಕೇಂದ್ರ, ಬೆಂಗಳೂರು
### ಸ್ಥಳ : ಗಾಯತ್ರಿ ಭವನ

ನಂ.3070, 14ನೇ ಅಡ್ಡರಸ್ತೆ, 9ನೇ ಮುಖ್ಯರಸ್ತೆ,
ಬನಶಂಕರಿ 2ನೆ ಹಂತ, ಬೆಂಗಳೂರು–70.
ದೂರವಾಣಿ : 080–26770066/26771695
ಸಮಯ : ಸಂಜೆ 5.00 ರಿಂದ 7.00 ರವರೆಗೆ
ಮಂಗಳವಾರ ಮತ್ತು ಶನಿವಾರ

**ನಿಯಮಗಳು :**

1. ವರ/ವಧು ಅಥವಾ ತಾಯಿ ತಂದೆ ಯಾರಾದರು ಒಬ್ಬರು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ ಸದಸ್ಯರಾಗಿರಬೇಕು.
2. ವಧು/ವರರ ಪೋಸ್ಟ್ ಕಾರ್ಡ್ ಫೋಟೋ ಮತ್ತು ವಿವರ ತರಬೇಕು.
3. ಶುಲ್ಕ ರೂ. 500/=

**ಸಂಚಾಲಕರು :**

ಶ್ರೀಮತಿ ಜಯಲತಾ ಸತ್ಯನಾರಾಯಣ್

**ಸದಸ್ಯರು**

ಶ್ರೀಮತಿ ರಮಾ ಶ್ರೀನಾಥ್
ಶ್ರೀಮತಿ ಪಾರ್ವತಿ ಸ್ವಾಮಿ
ಶ್ರೀಮತಿ ಗಾಯತ್ರಿ ರಾವ್

# ಮಹಾಸಭೆಯ ನೂತನ ಉಪಾಧ್ಯಕ್ಷರು



## ಶ್ರೀ ಹೆಚ್.ಆರ್. ಸುರೇಶ್

ಶ್ರೀಯುತರು ದಿ ನ್ಯಾಷನಲ್ ಕೋ-ಆಪರೇಟಿವ್ ಬ್ಯಾಂಕ್‌ನಲ್ಲಿ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. ಪ್ರಸ್ತುತ ನಿರ್ದೇಶಕ ರಾಗಿಯೂ ಸೇವೆ ಸಲ್ಲಿಸುತ್ತಿದ್ದಾರೆ. ಹಲವು ಶಿಕ್ಷಣ ಸಂಸ್ಥೆಗಳಿಗೆ ಲೆಕ್ಕಪರಿಶೋಧಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ತಮ್ಮದೇ ಆದ ಲೆಕ್ಕ ಪರಿಶೋಧಕ ಸಂಸ್ಥೆಯನ್ನು ಹುಟ್ಟು ಹಾಕಿ, ಕರ್ನಾಟಕದಾದ್ಯಂತ ಹಲವು ಪ್ರತಿಷ್ಠಿತ ಸಂಸ್ಥೆಗಳ ಲೆಕ್ಕಪರಿಶೋಧಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.



## ಡಾ॥ ಗಿರೀಶ್ ಆರ್. ಮಸೂರಕರ್

ಶ್ರೀಯುತರು ವೃತ್ತಿಯಲ್ಲಿ ನೇತ್ರ ತಜ್ಞರು. ಪ್ರವೃತ್ತಿಯಲ್ಲಿ ಸಮಾಜ ಸೇವಕರು. ಹಲವು ವರುಷಗಳ ಕಾಲ, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಹಾಗೂ ಕೇಂದ್ರ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ.



## ಶ್ರೀ ರವೀಂದ್ರ ಶ್ರೀಪಾದ ಮುತಾಲಿಕ್

ಶ್ರೀಯುತರು ವೃತ್ತಿಯಲ್ಲಿ ಹಿರಿಯ ವಕೀಲರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಬೆಳಗಾವಿಯಲ್ಲಿ ನಡೆದ ಮಹಾಸಭೆಯ ರಾಜ್ಯಮಟ್ಟದ 9ನೇ ಸಮ್ಮೇಳನದ ಪ್ರಧಾನ ಕಾರ್ಯದರ್ಶಿಗಳಾಗಿ ಸೇವೆ ಸಲ್ಲಿಸಿ, ಯಶಸ್ವಿ ಯಾಗಿ ಸಮ್ಮೇಳನವನ್ನು ನಡೆಸಿದ್ದಾರೆ. ಹಾಗೂ ಹಲವು ವರ್ಷಗಳಿಂದ ಕೇಂದ್ರ ಕಾರ್ಯಕಾರಿಣಿ ಸಮಿತಿಯ ಸದಸ್ಯರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಕರ್ನಾಟಕ ರಾಜ್ಯ ಕೋ-ಆಪರೇಟಿವ್ ಫೆಡರಲ್‌ಯಿಂದ "ಶ್ರೇಷ್ಠ ಸಹಕಾರಿ" ಪ್ರಶಸ್ತಿಯು ಲಭಿಸಿದೆ.



## ಡಾ॥ ಆನಂದತೀರ್ಥ ಫಡ್ನೀಸ್

ಶ್ರೀಯುತರು ವೃತ್ತಿಯಲ್ಲಿ ವೈದ್ಯರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಹಲವು ವರುಷಗಳ ಕಾಲ ಮಹಾಸಭಾದ ರಾಯಚೂರು ಶಾಖೆಯ ಸಭಾಪತಿಗಳಾಗಿ ಸೇವೆ ಸಲ್ಲಿಸಿದ್ದಾರೆ ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರಾಗಿಯೂ ಸೇವೆ ಸಲ್ಲಿಸಿದ್ದಾರೆ.



## ಶ್ರೀ ನಟರಾಜ ಭಾಗವತ್

ಶ್ರೀಯುತರು ಯಶಸ್ವಿ ಉದ್ಯಮಿಗಳು ಹಾಗೂ ಸತತ ಮೂರು ಅವಧಿಗಳಿಂದ ಶಿವಮೊಗ್ಗ ಜಿಲ್ಲ ಬ್ರಾಹ್ಮಣ ಮಹಾಸಭಾದ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಹಾಗೂ ಶತಮಾನದ ಇತಿಹಾಸವಿರುವ ಜಿಲ್ಲಾ ಬ್ರಾಹ್ಮಣ ಮಹಾಸಭಾವು ಸಂಪೂರ್ಣ ಅಭಿವೃದ್ಧಿ ಉನ್ನತಿಗೆ ಇವರ ಕೊಡುಗೆ ಅಪಾರವಾಗಿದೆ



## ಶ್ರೀ ಡಿ.ವಿ. ರಾಜೇಂದ್ರ ಪ್ರಸಾದ್

ಶ್ರೀಯುತರು ವೃತ್ತಿಯಲ್ಲಿ ರಿಯಲ್ ಎಸ್ಟೇಟ್ ಉದ್ಯಮಿಗಳು. ಪ್ರವೃತ್ತಿಯಲ್ಲಿ ಸಮಾಜ ಸೇವಕರು ಹಾಗೂ ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿ ನಿರ್ದೇಶಕರಾಗಿ 2 ವರುಷಗಳಿಂದ ಸೇವೆ ಸಲ್ಲಿಸುತ್ತಿದ್ದಾರೆ. ಸತತ 11 ವರುಷಗಳಿಂದ ಗೌರಿಬಿದನೂರು ತಾಲ್ಲೂಕು ಶ್ರೀಕ್ಷೇತ್ರ ವಿದುರಾಶ್ವತ್ಥ ನಾರಾಯಣ ಸ್ವಾಮಿ ಕ್ಷೇತ್ರದ ವಿದುರಾಶ್ವತ್ಥ ಬ್ರಾಹ್ಮಣ ಸಂಘದ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಚಾಮರಾಜಪೇಟೆಯಲ್ಲಿರುವ ಶುಕ್ಲಯಜುರ್ವೇದ ಯಾಜ್ಞವಲ್ಕ್ಯಾಶ್ರಮದ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದಾರೆ.



## ಶ್ರೀ ಸಿ.ಕೆ. ರಾಮಮೂರ್ತಿ

ಶ್ರೀಯುತರು ಮೈಕೋ ಕಾರ್ಖಾನೆ ಯಲ್ಲಿ ಕಾರ್ಮಿಕ ಮುಖಂಡರಾಗಿ ಸೇವೆ ಸಲ್ಲಿಸಿದ್ದಾರೆ. ಎಂಪ್ಲಾಯಿಸ್ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿಯ ಉಪಾಧ್ಯಕ್ಷ ರಾಗಿ ಇಂಡಸ್ಟ್ರೀಯಲ್ ಪಾಸ್ ಬಿಲ್ಡಿಂಗ್ ಸೊಸೈಟಿಯ ಗೌರವಾಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ.

ಬೆಂಗಳೂರು ಮಹಾನಗರ ಪಾಲಿಕೆಯ ಸದಸ್ಯರಾಗಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ. ಜಯನಗರ 9ನೇ ಬ್ಲಾಕ್ ಕನ್ನಡ ಸಂಘದ ಪ್ರಧಾನ ಕಾರ್ಯದರ್ಶಿಯಾಗಿ, ಜಯನಗರ ಯೂತ್ ಕ್ಲಬ್ ಪ್ರಧಾನ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ್ದಾರೆ. ಪ್ರಸ್ತುತ ಭಾ.ಜ.ಪ.ದ ಬೆಂಗಳೂರು ಜಿಲ್ಲಾ ಪ್ರಧಾನ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ.



### ಶ್ರೀ ಶಶಿಭೂಷಣ್ ಹೆಗಡೆ

ಶ್ರೀಯುತರು ಕೃಷಿಕರು, ಉದ್ಯಮಿಗಳು, ಶಿಕ್ಷಣ ಪ್ರಸಾರಕ ಸಮಿತಿಯ (ಸಿದ್ದಾಪುರ) ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಜನತಾದಳ ಸೆಕ್ಯುಲರ್ ಪಕ್ಷದ, ರಾಜ್ಯ ಯುವ ಕಾರ್ಯಾಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದಾರೆ.



### ಶ್ರೀ ಪ್ರಮೋದ್ ಮನೋಳಿ

ಶ್ರೀಯುತರು ವೃತ್ತಿಯಲ್ಲಿ ಸಿವಿಲ್ ಕಂಟ್ರಾಕ್ಟರ್ ಆಗಿ ಸೇವೆ ಸಲ್ಲಿಸುತ್ತಿದ್ದಾರೆ. ಶ್ರೀಯುತರು ವೇದವ್ಯಾಸ ಕೋ–ಆಪರೇಟಿವ್ ಕ್ರೆಡಿಟ್ ಸೊಸೈಟಿಯ ನಿರ್ದೇಶಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಶ್ರೀರಾಮ ವಿದ್ಯಾ ಕೇಂದ್ರದ ಅಧ್ಯಕ್ಷರಾಗಿಯೂ ಹಾಗೂ ಲಕ್ಷ್ಮೀಶ ವಿದ್ಯಾಸಂಸ್ಥೆಯ ಕಾರ್ಯದರ್ಶಿಯಾಗಿಯೂ ಸೇವೆ ಸಲ್ಲಿಸುತ್ತಿದ್ದಾರೆ. ಅಲ್ಲದೆ ಹುಬ್ಬಳ್ಳಿ–ಧಾರವಾಡ ನಗರದ ಸ್ಥಳೀಯ ಸಂಸ್ಥೆಗಳಲ್ಲಿ ಸಕ್ರಿಯವಾಗಿ ಸಮಾಜ ಸೇವೆಯನ್ನು ಸಲ್ಲಿಸುತ್ತಿದ್ದಾರೆ. ಕೇಂದ್ರ ಕಾರ್ಯಕಾರಿಣಿಯಲ್ಲಿ ಸದಸ್ಯರಾಗಿ ಹಲವು ವರ್ಷಗಳಿಂದ ಸೇವೆ ಸಲ್ಲಿಸಿದ್ದಾರೆ.

### ಶ್ರೀ ಮಹೇಶ್ ಕಜೆ



ಶ್ರೀಯುತರು ಖ್ಯಾತ ನ್ಯಾಯವಾದಿಗಳು ಹಾಗೂ ಕರ್ನಾಟಕ ರಾಜ್ಯ ಕಾನೂನು ಸೇವಾ ಪ್ರಾಧಿಕಾರದ ಬೆಂಗಳೂರಿನ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ. ಪುತ್ತೂರು ವಕೀಲರ ಸಂಘದ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದಾರೆ.

### ಶ್ರೀಮತಿ ಪುಷ್ಪ ಅಯ್ಯಂಗಾರ್



ಶ್ರೀಯುತರು ಸ್ಥಳೀಯ ಸಂಘಸಂಸ್ಥೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡು, ವಿಪ್ರ ಕ್ಷೇಮಾಭಿವೃದ್ಧಿಗೆ ಅಪಾರವಾದ ಸೇವೆ ಸಲ್ಲಿಸುತ್ತಿದ್ದಾರೆ. ಮಹಾಸಭಾದ ಎಲ್ಲಾ ಕಾರ್ಯಕ್ರಮಗಳಲ್ಲಿ ಹಲವು ವರ್ಷಗಳಿಂದ ಸಕ್ರಿಯವಾಗಿ ಪಾಲ್ಗೊಂಡು ಸ್ಥಳೀಯ ಮಟ್ಟದಲ್ಲಿ ಮಹಾಸಭೆಯ ಬೆಳವಣಿಗೆಗೆ ಕಾರಣೀಭೂತರಾಗಿದ್ದಾರೆ.

ಇಂದ್ರಿಯ ಮನೋನಿಗ್ರಹಗಳು, ತಪಸ್ಸು, ಸಹನೆ, ನೇರವಾದ ನಡೆ-ನುಡಿ,
ಶಾಸ್ತ್ರಗಳ ಜ್ಞಾನ, ದೇಹ-ವಾಕ್-ಮನಸ್ಸುಗಳ ಶುಚಿತ್ವ,
ಇವು ಬ್ರಾಹ್ಮಣನಿಗೆ ಸ್ವಭಾವದಿಂದ ಹುಟ್ಟಿದ ಕರ್ಮಗಳು


**R. KRISHNAMURTHY B.E.**
**MANAGING PARTNER**

**M.R.K. INDUSTRIES**

B. 398 (B) 7th Cross, Peenya 1st Stage
BENGALURU-560 058
Mob. : 9972372101
Phone : +91-080 28370747, 28392549
E-mail : mrkrindustries@gmail.com
Website : www.mrk_industries.com

Kirloskar
Authorised

TUV NABCB QM 002
ISO 9001 : 2008 COMPANY

**MANUFACTURING OF : D.C. MOTORS**
**We undertake Repair/Rewinding/Servicing of DC/AC, Imported Machine Alternators, Millduty Machine, Repair & Mag. of Commutators Epoxy Spool Mag. & D.C. Machine Spare Parts.**

# ಅಷ್ಟಮೂರ್ತಿ ಶಿವ

–ಪ್ರೊ॥ ಎಂ.ಕೆ. ಶ್ರೀಧರ್



ಭಾರತೀಯ ಸಾಂಸ್ಕೃತಿಕ, ಧಾರ್ಮಿಕ ಮತ್ತು ದಾರ್ಶನಿಕ ಇತಿಹಾಸದಲ್ಲಿ, ಸೃಷ್ಟಿ ಸ್ಥಿತಿ ಲಯಗಳಲ್ಲಿ, ಲಯಕರ್ತನಾದ ಈಶ್ವರನ ಸ್ಥಾನ ಬಣ್ಣಿಸಲು ಅಸಾಧ್ಯ. ನಮ್ಮ ಪೌರಾಣಿಕ ಕಥೆಗಳ ಪ್ರಕಾರ ಮೇನಾದೇವಿ–ಹಿಮಾಲಯ ರಾಜನ ಅಳಿಯುನಾದ, ಪಾರ್ವತಿಯ ಪತಿಯಾದ ಈಶ್ವರನ ಮಹಿಮೆ, ಶಕ್ತಿ ಅಗಾಧವಾದದ್ದು. ಋಗ್ವೇದದಲ್ಲಿ ರುದ್ರನು ಹಾಗೂ ಭಯಂಕರನಾಗಿದ್ದ ಇವನು ನಂತರ ವೀರಕಾವ್ಯಗಳ ಮತ್ತು ಪೌರಾಣಿಕ ಯುಗದಲ್ಲಿ ಶಿವನಾಗಿ ಪರಿವರ್ತನೆ ಹೊಂದಿದ್ದು ಆಶ್ಚರ್ಯ.

ಈ ಪೌರಾಣಿಕ ಕಥೆಗಳ ಹಿನ್ನೆಲೆಯಲ್ಲಿ ಶಿವನ ಹಲವಾರು ಪ್ರಸಂಗಗಳು, ಕಥೆಗಳು ಮನಮೋಹಕವಾಗಿವೆ. ಶಿವನು ಮಂಗಳಸ್ವರೂಪಿ, ತಪಸ್ಸು ಮಾಡಿ ಒಲಿಸಿಕೊಂಡ ಭಕ್ತರಿಗೆ ಯಾವ ವಸ್ತುವನ್ನೂ ಬೇಡಿದರೂ ಕೊಟ್ಟವನು. ಲಂಕೇಶ್ವರನಾದ, ಪರಮಭಕ್ತನಾದ ರಾವಣನಿಗೆ ತನ್ನ ಆತ್ಮಲಿಂಗವನ್ನೇ ಕೊಟ್ಟನು. ಅವನ ಆದಿ – ಅಂತ್ಯಗಳನ್ನು ಹುಡುಕಲು ಹೋಗಿ ಬ್ರಹ್ಮ ಮತ್ತು ವಿಷ್ಣು ವಿಫಲರಾದರು. ಸದಾ ಯೋಗದಲ್ಲಿ ತೊಡಗಿಸಿಕೊಂಡು ಜಗತ್ತಿನ ಕಲ್ಯಾಣವನ್ನು ಬಯಸಿ ಪೂರೈಸಿದವನು ಈ ಈಶ್ವರ. ಲೋಕದ ಜನರಿಗೆ ರಾಕ್ಷಸರು, ದಾನವರು, ದೈತ್ಯರು ಮತ್ತು ಅಸುರರಿಂದ ತೊಂದರೆ ಉಂಟಾದಾಗ ಅವರನ್ನು ನಾಶ ಮಾಡಿ ಲೋಕಕಲ್ಯಾಣವನ್ನು ಉಂಟುಮಾಡಿದವನು ಈ ಶಿವನೇ.

ಇಂತಹ ಅರಿಭಯಂಕರನಾದ ಶಿವನು ಕಲಾತಪಸ್ವಿಯೂ ಹೌದು. ತನ್ನ ಡಮರುಗವನ್ನು ನುಡಿಸುತ್ತಾ, ತನ್ನ ಪತ್ನಿ ಪಾರ್ವತಿಯೊಂದಿಗೆ ಮಾಡುವ ತಾಂಡವ–ಲಾಸ್ಯ ನೃತ್ಯವೂ ಅಮೋಘವಾದದ್ದು. ಇಂತಹ ನೃತ್ಯವನ್ನು ಮಾಡುತ್ತಲೇ ಸಂಸ್ಕೃತದ ವರ್ಣಮಾಲೆಯನ್ನು ಪಾಣಿನೀ ಮಹರ್ಷಿಗೆ ನೀಡಿದ ಜಗತ್ತಿನ ಪ್ರಪ್ರಥಮ ವ್ಯಾಕರಣಶಾಸ್ತ್ರಜ್ಞನು ಇವನೇ.

ಪೌರಾಣಿಕ ಹಾಗೂ ವೀರ ಕಾವ್ಯಗಳು ಮತ್ತು ಶಾಸ್ತ್ರೀಯ ಕಾವ್ಯಗಳಲ್ಲಿ ಈಶ್ವರನನ್ನು ಎಂಟು ಮೂರ್ತಿಗಳನ್ನುಳ್ಳ ದೇವರನ್ನಾಗಿ ಚಿತ್ರಿಸಲಾಗಿದೆ. ಅವೇ ಪಂಚಮಹಾಭೂತಗಳಾದ ಪೃಥಿವೀ, ನೀರು, ತೇಜಸ್ಸು, ವಾಯು, ಆಕಾಶ, ಸೂರ್ಯ, ಚಂದ್ರ ಮತ್ತು ಯಜಮಾನ. ಈ ಜಗತ್ತು ಮತ್ತು ಜಗತ್ತಿನ ಎಲ್ಲ ಚೇತನ ವಸ್ತುಗಳೂ ಪಂಚಮಹಾಭೂತಗಳಿಂದ ಮಾಡಲ್ಪಟ್ಟಿವೆ. ಸೂರ್ಯ– ಚಂದ್ರರು ಜಗತ್ತಿನ ಕಾಲ, ಉದಯ– ಅಸ್ತಮಾನಗಳನ್ನು ಸೂಚಿಸುವರು. ಯಜ್ಞಯಾಗಾದಿಗಳನ್ನು ಮಾಡುವಾಗ, ಯಜಮಾನನು ಬಹಳ ಮುಖ್ಯ. ಯಜಮಾನನ ದೈವಿಕ ಸ್ವರೂಪವೇ ಈಶ್ವರನೆಂದು ಭಾವಿಸಲಾಗಿದೆ. ಪ್ರಸಿದ್ಧ ಸಂಸ್ಕೃತ ಕವಿ ನಾಟಕಕಾರನಾದ ಕಾಳಿದಾಸನು ಈಶ್ವರನನ್ನು ಎಂಟು ಮೂರ್ತಿಗಳನ್ನು ಉಳ್ಳ ಭಗವಂತನೆಂದು ತನ್ನ ಗ್ರಂಥಗಳಲ್ಲಿ ಪ್ರಶಂಸಿಸುತ್ತಾನೆ. (**ನನು ಮೂರ್ತಿಭಿಃ ಅಷ್ಟಾಭಿಃ ಇತ್ಥಂ ಭೂತೋಽಸ್ಮಿ ಸೂಚಿತಃ**।)

ಈಶ್ವರನ ಸ್ವರೂಪವೇ ಅತ್ಯಂತ ಸಂಕೀರ್ಣವಾದದ್ದು. ಅವನು ದಿಗಂಬರ ಅಥವಾ ಜಿಂಕೆ ಮತ್ತು ಆನೆಯ ಚರ್ಮಗಳನ್ನು ವಸ್ತ್ರಗಳನ್ನಾಗಿ ಧರಿಸಿರುವವನು. ವಿಷಪೂರಿತ ಹಾವುಗಳನ್ನು, ಚಂದ್ರನನ್ನು, ಗಂಗೆಯನ್ನು ಆಭರಣಗಳನ್ನಾಗಿ ಧರಿಸಿದ್ದಾನೆ. ಅವನ ಜಟಾಜೂಟವು ಅಷ್ಟ ದಿಕ್ಕುಗಳಲ್ಲೂ ಪಸರಿಸಿದೆ. ತನ್ನ ಎಡಗಾಲಿನಿಂದ ಗಜಾಸುರನ್ನು ತುಳಿದು ಬಲಗಾಲನ್ನು ಮೇಲೆತ್ತಿ, ತನ್ನ ನಾಲ್ಕು ಭುಜಗಳ ಮೂಲಕ ನಾಟ್ಯ ಭಂಗಿಯಲ್ಲಿ ಪ್ರದರ್ಶನ ನೀಡಿರುವುದು, ವೃತ್ತದ ಹಿನ್ನೆಲೆಯಲ್ಲಿ ರುವುದು ಅಮೋಘವಾದದ್ದು. ಜಗತ್ಪ್ರಸಿದ್ಧ ಭಾರತೀಯಶಾಸ್ತ್ರಜ್ಞರಾದ ಡಾ॥ ಆನಂದ ಕೆಂಟಿಷ್ ಕುಮಾರಸ್ವಾಮಿಯವರ ಪ್ರಕಾರ ಈಶ್ವರು ಧರಿಸಿರುವ ಚೇತನ–ಅಚೇತನ ವಸ್ತುಗಳು ಸಾಂಕೇತಿಕವಾದವು. ವಿಷಪೂರಿತ ಹಾವುಗಳು ದುಷ್ಟಶಕ್ತಿಗಳ ಹಾಗೂ ಅದರ ದಮನದ ಸಂಕೇತ. ಸೋಮನು ಸಮಸ್ತ ಸಸ್ಯ ರಾಶಿಯನ್ನು ಸೂಚಿಸಿದರೆ, ಶಿವನ ತಲೆಯ ಮೇಲಿರುವ ಗಂಗೆಯು ಜಗತ್ತಿಗೆ ಮೂಲಾಧಾರವಾದ ನೀರು ಅಥವಾ ಜೀವನ ಪ್ರವಾಹವನ್ನು ಸೂಚಿಸುತ್ತದೆ. ಅವನು ಧರಿಸಿರುವ ಜಿಂಕೆ ಹಾಗೂ ಆನೆ ಚರ್ಮಗಳು ಸಮಸ್ತ ಪ್ರಾಣಿಲೋಕವನ್ನು ಪ್ರತಿನಿಧಿಸುತ್ತವೆ. ಅವನು ನೃತ್ಯ ಮಾಡುವುದು ಅನಂತವಾದ ಆಕಾಶ ಅಥವಾ ಸಾಂಕೇತಿಕವಾಗಿ ಚೈತನ್ಯವೆಂಬ ಆಕಾಶ. ಅವನ ಡಮರುಗವು ನಾದಬ್ರಹ್ಮದ, ತ್ರಿಶೂಲವು, ಮೂರು ಲೋಕಗಳು, ಸತ್ತ್ವ, ರಜಸ್ ಮತ್ತು ತಮಸ್ಸುಗಳ ಸಂಕೇತ. ಅವನ ವಾಹನವಾದ ಶ್ವೇತವರ್ಣದ ಗೂಳಿಯು ಬಲಿಷ್ಠ ಶಕ್ತಿಯ, ಸ್ವಚ್ಛತೆ, ಪರಿಶುದ್ಧತೆಯ ಸಂಕೇತ.

ಭಾರತೀಯ ಧಾರ್ಮಿಕ ಏಕತೆಯನ್ನು ಸಾರುವ ಶಿವ ಮಹಿಮೆಯನ್ನು ಸೂಚಿಸುವ ಅತ್ಯಂತ ಪ್ರಾಚೀನವಾದ ಹನ್ನೆರಡು ಜ್ಯೋತಿರ್ಲಿಂಗಗಳನ್ನು ನಮ್ಮ ದೇಶದ ಹಲವು ಭಾಗಗಳಲ್ಲಿ

ಸ್ಥಾಪಿಸಿದ್ದು ಅವಕ್ಕೆ ತಮ್ಮದೇ ಆದ ಪೌರಾಣಿಕ ಐತಿಹ್ಯವಿದೆ. ಅವುಗಳು ಯಾವುದೆಂದರೆ – ಸೋಮನಾಥ, ಮಲ್ಲಿಕಾರ್ಜುನ, ಮಹಾಕಾಳೇಶ್ವರ, ಓಂಕಾರೇಶ್ವರ, ಕೇದಾರನಾಥ, ಭೀಮಾಶಂಕರ, ವಿಶ್ವನಾಥ, ತ್ರ್ಯಂಬಕೇಶ್ವರ, ವೈದ್ಯನಾಥ, ನಾಗೇಶ್ವರ, ರಾಮೇಶ್ವರ ಹಾಗೂ ಘೃಷ್ಣೇಶ.

ಜಗತ್ತಿಗೆ ಓಂಕಾರವನ್ನು ನೀಡಿದ, ರಾಜಯೋಗವನ್ನು ದಯಪಾಲಿಸಿದ, ಆದಿಯೋಗಿಯಾದ ಈಶ್ವರನನ್ನು ಕೇವಲ ಪ್ರಣವಧ್ಯಾನದಿಂದ, ಪಂಚಾಕ್ಷರಿಯಾದ **"ಓಂ ನಮಃ ಶಿವಾಯ"** ಎಂಬ ಮಂತ್ರಜಪದಿಂದ ಅಥವಾ ಒಂದು ಬಿಲ್ವಪತ್ರೆ, ಜಲಾಭಿಷೇಕದ (**ಜಲಾಭಿಷೇಕ ಪ್ರಿಯೋ ರುದ್ರಃ!**)ಮೂಲಕ ಒಲಿಸಿಕೊಳ್ಳಬಹು ದೆಂದರೆ ಭಕ್ತರ ಬಗ್ಗೆ ಅವನಿಗಿರುವ ಕರುಣಾಪಾರಮ್ಯ ವರ್ಣಿಸಲು ಅಸಾಧ್ಯವಾದುದು. ಇಂತಹ ಸಂಕೀರ್ಣ ಹಾಗೂ ವಿರೋಧಾಭಾಸ ಗುಣಗಳಿಂದ ಕೂಡಿದ ಕೈಲಾಸಮೂರ್ತಿ, ಪಾರ್ವತಿ ಮತ್ತು ಮಕ್ಕಳಾದ ಸ್ಕಂದ ಮತ್ತು ಗಣೇಶನೊಂದಿಗೆ ಕುಟುಂಬಪ್ರಿಯನಾದ ಪರಶಿವನಿಗೆ ಪ್ರಣಾಮಗಳು.

**ಇಂತಹ ಪರಮಶಿವನು ನಮ್ಮೆಲ್ಲರಿಗೂ ಸನ್ಮಂಗಳವನ್ನು ಉಂಟುಮಾಡಲಿ ಎಂದು ಪ್ರಾರ್ಥಿಸುತ್ತೇವೆ.**

## ನವೀಕೃತ ಲಿಫ್ಟ್ ಉದ್ಘಾಟನೆ




ದಿನಾಂಕ 04–03–2022ರಂದು ಮಹಾಸಭಾದ ಗಾಯತ್ರೀ ಭವನದ ಕೇಂದ್ರ ಕಚೇರಿಯಲ್ಲಿ ನವೀಕೃತ ಲಿಫ್ಟ್ ಸೌಲಭ್ಯಕ್ಕೆ ಮಹಾಸಭಾದ ಅಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿಯವರು ಉದ್ಘಾಟಿಸಿ ಚಾಲನೆ ನೀಡಿದರು.

ಜಾಹಿರಾತು

digital
AddSense

# 244/C, 2nd Main, 32nd Cross
7th Block, Jayanagar, Bangalore-560 082
Mob. : +91 98863 17070
Email : karthikmuniraju@digitaladdsense.com
karthikmuniraju@gmail.com

## ಮರೆಯಲಾಗದ ಮಹನೀಯರು

# ಸೋಪ್ ಶಾಸ್ತ್ರಿಗಳು



-ಸುರೇಶ್ ಮೂನ

ಇಂದು ಮಾರುಕಟ್ಟೆಯಲ್ಲಿ ಹಲವಾರು ರೀತಿಯ ಮೈಸಾಬೂನು ಗಳಿದ್ದರೂ ಕಳೆದ  ಒಂದು ಶತಮಾನಕ್ಕೂ ಹಿಂದಿನಿಂದಲೂ ಮೈಸೂರಿನ ಗಂಧದ ಎಣ್ಣೆಯ ಕಂಪನ್ನು ವಿಶ್ವದಾದ್ಯಂತ ಪಸರಿಸಿ ಬೆಂಗಳೂರು ಮತ್ತು ಕರ್ನಾಟಕ ರಾಜ್ಯವನ್ನು ವಿಶ್ವ ಪ್ರಸಿದ್ಧ ಗೊಳಿಸಿರುವ ಸಾಬೂನು ಮೈಸೂರು ಸ್ಯಾಂಡಲ್ ಸೋಪ್ ಈ ಸಾಬೂನಿನ ತಯಾರಿಕೆಯ ವಿಧಾನವನ್ನು ರೂಪಿಸಿ ಇದನ್ನು ಒಂದು ಕೈಗಾರಿಕೆಯಾಗಿ ಅಭಿವೃದ್ಧಿಪಡಿಸಿದವರು ಎಸ್‌ಜಿ ಶಾಸ್ತ್ರೀ ಎಂದೇ ಪ್ರಸಿದ್ಧರಾಗಿದ್ದ ಸೋಸಲೆ ಗರಳಪುರಿ ಶಾಸ್ತ್ರೀ ಅವರು. ಕೈಗಾರಿಕಾ ತಂತ್ರಜ್ಞಾನ ಮತ್ತು ಸಾಹಿತ್ಯಕ್ಷೇತ್ರದ ವಿದ್ವತ್ತು ಸಮ ಪ್ರಮಾಣದಲ್ಲಿ ಒಂದೆಡೆ ಸೇರುವುದು ಅಪರೂಪವೇ. ಎಸ್‌ಜಿ ಶಾಸ್ತ್ರಿಗಳು ಅಂತಹ ಅಸಾಮಾನ್ಯ ವ್ಯಕ್ತಿಗಳು. ಬೆಂಗಳೂರಿನ ಮತ್ತು ನಮ್ಮ ನಾಡಿನ ಕೈಗಾರಿಕಾಭಿವೃದ್ಧಿಗೆ ಇವರು ಹೇಗೆ ಕಾರಣರಾಗಿದ್ದರೋ ಹಾಗೆಯೇ ಇಲ್ಲಿನ ಸಾಹಿತ್ಯ ಕ್ಷೇತ್ರಕ್ಕೂ ಗಣನೀಯವಾದ ಸೇವೆಯನ್ನು ಸಲ್ಲಿಸಿದ್ದಾರೆ. ದಕ್ಷಿಣ ಬೆಂಗಳೂರಿನ ಪ್ರೊ. ಬಿ ಎಸ್ ಮಾಧವರಾವ್ ವೃತ್ತದಿಂದ ಲಾಲ್‌ಬಾಗ್ ಪಶ್ಚಿಮ ದ್ವಾರದ ಕಡೆಗೆ ಹೋಗುವ ರಸ್ತೆಯ ಬಲ ಬದಿಗೆ ಎಸ್‌ಜಿ ಶಾಸ್ತ್ರಿಗಳು ವಾಸವಾಗಿದ್ದ ಮನೆಯು ಈಗಲೂ ತನ್ನ ಮೂಲ ಸ್ವರೂಪದೊಂದಿಗೆ ಹಾಗೆಯೇ ಇದ್ದು ಅಲ್ಲಿ ಅವರ ಮನೆತನದವರು ವಾಸವಾಗಿದ್ದಾರೆ.

ದಿವಾನ್ ಸರ್. ಎಂ ವಿಶ್ವೇಶ್ವರಯ್ಯನವರಿಗೆ ಜನ ಸಾಮಾನ್ಯರ ಬಳಕೆಗೆ ಅನುಕೂಲವಾಗುವಂತಹ ಸುಗಂಧ ಪೂರಿತವಾದ ಸಾಬೂನನ್ನು ಬೆಂಗಳೂರಿನಲ್ಲೇ ತಯಾರಿಸುವಂತಾಗಬೇಕೆಂಬ ಅಭಿಲಾಷೆಯಿತ್ತು. ಆಗ ಇಲ್ಲಿನ ಟಾಟಾ ಸಂಶೋಧನಾ ಸಂಸ್ಥೆಯಲ್ಲಿ ಸಂಶೋಧನೆಯಲ್ಲಿ ತೊಡಗಿದ್ದ ಎಸ್‌ಜಿ ಶಾಸ್ತ್ರಿ ಅವರ ಪ್ರತಿಭೆಯ ಪರಿಚಯವಾಗಿ ಅವರನ್ನು ಈ ಬಗ್ಗೆ ಹೆಚ್ಚಿನ ವ್ಯಾಸಂಗಕ್ಕಾಗಿ ಇಂಗ್ಲೆಂಡಿಗೆ ಕಳುಹಿಸಿದರು. ಇವರು ಮುಖ್ಯವಾಗಿ ತೈಲ ಮತ್ತು ಸಾಬೂನು ತಯಾರಿಕೆಯ ತಂತ್ರಜ್ಞಾನದ ಬಗ್ಗೆ ಪರಿಣಿತಿಯನ್ನು ಪಡೆದು ಬರಲಿ ಎಂಬುದು ಅವರ ಆಶಯವಾಗಿತ್ತು. ಈ ಬಗ್ಗೆ ಆಗಿನ ಮೈಸೂರು ಮಹಾರಾಜರಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರೂ ವಿಶೇಷವಾದ ಆಸಕ್ತಿಯನ್ನು ತೋರಿದರು.

ಇಂಗ್ಲೆಂಡಿಗೆ ತೆರಳಿದ ಶಾಸ್ತ್ರಿಗಳಿಗೆ ಈ ಬಗ್ಗೆ ಮಾಹಿತಿ ಪಡೆಯುವುದು ಸುಲಭದ ಕೆಲಸವಾಗಿರಲಿಲ್ಲ. ಆದರೂ ಅಲ್ಲಿನ ಸವಾಲುಗಳನ್ನು ಧೈರ್ಯವಾಗಿ ನಿಭಾಯಿಸಿಕೊಂಡು ಲಂಡನ್ನಿನ ಒಂದು ಕಾರ್ಖಾನೆಯಲ್ಲಿ ಸಾಬೂನು ತಯಾರಿಕೆಯ ಬಗ್ಗೆ ವಿವರವಾಗಿ ಅಧ್ಯಯನ ಮಾಡಿದರು.

ಎಸ್‌ಜಿ ಶಾಸ್ತ್ರಿಗಳು ಹಿಂತಿರುಗಿ ಬರುವುದನ್ನು ಮಹಾರಾಜರು ಮತ್ತು ಸರ್ ಎಂವಿ ಅವರು ಬಹಳ ಕಾತುರದಿಂದ ಕಾಯುತ್ತಿದ್ದರು. ಹೀಗಾಗಿ ಶಾಸ್ತ್ರಿಗಳ ಹೆಗಲ ಮೇಲೆ ನಿರೀಕ್ಷೆಗಳ ಬಹು ದೊಡ್ಡ ಭಾರವಿತ್ತು. ತಾವು ಕಲಿತು ಬಂದ ವಿಧಾನವನ್ನು ಇಲ್ಲಿ ತಯಾರಾಗುತ್ತಿದ್ದ ಗಂಧದ ಎಣ್ಣೆಯೊಂದಿಗೆ ಸಾಬೂನನ್ನು ತಯಾರಿಸುವ ಕ್ರಮಕ್ಕೆ ಹೊಂದಿಸಿಕೊಳ್ಳಬೇಕಿತ್ತು. ಹಗಲೂ ರಾತ್ರಿಯೆನ್ನದೆ ಅಪಾರವಾದ ಶ್ರದ್ಧೆ ಮತ್ತು ಜವಾಬ್ದಾರಿಯೊಂದಿಗೆ ಅವರು ಮಾಡಿದ ಪ್ರಯೋಗಗಳು ಫಲಪ್ರದವಾದವು. 1918ರಲ್ಲಿ ಅವರು ಗಂಧದ ಎಣ್ಣೆಯ ಅತ್ಯಂತ ಸುಗಂಧಭರಿತ ಸಾಬೂನನ್ನು ತಯಾರಿಸಿದರು. ಇದನ್ನು ಕಂಡು ಮಹಾರಾಜರಿಗೆ ಮತ್ತು ದಿವಾನರಿಗೆ ಅತೀವವಾದ ಆನಂದವಾಯಿತು. ಬಹು ಬೇಗ ಇದು ಮೈಸೂರ್ ಸ್ಯಾಂಡಲ್‌ಸೋಪ್ ಎಂಬ ಹೆಸರಿನಿಂದ ಪ್ರಸಿದ್ಧ ವಾಯಿತಲ್ಲದೆ ಇದರ ಜನಕ ಶಾಸ್ತ್ರಿಗಳೂ **'ಸೋಪ್ ಶಾಸ್ತ್ರಿಗಳು'** ಎಂದೇ ಮನೆಮಾತಾದರು.

ಎಸ್.ಜಿ ಶಾಸ್ತ್ರಿಗಳಿಗೆ ಈ ಸೋಪು ವಿಶ್ವದ ಎಲ್ಲ ಸಾಬೂನು ಗಳಿಗಿಂತ ಬೇರೆಯಾಗಿರಬೇಕೆಂಬ ಹಂಬಲವಿತ್ತು. ಹೀಗಾಗಿ ಇದಕ್ಕೆ ಸುಂದರವಾದ .ಓವಲ್ ಆಕಾರವನ್ನು, ಪೌರಾಣಿಕ ಪ್ರಾಣಿ ಶರಭದ ಚಿಹ್ನೆಯನ್ನು ನೀಡಿದರು. ಇದರ ಪ್ಯಾಕಿಂಗ್ ವರ್ಣರಂಜಿತವಾದ ಆಭರಣದ ಪೆಟ್ಟಿಗೆಯ ಮಾದರಿಯಲ್ಲಿತ್ತು. ಆಭರಣಗಳನ್ನು ಸುತ್ತುವಂತೆ ತೆಳ್ಳನೆಯ ಟಿಷ್ಯೂ ಹಾಳೆಯಲ್ಲಿ ಸೋಪನ್ನು ಸುತ್ತಿದ್ದರು. ಹೀಗೆ ನಮ್ಮ ನಾಡಿನ ಸಂಸ್ಕೃತಿ ಮತ್ತು ಪರಂಪರೆಯನ್ನು ಒಂದು ಸೋಪಿನ ಮೂಲಕ ವಿಶ್ವವ್ಯಾಪಿಗೊಳಿಸಿದ ಹೆಗ್ಗಳಿಕೆ ಎಸ್‌ಜಿ ಶಾಸ್ತ್ರಿಗಳದ್ದು.

ಸುಮಾರು ಐದಾರು ದಶಕಗಳ ಹಿಂದೆ ನಮ್ಮ ನಾಡಿನ ಶಾಲೆಗಳಲ್ಲಿ ಸಾಮಾನ್ಯವಾಗಿ ಶಾಲೆಯ ತರಗತಿಗಳು ಪ್ರಾರಂಭವಾಗುವುದಕ್ಕೆ ಮುಂಚೆ ವಿದ್ಯಾರ್ಥಿಗಳು ಸಾಮೂಹಿಕವಾಗಿ ಮಾಡುತ್ತಿದ್ದ ಪ್ರಾರ್ಥನೆ, 'ಸ್ವಾಮಿ ದೇವನೆ ಲೋಕಪಾಲನೆ ತೇ ನಮೋಸ್ತು ನಮೋಸ್ತುತೆ'. ಇದನ್ನು ಬರೆದವರು ಎಸ್‌ಜಿ ಶಾಸ್ತ್ರಿಗಳ ತಂದೆಯವರೂ ವಿದ್ವಾಂಸರೂ ಆಗಿದ್ದ ಸೋಸಲೆ ಅಯ್ಯಾ ಶಾಸ್ತ್ರಿಗಳು. 'ಸ್ಕೂಲ್ ಮಾಸ್ಟರ್' ಕನ್ನಡ ಚಿತ್ರದಲ್ಲಿ ಬಳಕೆಯಾದ ನಂತರ ಇದು ಮನೆಮಾತಾದ ಪ್ರಾರ್ಥನಾ ಗೀತೆಯಾಯಿತು.

## ಅಪೂರ್ವ ಸಂಶೋಧಕ–ಪ್ರಸಿದ್ಧ ಅಂಕಣಕಾರ ಸುರೇಶ್ ಮೂನ

**ಖ್ಯಾತ ವಿದ್ವಾಂಸರು, ಅಪೂರ್ವ ಸಂಶೋಧಕರು, ಜನಪ್ರಿಯ ಅಂಕಣಕಾರರು ಆಗಿರುವ ಶ್ರೀ ಸುರೇಶ ಮೂನ ರವರು ವಿಪ್ರನುಡಿ ಯಲ್ಲಿ 'ಮರೆಯಲಾದ ಮಹನೀಯರು' ಶೀರ್ಷಿಕೆಯಡಿಯಲ್ಲಿ ಪ್ರತಿತಿಂಗಳು ಲೇಖನ ಮಾಲೆಯನ್ನು ನೀಡಲು ಒಪ್ಪಿರುವುದಕ್ಕೆ ಮಹಾಸಭೆಯು ಶ್ರೀಯುತರನ್ನು ಅಭಿನಂದಿಸುತ್ತದೆ.**

ತುಮಕೂರು ಜಿಲ್ಲೆ ಗುಬ್ಬಿ ತಾಲೂಕಿನ ಮೂಕನಹಳ್ಳಿ ಪ್ರಸಿದ್ಧ ರಂಗ ಕಲಾವಿದರಾದ ನಟಭಯಂಕರ ಗಂಗಾಧರ ರಾಯರ ಮನೆತನಕ್ಕೆ ಸೇರಿದ ಶ್ರೀ ಸುರೇಶ್ ಮೂನ ಅವರು ನಿವೃತ್ತ ಶಿಕ್ಷಕರು ಮತ್ತು ಎನ್‌ಸಿಸಿ ಅಧಿಕಾರಿಗಳು. ಕಳೆದ ನಲವತ್ತು ವರ್ಷಗಳಿಂದ ಬೆಂಗಳೂರು ನಗರದ ಬಗ್ಗೆ ಆಳವಾದ ಅಧ್ಯಯನ ನಡೆಸಿರುವ ಇವರು, ತಾವು ಪಡೆದ ಜ್ಞಾನವನ್ನು ಜನಸಾಮಾನ್ಯರಿಗೂ ತಲುಪಿಸ ಬೇಕೆಂಬ ಉದ್ದೇಶದಿಂದ AARAMBH (An Association for Reviving Awareness about Monuments of Bangalore Heritage) ಎಂಬ ಸೇವಾ ಸಂಸ್ಥೆಯನ್ನು ಪ್ರಾರಂಭಿಸಿ ಅದರ ಮೂಲಕ ಬೆಂಗಳೂರಿನ ಬಗ್ಗೆ ಸ್ಲೈಡ್ ಷೋ, ASIAN AGE, DECCAN HERALD,TIMES OF INDIA, BNAGALORE MIRROR, THE HINDU ಈ ಪತ್ರಿಕೆಗಳಲ್ಲಿ ಅಂಕಣಗಳ ಬರಹ, ಚಿತ್ರ ಪ್ರದರ್ಶನ ಮುಂತಾದ ಹತ್ತು ಯೋಜನೆಗಳನ್ನು ನಡೆಸಿಕೊಂಡು ಬಂದಿದ್ದಾರೆ. ಹಾಗೆಯೇ ಕನ್ನಡದಲ್ಲಿ ವಿಜಯ ಕರ್ನಾಟಕ, ಉಷಾಕಿರಣ, ಮಂಗಳ ಈ ಪತ್ರಿಕೆಗಳಲ್ಲಿ ದೀರ್ಘ ಕಾಲ ಅಂಕಣಗಳನ್ನು ಬರೆದಿದ್ದಾರೆ. ಬಹಳ ಮುಖ್ಯವಾಗಿ ಉದಯವಾಣಿ ಪತ್ರಿಕೆಯ ನಮ್ಮ ಬೆಂಗಳೂರು ಪುರವಣಿಯಲ್ಲಿ 2001ರಿಂದ 2010ರ ವರೆಗೆ ಸತತವಾಗಿ ಹತ್ತು ವರ್ಷಗಳ ಕಾಲ'ಬೆಂಗಳೂರು ಇತಿಹಾಸ ಮಾಲೆ' ಅಂಕಣದ ಮೂಲಕ 1500ಕ್ಕೂ ಹೆಚ್ಚು ಲೇಖನಗಳನ್ನು ಬರೆದಿರುವುದು ನಮ್ಮ ದೇಶದ ಪತ್ರಿಕೋದ್ಯಮದಲ್ಲೇ ಒಂದು ಅಪರೂಪದ ದಾಖಲೆಯಾಗಿದೆ.

ಹಿಂದು, ಇಂಡಿಯನ್ ಎಕ್ಸ್‌ಪ್ರೆಸ್, ಟೈಮ್ಸ್ ಆಫ್ ಇಂಡಿಯಾ ಮತ್ತು ಎಲ್ಲಾ ಆಂಗ್ಲ ಮತ್ತು ಕನ್ನಡ ಪತ್ರಿಕೆಗಳ ಪ್ರಖ್ಯಾತ ಅಂಕಣಕಾರರು.

'ಮೈಸೂರು ಬ್ಯಾಂಕ್ ಹೆಜ್ಜೆ ಗುರುತುಗಳು', 'ಭಾರತ ಸೇವಾದಳ', 'ಮಂಡಯಂ ನಾಡಶಿಲ್ಪಿಗಳು', 'ಇದು ನಮ್ಮ ಬೆಂಗಳೂರು', ಇವೆಲ್ಲಾ ಈ ನಗರದ ಬಗ್ಗೆ ಇವರು ಬರೆದಿರುವ ಪುಸ್ತಕಗಳು. 2014ರಲ್ಲಿ ಸುಮಾರು ಒಂದು ಸಾವಿರ ಪುಟಗಳ ಮೂರು ಸಂಪುಟಗಳಲ್ಲಿರುವ 'ಬೆಂಗಳೂರು ನಗರ ನಿರ್ಮಾಪಕರು' ಮತ್ತು 'ಕರ್ನಾಟಕದಲ್ಲಿ ಸ್ವಾಮಿ ವಿವೇಕಾನಂದರು ಮತ್ತು ಅವರ ಪ್ರಭಾವ' 'ಮಹಾಮಹಿಮ ಹರಕೆ ಹನುಮ', 'ಕೆಂಪೇಗೌಡರು – ಒಂದು ವೈಜ್ಞಾನಿ ಅವಲೋಕನ' ಮುಂತಾದ ಮೌಲ್ಯಯುತ ಕೃತಿಗಳನ್ನು ರಚಿಸಿದ್ದಾರೆ.

ತಮ್ಮ ಈ ಅಪ್ರತಿಮ ಸಾಧನೆಯಿಂದಾಗಿ ಬಿಬಿಎಂಪಿ ಅವರ ಕೆಂಪೇಗೌಡ ಪ್ರಶಸ್ತಿ, ಆರ್ಯಭಟ ಪ್ರಶಸ್ತಿ, ಬಿಗ್ ಎಫ್‌ಎಂ ರೇಡಿಯೋದ ಬಿಗ್ ಕನ್ನಡಿಗ ಪ್ರಶಸ್ತಿ, ವಿನಯಶ್ರೀ ಪ್ರಶಸ್ತಿ, ಇನ್ನೂ ಮುಂತಾದ ಹಲವಾರು ಪ್ರಶಸ್ತಿಗಳು ಲಭಿಸಿವೆ.

ಸ್ವಾಮಿ ವಿವೇಕಾನಂದರ ಚಿಂತನೆ ಮತ್ತು ಆದರ್ಶಗಳಿಂದ ಪ್ರಭಾವಿತರಾಗಿರುವ ಇವರು, ಯಾರು ತನ್ನ ಪೂರ್ವಜರ ಹಿರಿಮೆ–ಗರಿಮೆ ಸಾಧನೆಗಳನ್ನು ಪ್ರತಿಯೊಬ್ಬರ ಮನೆಯ ಬಾಗಿಲಿಗೆ ತಲುಪಿಸುತ್ತಾನೋ ಆವನು ಸಮಾಜದ ನಿಜವಾದ ಹಿತಚಿಂತಕ ಎಂಬ ಸ್ವಾಮಿ ವಿವೇಕಾನಂದರ ಅಭಿಪ್ರಾಯವನ್ನು ಇವರು ತಮ್ಮ ಜೀವನದಲ್ಲಿ ಅಳವಡಿಸಿಕೊಡಿದ್ದಾರೆ. ನಾನು ಒಂದು ಹಣತೆಯಂತೆ. ನನ್ನ ಸುತ್ತ ಮುತ್ತಲೂ ಒಂದಿಷ್ಟು ಬೆಳಕನ್ನು ಚೆಲ್ಲಲು ಪ್ರಯಸು ತ್ತಿದ್ದೇನೆ ಅಷ್ಟೇ ಎನ್ನುತ್ತಾರೆ ಸುರೇಶ್ ಮೂನ.

## ಸೂಚನೆ

**ಮಹಾಸಭಾಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿಯವರು ಈಗಿರುವ ಸದಸ್ಯರ ಪಟ್ಟಿಯನ್ನು ಪರಿಶೀಲಿಸಿ ಪರಿಷ್ಕರಣೆ ಮಾಡಲು ಶ್ರೀ ವಿ.ಸತ್ಯೇಂದ್ರರವರನ್ನು ಸಂಚಾಲಕರನ್ನಾಗಿ ನೇಮಿಸಿ ಉಪಸಮಿತಿಯನ್ನು ರಚಿಸಿರುತ್ತಾರೆ.**

**ಸಂಚಾಲಕರು ಮಹಾಸಭಾದ ಕೇಂದ್ರಕಾರಿಣಿ ಸಭೆಯ ಸದಸ್ಯರನ್ನು ಸಂಪರ್ಕಿಸಿ ತಮ್ಮ ವ್ಯಾಪ್ತಿಗೆ ಬರುವ ಮಹಾಸಭಾ ಸದಸ್ಯರ ವಿವರವನ್ನು ಸಲ್ಲಿಸುವಂತೆ ಕೋರುತ್ತೇವೆ. ದಯಮಾಡಿ ಸಹಕರಿಸಬೇಕೆಂದು ವಿನಂತಿಸುತ್ತೇನೆ.**

**ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ : ವಿ. ಸತ್ಯೇಂದ್ರ –9844001238 ಎಸ್. ಶ್ರೀಧರಮೂರ್ತಿ–ಪ್ರಧಾನ ಕಾರ್ಯದರ್ಶಿ**

# ದಾನದ ರಹಸ್ಯ

(ಉಪದೇಶಪರ ಕಥೆಗಳಿಂದ ಆಯ್ದದ್ದು)

ದಾನದ ಮಹತ್ವವು ತ್ಯಾಗದಲ್ಲಿಯೇ ಹೊರತು, ವಸ್ತುವಿನ ಮೂಲ್ಯದಲ್ಲಾಗಲೀ, ಸಂಖ್ಯೆಯಲ್ಲಾಗಲೀ ಇಲ್ಲ. ಯಾವ ವಸ್ತುವಿನ ಅಭಾವ ಯಾರಿಗಿರುವುದೋ ಅಂತಹ ಸುಪಾತ್ರರಿಗೆ ಅ ವಸ್ತುವನ್ನು ಯಾವ ಪ್ರತಿಫಲ ಬಯಸದೇ ತ್ಯಾಗಬುದ್ಧಿಯಿಂದ ಕೊಡುವುದೇ ಉತ್ತಮವಾದ ದಾನವೆನ್ನಿಸುತ್ತದೆ. ನಿಷ್ಕಾಮ ಭಾವನೆಯಿಂದ ಹಸಿದವನಿಗೆ ಭೋಜನವನ್ನೂ, ಬಾಯಾರಿದವನಿಗೆ ನೀರನ್ನೂ ನೀಡುವುದು ಸಾತ್ವಿಕ ದಾನವೆನಿಸಿಕೊಳ್ಳುತ್ತದೆ. ಸಂತ ಏಕನಾಥರ ಜೀವನದಲ್ಲಿ ಬರುವ ಒಂದು ಪ್ರಸಂಗ ಹೀಗಿದೆ. ಒಂದು ಬಾರಿ ಅವರು ಕಾವಡಿಯಲ್ಲಿ ಗಂಗಾಜಲವನ್ನು ಹೊತ್ತುಕೊಂಡು ಪ್ರಯಾಗದಿಂದ ರಾಮೇಶ್ವರಕ್ಕೆ ದೇವರಿಗೆ ಅರ್ಪಿಸಲು ಹೋಗುತ್ತಿದ್ದರು. ರಸ್ತೆಯಲ್ಲಿ ಒಂದು ಕತ್ತೆಯು ಬಾಯಾರಿಕೆಯಿಂದ ನೀರಿಗಾಗಿ ಚಡಪಡಿಸುತ್ತಿರುವುದನ್ನು ನೊಡಿದರು. ಅದನ್ನು ನೋಡಿ ಅವರು ಕರುಣೆಯಿಂದ ಅದಕ್ಕೆ ಎಲ್ಲ ಗಂಗಾಜಲವನ್ನು ಕುಡಿಸಿದರು. ಆ ಕತ್ತೆಯು ನೀರು ಕುಡಿದು ಚೇತರಿಸಿಕೊಂಡು ಹೊರಟು ಹೋಯಿತು. ಜೊತೆಯವರು ತ್ರಿವೇಣಿಯ ಜಲವು ವ್ಯರ್ಥ ವಾದದ್ದಲ್ಲದೆ ಯಾತ್ರೆಯೂ ನಿಷ್ಫಲವಾಯಿತೆಂದು ಯೋಚಿಸಿದರು. ಆಗ ಏಕನಾಥರು ನಕ್ಕು ಹೇಳಿದರು. ಭಗವಂತನು ಎಲ್ಲ ಪ್ರಾಣಿಗಳಲ್ಲೂ ಇದ್ದಾನೆಂದು ಯಾವಾಗಲೂ ಕೇಳುತ್ತಿರುತ್ತೀರಿ, ಆದರೂ ಈ ರೀತಿಯಾಗಿ ಮೂರ್ಖತನದ ಯೋಚನೆ ಮಾಡುತ್ತಿರಲಿಲ್ಲ! ಈಗ ನನ್ನ ಪೂಜೆಯು ಇಲ್ಲಿಂದಲೇ ಶ್ರೀರಾಮೇಶ್ವರನಿಗೆ ಅರ್ಪಿತವಾಯಿತು. ಶ್ರೀ ಶಂಕರನು ನನ್ನ ಜಲವನ್ನು ಸ್ವೀಕರಿಸಿದ್ದಾನೆ.

**ಒಬ್ಬ ಸಜ್ಜನನ ಕಥೆ ಹೀಗಿದೆ :** ಅವನು ಯಾವಾಗಲೂ ಯಜ್ಞ ಮುಂತಾದ ಕರ್ಮಗಳಲ್ಲಿ ನಿರತನಾಗಿರುತ್ತಿದ್ದನು. ಅವನು ತನ್ನ ಸರ್ವಸ್ವವನ್ನೂ ದಾನ ಮಾಡಿದ್ದರಿಂದ ಅವನ ಹತ್ತಿರ ತಿನ್ನಲೂ ಸಹ ಏನೂ ಉಳಿದಿರಲಿಲ್ಲ. ಆಗ ಅವನ ಹೆಂಡತಿ ಹೇಳಿದಳು – ಪಕ್ಕದ ಸಾಹುಕಾರನು ಪುಣ್ಯ ಖರೀದಿಸುತ್ತಾನಂತೆ. ತಾವು ಅವನ ಹತ್ತಿರ ಹೋಗಿ ತಮ್ಮ ಸ್ವಲ್ಪ ಪುಣ್ಯವನ್ನು ಮಾರಿ ಹಣ ತೆಗೆದುಕೊಂಡು ಬನ್ನಿ, ತಮ್ಮ ತೊಂದರೆ ನಿವಾರಿಸಿಕೊಳ್ಳಲು ಸಹಾಯವಾಗುತ್ತದೆ. ಇಷ್ಟವಿಲ್ಲದೇ ಇದ್ದರೂ ಪದೇ ಪದೇ ಹೆಂಡತಿಯು ಒತ್ತಾಯ ಮಾಡಿ ಹೇಳಿದ್ದರಿಂದ ಹೋಗಲು ಅವನು ಸಿದ್ಧನಾದನು. ಅವನ ಹೆಂಡತಿಯು ಒತ್ತಾಯ ಮಾಡಿ ಹೇಳಿದ್ದರಿಂದ ಹೋಗಲು ಅವನು ಸಿದ್ಧನಾದನು. ಅವನ ಹೆಂಡತಿಯು ಅವನಿಗೆ ದಾರಿಯಲ್ಲಿ ತಿನ್ನಲು ನಾಲ್ಕು ರೊಟ್ಟಿಗಳನ್ನು ಮಾಡಿಕೊಟ್ಟದ್ದಳು. ಅವನು ಹೊರಟು ಸಾಹುಕಾರನು ಇದ್ದ ನಗರದ ಸಮೀಪಕ್ಕೆ ಬಂದನು. ಅಲ್ಲಿ ಒಂದು ಕೆರೆಯಿತ್ತು. ಅಲ್ಲಿಯೇ ಶೌಚ–ಸ್ನಾನಾದಿ ಕಾರ್ಯಗಳನ್ನು ಮುಗಿಸಿ ಅವನು ರೊಟ್ಟಿಯನ್ನು ತಿನ್ನಲು ಕುಳಿತನು. ಆ ಸಮಯದಲ್ಲಿ ಅಲ್ಲಿಗೆ ಒಂದು ಹೆಣ್ಣುನಾಯಿ ಬಂದಿತು. ಅದು ಆ ಕಾಡಿನಲ್ಲಿ ಮರಿಹಾಕಿತ್ತು. ಅದರ ಮರಿಗಳೂ ಮೂರು ದಿನಗಳಿಂದಲೂ ತಿನ್ನಲು ಏನೂ ಇಲ್ಲದೆ ಹಸಿದುಕೊಂಡಿದ್ದವು. ಭಾರಿ ಮಳೆ ಬಂದದ್ದರಿಂದ ಮರಿಗಳನ್ನು ಬಿಟ್ಟು ನಗರಕ್ಕೆ ಹೋಗಲು ಅದಕ್ಕೆ ಸಾಧ್ಯವಾಗಿರಲಿಲ್ಲ. ನಾಯಿಯು ಹಸಿದಿರುವುದನ್ನು ನೋಡಿ ಅವನು ಅದಕ್ಕೆ ಒಂದು ರೊಟ್ಟಿಯನ್ನು ಕೊಟ್ಟನು. ಅ ನಾಯಿಯು ಅದನ್ನು ತಿಂದಿತು. ಅವನು ಮತ್ತೊಂದು ರೊಟ್ಟಿಯನ್ನು ಕೊಟ್ಟನು. ಆ ನಾಯಿಯು ಅದನ್ನು ತಿಂದಿತು. ಅವನು ಮತ್ತೊಂದು ರೊಟ್ಟಿಯನ್ನು ಅದರ ಮುಂದೆ ಹಾಕಿದಾಗ ನಾಯಿಯು ಅದನ್ನೂ ತಿಂದಿತು. ಈ ಪ್ರಕಾರವಾಗಿ ಅವನು ಒಂದೊಂದಾಗಿ ನಾಲ್ಕು ರೊಟ್ಟಿಯನ್ನೂ ನಾಯಿಗೆ ಕೊಟ್ಟನು. ಎಲ್ಲ ರೊಟ್ಟಿಗಳನ್ನೂ ತಿಂದು ನಾಯಿಯು ತೃಪ್ತಿ ಹೊಂದಿತು. ಅವನು ಹಸಿವಿನಿಂದಲೇ ಆ ಧನಿಕನ ಮನೆಗೆ ಬಂದನು. ತಾನು ತನ್ನ ಪುಣ್ಯವನ್ನು ಮಾರಲು ಬಂದಿರುವುದಾಗಿ ಅವನಿಗೆ ಹೇಳಿದನು. ಧನಿಕನು ತಾವು ಮಧ್ಯಾಹ್ನದ ಮೇಲೆ ಬನ್ನಿ ಎಂದು ಹೇಳಿದನು.

ಆ ಧನಿಕನ ಪತ್ನಿಯು ಪತಿವ್ರತಾಸ್ತ್ರೀಯಾಗಿದ್ದಳು. ಅವನು ಹೆಂಡತಿಯನ್ನು ಕೇಳಿದನು. ಒಬ್ಬ ಸಜ್ಜನ ಮನುಷ್ಯನು ಬಂದಿದ್ದನು. ಅವನು ತನ್ನ ಪುಣ್ಯವನ್ನು ಮಾರುತ್ತೇನೆಂದು ಹೇಳುತ್ತಿದ್ದನು. ಅವನ ಪುಣ್ಯಗಳಲ್ಲಿ ಯಾವ ಪುಣ್ಯವು ಕೊಂಡುಕೊಳ್ಳಲು ಯೋಗ್ಯವಾಗಿದೆ ಎಂಬುದನ್ನು ನೀನು ಹೇಳು. ಹೆಂಡತಿಯು ಹೇಳಿದಳು– ಈ ದಿನ ಅವನು ಕೆರೆಯ ಹತ್ತಿರ ಕುಳಿತು ಒಂದು ಹಸಿದ ನಾಯಿಗೆ ನಾಲ್ಕು ರೊಟ್ಟಿಗಳನ್ನು ತಿನ್ನಿಸಿದ್ದಾನೆ. ಆ ಪುಣ್ಯವನ್ನು ಖರೀದಿಸಬಹುದು. ಏಕೆಂದರೆ ಅವನ ಜೀವನದಲ್ಲಿ ಅದಕ್ಕಿಂತ ಹೆಚ್ಚಿನ ಪುಣ್ಯವು ಇನ್ನೊಂದಿಲ್ಲ. ಧನಿಕನು – ಸರಿ, ಹಾಗೆ ಆಗಲಿ ಎಂದು ಹೇಳಿ ಹೊರಗೆ ಬಂದನು.

ನಿಗದಿತ ಸಮಯಕ್ಕೆ ಆ ಮನುಷ್ಯನು ಧನಿಕನ ಹತ್ತಿರ ಬಂದು ಹೇಳಿದನು– ತಾವು ನನ್ನ ಪುಣ್ಯಗಳಲ್ಲಿ ಯಾವ ಪುಣ್ಯವನ್ನು ಖರೀದಿಸುವಿರಿ? ಧನಿಕನು ಹೇಳಿದನು – ತಾವು ಈ ದಿನ ಮಾಡಿದ ಯಜ್ಞದ ಫಲವನ್ನು ಕೊಳ್ಳಲಿಚ್ಛಿಸುತ್ತೇನೆ. ಅವನು ಹೇಳಿದನು– ನಾನು ಇಂದು ಯಾವ ಯಜ್ಞವನ್ನೂ ಮಾಡಲಿಲ್ಲವಲ್ಲ. ನನ್ನ ಹತ್ತಿರ ಹಣವಿರಲಿಲ್ಲ. ಅಂದಮೇಲೆ ನಾನು ಯಜ್ಞವನ್ನು ಎಲ್ಲಿಂದ ಹೇಗೆ ಮಾಡಲಿ? ಇದಕ್ಕೆ ಧನಿಕ ಹೇಳಿದನು "ನೀವು ಈ ದಿನ ಕೆರೆಯ ದಂಡೆಯಲ್ಲಿ ಕುಳಿತು ಹಸಿದ ನಾಯಿಗೆ ನಾಲ್ಕು ರೊಟ್ಟಿಯನ್ನು ಹಾಕಿದ್ದೀರಿ. ನಾನು ಅದೇ ಪುಣ್ಯವನ್ನು ಕೊಳ್ಳಲಿಚ್ಛಿಸುತ್ತೇನೆ' ಆ

ಸಜ್ಜನ ಕೇಳಿದನು. ಅ ಸಮಯದಲ್ಲಿ ಅಲ್ಲಿ ಯಾರೂ ಇರಲಿಲ್ಲ. ಈ ವಿಷಯ ತಮಗೆ ಹೇಗೆ ಗೊತ್ತಾಯಿತು. ಧನಿಕನು ಹೇಳಿದನು–ನನ್ನ ಪತ್ನೀ ಪತಿವ್ರತೆ, ಅವಳೇ ಈ ಎಲ್ಲಾ ಮಾತುಗಳನ್ನು ಹೇಳಿದಳು. ಆಗ ಅವನು ಹೇಳಿದನು ಒಳ್ಳೆಯದು ತೆಗೆದುಕೊಳ್ಳಿ. ಆದರೆ ಮೂಲ್ಯ ಏನು ಕೊಡುವಿರಿ? ಧನಿಕನು ಹೇಳಿದನು–ತಮ್ಮ ರೊಟ್ಟಿಗಳ ಭಾರದಷ್ಟು ವಜ್ರ, ಮುತ್ತುಗಳನ್ನು ತೂಕಮಾಡಿ ಕೊಡುತ್ತೇನೆ. ಆ ಮನುಷ್ಯನು ಒಪ್ಪಿಕೊಂಡನು. ಅವನ ಸಮ್ಮತಿಯಂತೆ ಧನಿಕನು ಅಂದಾಜಿನ ಮೇಲೆ ಅಷ್ಟೇ ತೂಕದ ನಾಲ್ಕು ರೊಟ್ಟಿಗಳನ್ನು ಮಾಡಿಸಿದನು. ಅವುಗಳನ್ನು ತಕ್ಕಡಿಯ ಒಂದು ತಟ್ಟೆಯಲ್ಲಿ ಇಟ್ಟು ಇನ್ನೊಂದು ತಟ್ಟೆಯಲ್ಲಿ ವಜ್ರ–ಮುತ್ತು ಮುಂತಾದವುಗಳನ್ನು ಇಟ್ಟು ತೂಗಿದನು. ಆದರೆ ಎಷ್ಟು ಮುತ್ತು–ರತ್ನಗಳನ್ನು ಹಾಕುತ್ತಿದ್ದರೂ ಸಹ ರೊಟ್ಟಿಗಳನ್ನಿಟ್ಟಿದ್ದ ತಕ್ಕಡಿಯ ತಟ್ಟೆಯು ಮೇಲೇಳಲೇ ಇಲ್ಲ. ಇದನ್ನು ನೋಡಿ ಧನಿಕನು ಇನ್ನಷ್ಟು ಮುತ್ತು–ರತ್ನಗಳು ತುಂಬಿದ ಚೀಲಗಳನ್ನು ತರಲು ಸೇವಕರಿಗೆ ಹೇಳಿದನು. ಆ ಸಜ್ಜನನು ತನ್ನ ಪುಣ್ಯದ ಅತಿಶಯ ಪ್ರಭಾವವನ್ನು ಕಂಡು ಹೇಳಿದನು – ಸ್ವಾಮೀ ! ನಾನು ಈಗ ಈ ಪುಣ್ಯವನ್ನು ಮಾರುವುದಿಲ್ಲ. ಆ ಮಾತಿಗೆ ಧನಿಕನು ಹೇಳಿದನು ಅದು ತಮ್ಮ ಇಚ್ಛೆ.

ಅನಂತರ ಆ ಸಜ್ಜನನು ಅಲ್ಲಿಂದ ಹೊರಟು ತಾನು ನಾಯಿಗೆ ರೊಟ್ಟಿಗಳನ್ನು ಹಾಕಿದ ಕೆರೆಯ ದಂಡೆಯ ಜಾಗಕ್ಕೆ ಬಂದನು. ಅಲ್ಲಿ ಬಿದ್ದಿದ್ದ ಸ್ವಲ್ಪ ಹೊಳೆಯುತ್ತಿದ್ದ ಕೆಲವು ಕಲ್ಲಿನ ಚೂರುಗಳನ್ನು, ಗಾಜಿನ ಚೂರುಗಳನ್ನು ಬಟ್ಟೆಯಲ್ಲಿ ಕಟ್ಟಿಕೊಂಡು ತನ್ನ ಮನೆಗೆ ಬಂದನು. ಆ ಗಂಟನ್ನು ಪತ್ನಿಗೆ ಕೊಟ್ಟು ಇದನ್ನು ಊಟವಾದ ಮೇಲೆ ನೋಡೋಣ ಎಂದು ಹೇಳಿ ಹೊರಗೆ ಹೋದನು. ಅವನ ಪತ್ನಿಗೆ ಅದನ್ನು ನೋಡುವ ಕುತೂಹಲ ಹೆಚ್ಚಾಗಿ ಗಂಟನ್ನು ಬಿಚ್ಚಿದಳು. ಅದರಲ್ಲಿ ವಜ್ರ–ವೈಢೂರ್ಯ–ಮುತ್ತು–ರತ್ನಗಳು ಹೊಳೆಯುತ್ತಿದ್ದವು. ಅವಳಿಗೆ ಬಹಳ ಸಂತೋಷವಾಗಿ ಪತಿಯು ಮನೆಗೆ ಬಂದ ಮೇಲೆ ಅವನನ್ನು ಕೇಳಿದಳು. ಇಷ್ಟೊಂದು ಮುತ್ತು–ರತ್ನ–ವಜ್ರಗಳನ್ನು ಎಲ್ಲಿಂದ ತಂದಿರಿ? ಪತಿಯು ಹೇಳಿದನು ತಮಾಷೆ ಏಕೆ ಮಾಡುತ್ತಿರುವೆ? ಪತ್ನಿ ಹೇಳಿದಳು – ನಾನು ತಮಾಷೆ ಮಾಡುತ್ತಿಲ್ಲ. ಅದನ್ನು ಬಿಚ್ಚಿ ನೋಡಿದೆ. ಅದರಲ್ಲಿ ಅತ್ಯಂತ ಬೆಲೆಬಾಳುವ ವಜ್ರ–ಮುತ್ತು–ರತ್ನಗಳಿವೆ. ಪತಿಯು ಹೇಳಿದನು ತೆಗೆದುಕೊಂಡು ಬಾ ನೋಡೋಣ. ಅವಳು ಗಂಟನ್ನು ತಂದು ಅವನ ಮುಂದಿಟ್ಟಳು. ಆ ಪದಾರ್ಥಗಳನ್ನು ನೋಡಿ ಅವನು ಚಕಿತನಾದನು. ಅವೆಲ್ಲವೂ ತಾನು ಮಾಡಿದ ಆ ಪುಣ್ಯದ ಫಲವೆಂದೇ ತಿಳಿದನು. ಎಲ್ಲ ವೃತ್ತಾಂತವನ್ನೂ ಹೆಂಡತಿಗೆ ತಿಳಿಸಿದನು. ಇದರ ಅಭಿಪ್ರಾಯವೇನೆಂದರೆ ಇಂತಹ ಅಭಾಗಸ್ಥ ಆತುರದ ಪ್ರಾಣಿಗೆ ಕೊಟ್ಟ ದಾನದ ಫಲವು ಅನಂತಪಟ್ಟು ಫಲವನ್ನು ನೀಡುತ್ತದೆ. ಭಗವಂತನ ದಯೆಯಿಂದ ಕಲ್ಲಿನ ಚೂರುಗಳೂ ಕೂಡ ವಜ್ರ–ಮುತ್ತುಗಳಾಗುತ್ತವೆ.

ಈ ಪ್ರಕಾರವಾಗಿ ದೀನರಿಗೆ, ದುಃಖಿಗಳಿಗೆ, ಅಗತ್ಯವಿರುವವರಿಗೆ ಮತ್ತು ಅನಾಥರಿಗೆ ಕೊಟ್ಟ ದಾನವು ಅತ್ಯುತ್ತಮವಾದುದು. ಒಬ್ಬರಿಗೆ ಸಂಕಟದ ಸಮಯದಲ್ಲಿ ಮಾಡಿದ ದಾನವು ಬಹು ಲಾಭಕಾರಿಯಾಗಿರುತ್ತದೆ. ಭೂಕಂಪ, ಪ್ರವಾಹ ಅಥವಾ ಕ್ಷಾಮದ ಸಮಯದಲ್ಲಿ ಆಪತ್ತಿಗೆ ಒಳಗಾಗಿರುವ ಪ್ರಾಣಿಗೆ ಒಂದು ಹಿಡಿ ಅನ್ನವನ್ನು ಕೊಡುವುದು ಉತ್ತಮ ದಾನವಾಗಿರುತ್ತದೆ. ವಿಧಿಪೂರ್ವಕವಾಗಿ ಚಿನ್ನಾಭರಣ, ತುಲಾದನ, ಮುಂತಾದ ದಾನಗಳಿಗಿಂತಲೂ ಆಪತ್ತಿನ ಕಾಲದಲ್ಲಿ ಕೊಡುವ ಅಲ್ಪ ದಾನವು ಶ್ರೇಷ್ಠವಾಗಿದ್ದು, ಉತ್ತಮ ಫಲವನ್ನು ನೀಡುತ್ತದೆ. ಆದ್ದರಿಂದ ಪ್ರತಿಯೊಬ್ಬ ಮನುಷ್ಯನೂ ಆಪತ್ತಿಗೊಳಗಾದವರು, ಅನಾಥರು, ಹೆಳವರು, ದುಃಖಿಗಳು, ವಿಧವೆಯರು ಮುಂತಾದವರ ಸೇವೆ ಮಾಡಬೇಕು. ಕುಪಾತ್ರರಿಗೆ ದಾನ ಮಾಡುವುದು ತಾಮಸವಾಗುತ್ತದೆ. ಗೌರವ–ದೊಡ್ಡಸ್ತಿಕೆ–ಪ್ರತಿಷ್ಠೆಗಾಗಿ ಮಾಡುವ ದಾನವು ರಾಜಸವಾಗುತ್ತದೆ. ಏಕೆಂದರೆ ಗೌರವ–ಪ್ರತಿಷ್ಠೆಗಳು ಪತನಕ್ಕೆ ಕಾರಣವಾಗುತ್ತವೆ. ಇಂದಿನ ದಿನಗಳಲ್ಲಿ ಈ ಗೌರವ–ಪ್ರತಿಷ್ಠೆಗಳು ನಮಗೆ ಹಿತವಾಗಿ ಕಂಡರೂ ಅದರ ನಿಶ್ಚಿತ ಪರಿಣಾಮ ಪತನವೇ ಆಗಿರುತ್ತದೆ. ಆದ್ದರಿಂದ ಗೌರವ–ಪ್ರತಿಷ್ಠೆಗಳಿಗೆ ದಾಸರಾಗಬಾರದು. ನಾವು ನಿಂದನೆಗೆ ಗುರಿಯಾದರೆ ಅದು ನಮ್ಮ ಒಳ್ಳೆಯದಕ್ಕೆ ಮತ್ತು ನಮ್ಮನ್ನು ನಾವೇ ತಿದ್ದಿಕೊಳ್ಳಲು ಸಹಾಯಕ ಎಂದು ತಿಳಿಯಬೇಕು.

**ಶ್ರೀ ಕಬೀರದಾಸರು ಹೇಳಿದ್ದಾರೆ.**

**ನಿಂದಕ ನಿಯರೆ ದಾಖಿಯೆ, ಆಂಗನ್ ಕುಟೀ ಭವಾಯ್ ।**
**ಬಿನ ಪಾನೀ ಸಾಬುನ ಬಿನಾ, ನಿರಮಲ ಕೈ ಸುಭಾಯ್ ॥**

ನಿಂದಕರು ಹತ್ತಿರವಿರಬೇಕು. ಅವರಿಗೆ ಅಂಗಳದಲ್ಲೆ ಕುಟೀರ ಕಟ್ಟಿಕೊಡಬೇಕು. ಅವರ ನಿಂದನೆಯಿಂದ ನಾವು ನಮ್ಮ ತಪ್ಪು ಅರಿತು ಅದನ್ನು ತಿದ್ದಿಕೊಳ್ಳಬಹುದು. ಅವರು ಸ್ವಾಭಾವಿಕವಾಗಿ ನೀರು ಸಾಬೂನುಗಳಿಲ್ಲದೆ ಎಲ್ಲವನ್ನೂ ನಿರ್ಮಲ ಮಾಡುತ್ತಾರೆ.

ಆದ್ದರಿಂದ ಈ ಪ್ರಪಂಚದಲ್ಲಿ ಪರಮ ಹಿತದ ದೃಷ್ಟಿಯಿಂದ ಗೌರವ ಪ್ರತಿಷ್ಠೆಗಿಂತ ನಿಂದನೆ ಮತ್ತು ಅಪಮಾನಗಳೇ ಮನುಷ್ಯನನ್ನು ಉತ್ತಮ ನನ್ನಾಗಿಸುತ್ತದೆ. ಸಾಧಕರಿಗೆ ಗೌರವ–ಪ್ರತಿಷ್ಠೆಗಳು ಸಿಹಿಯಾದ ವಿಷವೇ ಆಗಿದೆ ಮತ್ತು ಅಪಮಾನ–ನಿಂದನೆಗಳು ಅಮೃತಕ್ಕೆ ಸಮಾನವಾಗಿರುತ್ತವೆ. ಆದ್ದರಿಂದ ನಿಂದಿಸುವವರನ್ನು ಆದರದ ದೃಷ್ಟಿಯಿಂದ ನೋಡಬೇಕು. ಆದರೆ ಯಾರೂ ಸಹ ನಿಂದನೀಯವಾದ ಪಾಪಾಚಾರವನ್ನು ಮಾಡಬಾರದು. ದುರ್ಗುಣ–ದುರಾಚಾರಗಳು ಬಹಳ ಅಪಾಯಕಾರಿಯಾದವು

ಗಳು. ಇವುಗಳನ್ನು ಹೃದಯದಿಂದ ಕಿತ್ತೆಸೆಯಬೇಕು. ಈಗಿನ ಕಾಲದಲ್ಲಿ ಜನರು ತಮ್ಮ ನಿಜವಾದ ದುರ್ಗಣಗಳನ್ನು ಮುಚ್ಚಿಟ್ಟುಕೊಂಡು ತಮ್ಮಲ್ಲಿ ಇಲ್ಲದೇ ಇರುವ ಸಗುಣಗಳನ್ನು ಪ್ರಚಾರ ಮಾಡುತ್ತಾರೆ. ಇದು ನೇರವಾಗಿ ನರಕಕ್ಕೆ ಹೋಗುವ ದಾರಿಯಾಗಿದೆ. ಆದ್ದರಿಂದ ಆಡಂಬರ–ಪ್ರತಿಷ್ಠೆಯ ಇಚ್ಛೆಯನ್ನು ಹೃದಯದಿಂದ ಹೊರದೂಡಬೇಕು. ಪ್ರಪಂಚದಲ್ಲಿ ನಮಗೆ ಪ್ರತಿಷ್ಠೆಯು ದೊರೆಯುತ್ತಿದ್ದು ಒಂದು ವೇಳೆ ಅದಕ್ಕೆ ನಾವು ಯೋಗ್ಯರಲ್ಲದೇ ಹೋದರೆ ನಮ್ಮ ಪತನ ನಿಶ್ಚಿತವೆಂದೇ ತಿಳಿಯಬೇಕು. ಆಡಂಬರ–ಸ್ವಪ್ರತಿಷ್ಠೆಯುಳ್ಳವರಿಂದ ಭಗವಂತನು ದೂರವಿರುತ್ತಾನೆ. ಏಕೆಂದರೆ ಅವುಗಳು ಮನುಷ್ಯನನ್ನು ಪತನಕ್ಕೆ ತಳ್ಳುತ್ತವೆ. ಮಾನ, ದೊಡ್ಡಸ್ತಿಕೆಗಳನ್ನು ಗೌರವ ನರಕವೆಂದೂ, ಪ್ರತಿಷ್ಠೆಯನ್ನು ಅತ್ಯಂತ ಹೊಲಸೆಂದೂ ತಿಳಿಯಬೇಕು. ಇದೇ ಸಂತರ ಉಪದೇಶವಾಣಿಯಾಗಿದೆ.

ಸತ್ಪಾತ್ರರಿಗೆ ಕೊಟ್ಟ ದಾನವು ಇಬ್ಬರಿಗೂ ಕಲ್ಯಾಣಕಾರಿಯೆಂದು ತಿಳಿಯಬೇಕು. ಕುಪಾತ್ರನಿಗೆ ಕೊಟ್ಟ ದಾನವು ಇಬ್ಬರನ್ನೂ ಮುಳುಗಿಸುವಂತಹುದಾಗಿರುತ್ತದೆ. ಕಲ್ಲಿನ ದೋಣಿಯು ಪ್ರಯಾಣಿಕರ ಜೊತೆಯಲ್ಲಿ ಮುಳುಗಿಹೋಗುವಂತೆ ಕುಪಾತ್ರನು ದಾನಿಯನ್ನೂ ಕರೆದುಕೊಂಡು ನರಕಕ್ಕೆ ಹೋಗುತ್ತಾನೆ.

ದಾನದ ಸಂಬಂಧದಲ್ಲಿ ಇನ್ನೊಂದು ವಿಚಾರವನ್ನೂ ತಿಳಿದಿರಬೇಕು. ದೊಡ್ಡ ಶ್ರೀಮಂತನು ಕೊಡುವ ಲಕ್ಷಾಂತರ ರೂಪಾಯಿಗಳ ದಾನಕ್ಕಿಂತಲೂ ನಿರ್ಧನನು ಕೊಡುವ ಒಂದು ರೂಪಾಯಿ ದಾನವು ಅಧಿಕ ಮಹತ್ವವುಳ್ಳದ್ದಾಗಿರುತ್ತದೆ. ಏಕೆಂದರೆ ನಿರ್ಧನನಿಂದ ಕೊಡುವ ಒಂದು ರೂಪಾಯಿ ದಾನವೂ ಸಹ ದೊಡ್ಡ ತ್ಯಾಗವೇ ಆಗಿರುತ್ತದೆ. ಭಗವಂತನ ಮಂದಿರದಲ್ಲಿ ನ್ಯಾಯವಿರುತ್ತದೆ. ಹಾಗಿಲ್ಲದ ಪಕ್ಷದಲ್ಲಿ ನಿರ್ಧನರು ಮುಕ್ತಿಯನ್ನು ಹೊಂದುತ್ತಿರಲಿಲ್ಲ. ಈ ವಿಚಾರದಲ್ಲಿ ಒಂದು ಕಥೆ ಹೀಗಿದೆ –

ಒಬ್ಬ ರಾಜನು ಪ್ರಜೆಗಳ ಜೊತೆ ತೀರ್ಥಯಾತ್ರೆಗೆ ಹೊರಟನು. ದಾರಿಯಲ್ಲಿ ಒಬ್ಬ ಮನುಷ್ಯನು ನಗ್ನವಾಗಿ ಬಿದ್ದಿದ್ದನು. ಅವನು ಛಳಿಯಿಂದ ನಡಗುತ್ತಿದ್ದನು. ರಾಜನ ಜೊತೆಯಿದ್ದ ಪ್ರಜೆಗಳಲ್ಲಿ ಒಬ್ಬ ರೈತನೂ ಇದ್ದನು. ಅವನು ತನ್ನಲ್ಲಿದ್ದ ಎರಡು ಪಂಚೆಗಳಲ್ಲಿ ಒಂದನ್ನು ಆ ನಗ್ನ ಮನುಷ್ಯನಿಗೆ ಕೊಟ್ಟಿದ್ದರಿಂದ ಅವನ ಪ್ರಾಣ ಉಳಿಯಿತು. ರೈತನ ಹತ್ತಿರ ಉಟ್ಟುಕೊಳ್ಳಲು ಒಂದೇ ಪಂಚೆ ಉಳಿಯಿತು. ಹಾಗೆಯೇ ಮುಂದೆ ಸಾಗಿದಾಗ ಬಿಸಿಲಿನ ತಾಪಕ್ಕೆ ಒಳಗಾಗಬೇಕಾಯಿತು. ಆದರೆ ಆಕಾಶದಲ್ಲಿ ಮೋಡ ಹರಡಿ ಅವರಿಗೆ ನೆರಳಾಗಿ ಬರುತ್ತಿತ್ತು. ರಾಜನು ನನ್ನ ಪುಣ್ಯದ ಪ್ರಭಾವದಿಂದಲೇ ಮೋಡ ಹರಡಿ ಎಲ್ಲರಿಗೂ ನೆರಳಾಗಿ ಬರುತ್ತಿದೆ ಎಂದು ಯೋಚಿಸಿದನು. ಅನಂತರ ಅವರೆಲ್ಲರೂ ಒಂದು ವನದಲ್ಲಿ ಒಂದು ಕಡೆ ಬಿಡಾರ ಹೂಡಿದರು. ಮತ್ತೆ ಮುಂದಕ್ಕೆ ಹೋಗುತ್ತಿರುವಾಗ ಯಾರೋ ಓರ್ವ ಮಹಾತ್ಮರು ಕೇಳಿದರು ರಾಜನ್ ! ಮೋಡಗಳು ಯಾರ ಪ್ರಭಾವದಿಂದ ನೆರಳನ್ನುಂಟು ಮಾಡುತ್ತಾ ಬರುತ್ತಿವೆಯೆಂದು ನಿನಗೆ ಗೊತ್ತಿದೆಯೇ? ರಾಜನಿಂದ ಉತ್ತರ ಕೊಡಲಾಗಲಿಲ್ಲ. ಆಗ ಮಹಾತ್ಮರು ಹೇಳಿದರು ಒಳ್ಳೆಯದು, ನೀವು ಒಬ್ಬೊಬ್ಬರಾಗಿ ಇಲ್ಲಿಂದ ಹೊರಡಿ. ಯಾರ ಜೊತೆ ಮೋಡಗಳು ನೆರಳು ಕೊಡುತ್ತಾ ಚಲಿಸುತ್ತವೆಯೋ ಅದನ್ನು ಆ ಪುಣ್ಯವಂತನ ಪುಣ್ಯದ ಪ್ರಭಾವವೆಂದೇ ತಿಳಿಯಬೇಕು. ಆಗ ರಾಜನು ಮೊದಲು ಹೊರಟನು. ಮತ್ತೆ ಒಬ್ಬೊಬ್ಬರಾಗಿ ಪ್ರಜೆಗಳು ಹೊರಟರು. ಆದರೆ ಮೋಡಗಳು ಚಲಿಸದೇ ಹಾಗೆಯೇ ಇದ್ದವು. ಆಗ ರಾಜನು ಹೇಳಿದನು. ನೋಡಿ, ಹಿಂದೆ ಯಾರು ಉಳಿದಿದ್ದಾರೆ? ಅಲ್ಲಿ ರೈತನು ಮಲಗಿರುವುದನ್ನು ರಾಜನ ಸೇವಕರು ನೋಡಿದರು. ಅವನನ್ನು ಎತ್ತಿಕೊಂಡು ರಾಜನ ಹತ್ತಿರಕ್ಕೆ ಬಂದರು, ಜೊತೆಯಲ್ಲಿ ಮೋಡಗಳೂ ಅವನ ಜೊತೆಯೇ ಬಂದವು. ಆಗ ಮಹಾತ್ಮರು ಹೇಳಿದರು. ಇದು ಈ ಪುಣ್ಯವಂತನ ಪುಣ್ಯದ ಪ್ರಭಾವವಾಗಿದೆ. ರಾಜನು ಅ ರೈತನನ್ನು ಕೇಳಿದನು – ನೀನು ಅಂತಹ ಏನು ಪುಣ್ಯ ಕಾರ್ಯ ಮಾಡಿದೆ? ಪದೇ ಪದೇ ಕೇಳಿದಾಗ ಅವನು ಹೇಳಿದನು –ನಾನು ಇನ್ನು ಯಾವ ಪುಣ್ಯದ ಕೆಲಸ ಮಾಡಲಿಲ್ಲ. ದಾರಿಯಲ್ಲಿ ನಾನು ನನ್ನ ಎರಡು ಪಂಚೆಗಳಲ್ಲಿ ಒಂದನ್ನು ನೆಲದ ಮೇಲೆ ಬಿದ್ದು ನಡುಗುತ್ತಿದ್ದ ಒಬ್ಬ ನಗ್ನ ಮನುಷ್ಯನಿಗೆ ಕೊಟ್ಟೆ ಅಷ್ಟೆ!

**ಆಗ ಮಹಾತ್ಮರು ರಾಜನಿಗೆ ಹೇಳಿದರು :** ರಾಜನೇ! ನೀನು ದೊಡ್ಡ ದಾನವನ್ನೇ ಮಾಡುತ್ತೀಯೆ. ಆದರೆ ನಿನ್ನ ಹತ್ತಿರ ಅತುಲ ಐಶ್ವರ್ಯವಿದೆ. ಆದ್ದರಿಂದ ನೀನು ಮಾಡಿದ ದಾನವು ಮತ್ತು ತ್ಯಾಗವು ಎರಡು ಪಂಚೆಗಳಲ್ಲಿ ಒಂದನ್ನು ದಾನ ಮಾಡುದುದಕ್ಕೆ ಸಮಾನವಾಗಲಾರದು. ಈ ರೀತಿ ದಾನದ ರಹಸ್ಯವನ್ನು ತಿಳಿದು ದಾನ ಮಾಡಬೇಕು.

**ಲಜ್ಜೆ, ಭಯ, ಮಾನ, ಪ್ರತಿಷ್ಠೆ ಮತ್ತು ಆಸಕ್ತಿಯನ್ನು ತ್ಯಜಿಸಿ ಹಾಗೂ ಶರೀರ ಮತ್ತು ಸಂಸಾರದಲ್ಲಿ ಅಹಂಕಾರ, ಮಮಕಾರಗಳಿಲ್ಲದೆ ಕೇವಲ ಏಕಮಾತ್ರ ಪರಮಾತ್ಮನನ್ನೇ ಪರಮಾಶ್ರಯ, ಪರಮಗತಿ ಮತ್ತು ಸರ್ವಸ್ವವೆಂದು ತಿಳಿದುಕೊಳ್ಳುವುದು ಹಾಗೂ ಅನನ್ಯಭಾವದಿಂದ ಅತ್ಯಂತ ಶ್ರದ್ಧಾಭಕ್ತಿ ಮತ್ತು ಪ್ರೇಮಪೂರ್ವಕವಾಗಿ ನಿರಂತರ ಭಗವಂತನ ನಾಮ, ಗುಣ, ಪ್ರಭಾವ ಮತ್ತು ಸ್ವರೂಪಗಳ ಚಿಂತನೆ ಮಾಡುತ್ತಿರುವುದು ಮತ್ತು ಭಗವಂತನ ಭಜನೆ, ಸ್ಮರಣೆಗಳಿಂದ ಆತನ ಆಜ್ಞಾನುಸಾರ ಕರ್ತವ್ಯ–ಕರ್ಮಗಳನ್ನು ನಿಃಸ್ವಾರ್ಥಭಾವದಿಂದ ಕೇವಲ ಪರಮೇಶ್ವರನಿಗಾಗಿಯೇ ಆಚರಣೆ ಮಾಡುವುದು–ಇದೇ ಎಲ್ಲಾ ರೀತಿಯಿಂದ ಪರಮಾತ್ಮನಲ್ಲಿ ಅನನ್ಯ ಶರಣಾಗತಿ.**

# ಸ್ವಾಮಿ ಶಿವಪ್ರಕಾಶಾನಂದ ಸರಸ್ವತೀಗಳು



ಸ್ವಾಮಿ ಶಿವಪ್ರಕಾಶಾನಂದ ಸರಸ್ವತೀಗಳು ವೇದಾಂತ ಶಾಸ್ತ್ರದ 'ಸಂಪ್ರದಾಯಸ್ಥ' ಆಚಾರ್ಯರು. ತಮ್ಮ ಪೂರ್ವಾಶ್ರಮದಲ್ಲಿ ಇಂಜಿನಿಯರ್ ಪದವೀಧರರಾಗಿದ್ದು 22ನೇ ವಯಸ್ಸಿನಲ್ಲಿ ಪೂರ್ಣ ವೈರಾಗ್ಯದ ಮಾರ್ಗ ಅನುಸರಿಸಿ, ರಾಮಕೃಷ್ಣಾಶ್ರಮದಲ್ಲಿ 10 ವರ್ಷಗಳ ಕಾಲ ಬ್ರಹ್ಮಚಾರಿಯಾಗಿ ಸೇವೆ ಸಲ್ಲಿಸಿರುತ್ತಾರೆ. ಸ್ವಾಮಿ ಬ್ರಹ್ಮಪ್ರಕಾಶಾನಂದ ಸರಸ್ವತಿ ಹಾಗೂ ಸ್ವಾಮಿ ತತ್ವಮಯಾನಂದ ಸರಸ್ವತೀಗಳಲ್ಲಿ ಶಾಸ್ತ್ರಾಧ್ಯಯನವನ್ನು ಮಾಡಿ, ಭಾರತೀಯ ಆಚಾರ್ಯ ಮಹಾಸಭಾದ ಸಂಸ್ಥಾಪಕರಾದ ಆರ್ಷವಿದ್ಯಾ ಗುರುಕುಲದ ಪರಮಪೂಜ್ಯ ಸ್ವಾಮಿ ದಯಾನಂದ ಸರಸ್ವತಿಗಳ ವಿದ್ಯಾರ್ಥಿಯೂ ಆಗಿದ್ದು, ಇವರಿಂದಲೇ 2013ರಲ್ಲಿ ತಮ್ಮ 32ನೇ ವಯಸ್ಸಿನಲ್ಲಿಯೇ ಸನ್ಯಾಸ ದೀಕ್ಷೆ ಸ್ವೀಕರಿಸಿದರು. ಸಂಸ್ಕೃತ ವಿದ್ವಾಂಸರೂ ಹಾಗೂ ಶಾಸ್ತ್ರದ ಆಳವಾದ ಪರಿಜ್ಞಾನ ಹೊಂದಿದವರೂ ಆಗಿರುವ ಇವರು ಕಳೆದ 8 ವರ್ಷಗಳಿಂದ ಬೆಂಗಳೂರಿನ ವಿವಿದೆಡೆ ನಿಯಮಿತವಾಗಿ ಹಾಗೂ ನಿರಂತರವಾಗಿ ವೇದಾಂತ ಶಾಸ್ತ್ರ, ಭಗವದ್ಗೀತೆಗಳ ಬಗ್ಗೆ ಪ್ರವಚನ ನೀಡುತ್ತಿದ್ದಾರೆ. ಪ್ರಸ್ತುತ "ಅದ್ವೈತ ಮಕರಂದವು" ಸ್ವಾಮೀಜಿಯವರ ಚೊಚ್ಚಲ ಅನುವಾದ ಗ್ರಂಥವಾಗಿದೆ.

## ಅದ್ವೈತಮಕರಂದ ಕಿರುಪರಿಚಯ ಮುನ್ನುಡಿಯಿಂದ

ಆತ್ಮಜ್ಞಾನವೊಂದೇ ಮೋಕ್ಷಕ್ಕೆ ಮಾರ್ಗವೆಂಬುದು ಶಾಸ್ತ್ರಜ್ಞರಿಗೆ ತಿಳಿದಿರುವ ವಿಷಯ. ಆತ್ಮಜ್ಞಾನಕ್ಕೆ ವೇದಾಂತವಾಕ್ಯವೇ ಪ್ರಮಾಣ ಎನ್ನುವುದರಲ್ಲೂ ಸಂದೇಹವಿಲ್ಲ. ಎಲ್ಲಾ ವೇದಾಂತಗಳೂ **"ತತ್ತ್ವಮಸಿ", "ಅಯಮಾತ್ಮಾ ಬ್ರಹ್ಮ"** ಇತ್ಯಾದಿ ಮಹಾವಾಕ್ಯಗಳ ಮೂಲಕ ಜೀವಬ್ರಹ್ಮೈಕ್ಯವನ್ನೇ ಸಾರುತ್ತವೆ. ಈ ಪರಮಸತ್ಯವನ್ನು ಚೆನ್ನಾಗಿ ತಿಳಿದುಕೊಳ್ಳುವುದೇ ಆತ್ಮಜ್ಞಾನ.

ವೇದಾಂತದ ಉಪದೇಶವನ್ನು ಯಾವುದೇ ಸಂಶಯವಿಲ್ಲದೆ ಸ್ಪಷ್ಟವಾಗಿ ತಿಳಿದುಕೊಳ್ಳಲು ಯುಕ್ತಿಗಳ ಸಹಾಯ ಅತ್ಯಾವಶ್ಯಕ. ಶ್ರುತಿಯಲ್ಲಿ ಪ್ರತಿಪಾದಿಸಲ್ಪಟ್ಟಂತಹ ಜೀವನ ವಾಸ್ತವ ಸ್ವರೂಪವಾದ ಸಚ್ಚಿದಾನಂದ, ಜಗತ್ತಿನ ಮಿಥ್ಯಾತ್ವ, ಜೀವಬ್ರಹ್ಮಗಳ ಅಭೇದ– ಇತ್ಯಾದಿ ವಿಷಯಗಳನ್ನು ವೇದಾಂತಾನುಗುಣವಾದ ಸರಳ ಹಾಗೂ ಗಂಭೀರ ತರ್ಕಗಳಿಂದ ನಿಶ್ಚಯಿಸಬಹುದು ಎಂಬುದನ್ನು ಸಂಪ್ರದಾಯಜ್ಞರಾದ ಆಚಾರ್ಯರು ಭಾಷ್ಯ, ವಾರ್ತಿಕಾದಿ ಹಲವಾರು ಗ್ರಂಥಗಳಲ್ಲಿ ತೋರಿಸಿಕೊಟ್ಟಿದ್ದಾರೆ.

ಭಾಷ್ಯಾದಿ ದೊಡ್ಡ ಗ್ರಂಥಗಳಲ್ಲಿ ಅಲ್ಲಲ್ಲಿ ಕಂಡುಬರುವ ಯುಕ್ತಿಗಳನ್ನು ಸಂಗ್ರಹಿಸಿ ವೇದಾಂತದಲ್ಲಿ ಮುಖ್ಯವಾಗಿ ತಿಳಿದು ಕೊಳ್ಳಬೇಕಾದ ವಿಷಯಗಳನ್ನು ಸಂಕ್ಷಿಪ್ತವಾಗಿ ಪ್ರತಿಪಾದಿಸುವ ಗ್ರಂಥವೇ **'ಅದ್ವೆತಮಕರಂದ'**. ಇದರಲ್ಲಿ ಕೇವಲ ಇಪ್ಪತ್ತೆಂಟು ಶ್ಲೋಕಗಳಿವೆ. ಪ್ರತಿಯೊಂದು ಶ್ಲೋಕವೂ ಬಹಳ ಅರ್ಥಗರ್ಭಿತ ವಾಗಿದ್ದು ಒಂದೊಂದು ಶ್ಲೋಕದ ಮೇಲೂ ಗ್ರಂಥಗಳನ್ನೇ ರಚಿಸಬಹುದು.

ಈ ಗ್ರಂಥವನ್ನು ರಚಿಸಿದವರು ಶ್ರೀ ಲಕ್ಷ್ಮೀಧರ ಕವಿಗಳು. ಇದನ್ನು ಕವಿಗಳೇ ಗ್ರಂಥದ ಕೊನೆಯ ಶ್ಲೋಕದಲ್ಲಿ ತಿಳಿಸಿರುತ್ತಾರೆ. ಇವರ ಕಾಲದ ಬಗ್ಗೆ ಹಾಗೂ ಜೀವನದ ಬಗ್ಗೆ ಹೆಚ್ಚೇನೂ ತಿಳಿದಿಲ್ಲ.

ಈ ಗ್ರಂಥದ ಮೇಲೆ ಶ್ರೀ ಸ್ವಯಂಪ್ರಕಾಶ ಯತಿ ಎನ್ನುವವರು ವ್ಯಾಖ್ಯಾನವನ್ನು ರಚಿಸಿದ್ದಾರೆ. ಪ್ರಸ್ತುತ ಅನುವಾದ ಹಾಗೂ ವಿವರಣೆ ಈ ವ್ಯಾಖ್ಯಾನವನ್ನೇ ಪ್ರಮುಖವಾಗಿ ಆಧರಿಸಿದೆ. ಕನ್ನಡವನ್ನು ಬಲ್ಲ ವೇದಾಂತ ಜಿಜ್ಞಾಸುಗಳು ಹಾಗೂ ವಿದ್ವಾಂಸರು ಈ ಅನುವಾದ ಮತ್ತು ವಿವರಣೆಯನ್ನು ಓದಿ ತಮ್ಮ ಅಭಿಪ್ರಾಯ ವನ್ನು ತಿಳಿಸಬೇಕಾಗಿ ವಿನಂತಿ.

ಇತಿ ನಾರಾಯಣ ಸ್ಮರಣೆಗಳೊಂದಿಗೆ
ಸ್ವಾಮಿ ಶಿವಪ್ರಕಾಶಾನಂದ ಸರಸ್ವತಿ

# ಅದ್ವೈತಮಕರಂದ

**ಕಟಾಕ್ಷಕಿರಣಾಚಾನ್ತನಮನ್ಮೋಹಾಬ್ಧಯೇ ನಮಃ।**
**ಅನನ್ತಾನನ್ದಕೃಷ್ಣಾಯ ಜಗನ್ಮಙ್ಗಲಮೂರ್ತಯೇ॥1॥**

**ಅನುವಾದ :** ತನ್ನ ಕಟಾಕ್ಷದ ಕಿರಣಗಳಿಂದ ನಮಸ್ಕರಿಸುವವರ ಮೋಹಸಮುದ್ರವನ್ನು ಒಣಗಿಸುವ, ಜಗತ್ತಿಗೆ ಮಂಗಳಕರವಾದ ಮೂರ್ತಿಯುಳ್ಳ ಅನಂತಾನಂದಕೃಷ್ಣನಿಗೆ ನಮಸ್ಕಾರ.

**ವಿವರಣೆ :** ಗ್ರಂಥರಚನೆಯು ನಿರ್ವಿಘ್ನವಾಗಿ ನೆರವೇರಲೆಂದು ಗ್ರಂಥಕಾರರು ಗ್ರಂಥದ ಆದಿಯಲ್ಲಿ ಇಷ್ಟದೇವತಾ ನಮಸ್ಕಾರ ರೂಪದ ಮಂಗಳಾಚರಣೆಯನ್ನು ಮಾಡಿರುತ್ತಾರೆ. ಇಲ್ಲಿ ಮೋಹ ಎಂದರೆ ಸಂಸಾರಕ್ಕೆ ಕಾರಣವಾದಂತಹ ಅಜ್ಞಾನ. ಅದನ್ನು ಸಮುದ್ರಕ್ಕೆ ಹೋಲಿಸಿ 'ಮೋಹಾಬ್ಧಿ' ಎಂದಿದ್ದಾರೆ. ಅಜ್ಞಾನವು

ತೊಲಗಬೇಕಾದರೆ ಭಗವಂತನ ಕೃಪಾಕಟಾಕ್ಷ ಆವಶ್ಯಕವೆಂಬುದನ್ನು ಪೂರ್ವಾರ್ಧವು ಸೂಚಿಸುತ್ತದೆ. ಉತ್ತರಾರ್ಧದ **'ಅನನ್ತಾನನ್ದಕೃಷ್ಣಾಯ'** ಎಂಬ ಶಬ್ದವು ಗ್ರಂಥದ ವಿಷಯವಾದ ಅಪರಿಚ್ಛಿನ್ನ ಬ್ರಹ್ಮತತ್ವ ವನ್ನೂ, **'ಜಗನ್ಮಙ್ಗಲಮೂರ್ತಯೇ'** ಎಂಬ ಶಬ್ದವು ಶಾಸ್ತ್ರದ ಪ್ರಯೋಜನವಾದ ಸುಖಪ್ರಾಪ್ತಿ ಮತ್ತು ದುಃಖನಿವೃತ್ತಿರೂಪವಾದ ಮೋಕ್ಷವನ್ನೂ ಸೂಚಿಸುತ್ತದೆ.

**ಅಹಮಸ್ಮಿ ಸದಾ ಭಾಮಿ ಕದಾಚಿನ್ನಾಹಮಪ್ರಿಯಃ।**
**ಬ್ರಹ್ಮೈವಾಹಮತಃ ಸಿದ್ಧಂ ಸಚ್ಚಿದಾನನ್ದಲಕ್ಷಣಮ್ ॥2॥**

**ಅನುವಾದ :** ನಾನು ಯಾವಾಗಲೂ ಇರುವೆನು, ನಾನು ಯಾವಾಗಲೂ ಪ್ರಕಾಶಿಸುವೆನು, ನಾನು ಎಂದಿಗೂ ಅಪ್ರಿಯನಲ್ಲ. ಆದುದರಿಂದ ನಾನು ಸಚ್ಚಿದಾನಂದ ಲಕ್ಷಣವಾದ ಬ್ರಹ್ಮವೇ ಎಂಬುದು ಸಿದ್ಧವಾಗುತ್ತದೆ.

**ವಿವರಣೆ :** ನಾನು ಎಂದರೆ ನನ್ನ ಸ್ವರೂಪವಾದ ಆತ್ಮ. ನಾನು ಸದಾ ಇರುವೆನು. ಎಂದರೆ ನಾನು 'ಸತ್' ಎಂದಾಯಿತು. ಸದಾಕಾಲ ಪ್ರಕಾಶಿಸುವೆನು ಎಂದರೆ ನಾನು 'ಚಿತ್' ಅಥವಾ ಚೈತನ್ಯ ಎಂದು ತಿಳಿಯಬಹುದು. ಎಂದಿಗೂ ಅಪ್ರಿಯನಲ್ಲ ಎಂದರೆ ನಾನು ಪರಮಪ್ರೀತಿಯ ವಿಷಯ. ಯಾವುದು ಪರಮಪ್ರೀತಿಯ ವಿಷಯವೋ ಅದು ಆನಂದ. ಹಾಗಾಗಿ ನಾನು ಆನಂದಸ್ವರೂಪನು ಎಂದಾಯಿತು. ಈ ರೀತಿ ಸಚ್ಚಿದಾನಂದ ಎಂಬ ಬ್ರಹ್ಮನ ಲಕ್ಷಣವು ನನ್ನ ಸ್ವರೂಪಕ್ಕೆ ಹೊಂದುತ್ತದೆ. ಇದರಿಂದ 'ನೀನು ಬ್ರಹ್ಮವೇ' ಎನ್ನುವ ವೇದಾಂತದ ಉಪದೇಶವು ಯುಕ್ತಿಸಮ್ಮತ ಎಂಬುದು ಸಿದ್ಧವಾಗುತ್ತದೆ.

**ಮಯ್ಯೇವೋದೇತಿ ಚಿದ್ವ್ಯೋಮ್ನಿ ಜಗದ್ಗನ್ಧರ್ವಪತ್ತನಮ್।**
**ಅತೋಽಹಂ ನ ಕಥಂ ಬ್ರಹ್ಮ ಸರ್ವಜ್ಞಂ ಸರ್ವಕಾರಣಮ್॥3॥**

**ಅನುವಾದ :** ಗಂಧರ್ವನಗರದಂತಿರುವ ಈ ಜಗತ್ತು ಚಿದಾಕಾಶ ವಾದ ನನ್ನಲ್ಲಿಯೇ ಉದಯಿಸುತ್ತದೆ. ಆದುದರಿಂದ ನಾನು ಸರ್ವಜ್ಞವೂ ಸರ್ವಕಾರಣವೂ ಆದ ಬ್ರಹ್ಮವಲ್ಲದಿರುವುದು ಹೇಗೆ?

**ವಿವರಣೆ :** ಇಂದ್ರಜಾಲದಿಂದ ಮೋಡಗಳಲ್ಲಿ ತೋರುವ ನಗರ ವನ್ನು ಗಂಧರ್ವನಗರ ಎನ್ನುವರು. ಜಗತ್ತು ಮಿಥ್ಯೆಯಾದುದರಿಂದ ಅದನ್ನು ಗಂಧರ್ವನಗರಕ್ಕೆ ಹೋಲಿಸಿದ್ದಾರೆ. ಹೇಗೆ ಸ್ವಪ್ನಪ್ರಪಂಚಕ್ಕೆ ಸಾಕ್ಷಿಯಾದ ಚೈತನ್ಯಸ್ವರೂಪನಾದ ನಾನೇ ಅದರ ಅಧಿಷ್ಠಾನವೋ, ಹಾಗೆಯೇ ಜಾಗ್ರತಪ್ರಪಂಚಕ್ಕೂ ಸಾಕ್ಷಿಯಾದ ನನ್ನ ಸ್ವರೂಪವೇ ಅಧಿಷ್ಠಾನ. ಸಂಪೂರ್ಣ ಪ್ರಪಂಚಕ್ಕೆ ಸಾಕ್ಷಿಯಾದ್ದರಿಂದ ಸರ್ವಜ್ಞ, ಸರ್ವಕ್ಕೂ ಅಧಿಷ್ಠಾನವಾದ್ದರಿಂದ ಸರ್ವಕಾರಣ. ಶ್ರುತಿಯು ಬ್ರಹ್ಮ ವನ್ನು ಸರ್ವಜ್ಞ ಮತ್ತು ಸರ್ವಕಾರಣ ಎಂದಿದೆ. ಆ ಸರ್ವಜ್ಞ ಹಾಗೂ ಸರ್ವಕಾರಣ ನಾನೇ ಆದುದರಿಂದ ನಾನು ಬ್ರಹ್ಮವೆಂಬುದರಲ್ಲಿ ಸಂಶಯವೇ ಇಲ್ಲ.

**ನ ಸ್ವತಃ ಪ್ರತ್ಯಭಿಜ್ಞಾನಾನ್ನಿರಂಶತ್ವಾನ್ನ ಚಾನ್ಯತಃ।**
**ನ ಚಾಶ್ರಯವಿನಾಶಾನ್ಮೇ ವಿನಾಶಃ ಸ್ಯಾದನಾಶ್ರಯಾತ್ ॥4॥**

**ಅನುವಾದ :** ಪ್ರತ್ಯಭಿಜ್ಞಾನದಿಂದಾಗಿ ನನಗೆ ಸ್ವತಃ ವಿನಾಶವಿಲ್ಲ. ನಿರಂಶವಾದುದರಿಂದ ನನಗೆ ಅನ್ಯತಃ ವಿನಾಶವಿಲ್ಲ. ಆಶ್ರಯರಹಿತ ನಾದುದರಿಂದ ಆಶ್ರಯವಿನಾಶದಿಂದ ನನಗೆ ವಿನಾಶವಿಲ್ಲ.

**ವಿವರಣೆ :** ಈ ಶ್ಲೋಕವು ಆತ್ಮನು ನಾಶರಹಿತನೆಂಬುದನ್ನು ಯುಕ್ತಿಯಿಂದ ಸಿದ್ಧಪಡಿಸುತ್ತದೆ. ನಾಶವು ಮೂರು ವಿಧ. ಹೊರಗಿನ ಹೇತುವಿನ ಅಪೇಕ್ಷೆಯಿಲ್ಲದೆ ತಾನಾಗಿಯೇ ಉಂಟಾಗುವ ನಾಶ **'ಸ್ವತಃ ನಾಶ'** ಮೊದಲನೆಯದು. ಉದಾಹರಣೆಗೆ, ಒಂದು ಹೂವು ಅರಳಿ ಸ್ವಲ್ಪಕಾಲ ಶೋಭಿಸಿ ತಾನಾಗಿಯೇ ಬಾಡುತ್ತದೆ. ಬೌದ್ಧರ ಪ್ರಕಾರ ಆತ್ಮಸಹಿತವಾಗಿ ಎಲ್ಲವೂ ಪ್ರತಿಕ್ಷಣ ಸ್ವತಃ ನಾಶವಾಗುತ್ತದೆ.

ಬೇರೊಂದು ವಸ್ತುವಿನ ಸಂಯೋಗದಿಂದಾಗಿ ಉಂಟಾಗುವ ನಾಶ **'ಅನ್ಯತಃ ನಾಶ'**ಎರಡನೆಯದು. ಉದಾಹರಣೆಗೆ ಅಗ್ನಿ ಸಂಯೋಗದಿಂದ ಕಟ್ಟಿಗೆ ನಾಶವಾಗುತ್ತದೆ, ಕೊಡಲಿಯ ಹೊಡೆತ ದಿಂದ ಮರ ನಾಶವಾಗುತ್ತದೆ. ಆಶ್ರಯನಾಶದಿಂದ ಉಂಟಾಗುವ ನಾಶ ಮೂರನೆಯದು. ಉದಾಹರಣೆಗೆ ಬಟ್ಟೆಯ ಬಣ್ಣಕ್ಕೆ ಬಟ್ಟೆ ಆಶ್ರಯ. ಬಟ್ಟೆ ನಾಶವಾದರೆ ಅದನ್ನು ಆಶ್ರಯಿಸಿರುವ ಬಣ್ಣವೂ ನಾಶವಾಗುವುದು.

ಆತ್ಮನಲ್ಲಿ ಈ ಮೂರೂ ರೀತಿಯ ನಾಶಗಳೂ ಸಾಧ್ಯವಿಲ್ಲ. ಬೌದ್ಧರು ಹೇಳುವಂತೆ ಆತ್ಮನು ಪ್ರತಿಕ್ಷಣ ಸ್ವತಃ ನಾಶವಾಗುತ್ತಿದ್ದರೆ ಅತ್ಮನ ವಿಷಯದಲ್ಲಿ ಪ್ರತ್ಯಭಿಜ್ಞಾನವು ಸಾಧ್ಯವಿರುತ್ತಿರಲಿಲ್ಲ. ಹಿಂದೆ ಅನುಭವಿಸಿದ ಒಂದು ವಸ್ತುವನ್ನು ಕಾಲಾಂತರದಲ್ಲಿ 'ಇದು ಅದೇ' ಎಂದು ಗುರುತಿಸುವುದನ್ನು **'ಪ್ರತ್ಯಭಿಜ್ಞಾನ'** ಎನ್ನುವರು. ಆತ್ಮನ ವಿಷಯದಲ್ಲಿ "ಹಿಂದೆ ಬಾಲ್ಯವನ್ನನುಭವಿಸಿದ ನಾನೇ ಈಗ ವೃದ್ಧಾಪ್ಯವನ್ನು ಅನುಭವಿಸುತ್ತಿರುವೆನು" ಎಂಬುದಾಗಿ ಪ್ರತ್ಯಭಿಜ್ಞೆ ಯುಂಟಾಗುತ್ತದೆ. ಆತ್ಮನು ನಿರವಯವಾದುದರಿಂದ ಬೇರೊಂದು ವಸ್ತುವಿನ ಸಂಯೋಗವೇ ಸಾಧ್ಯವಿಲ್ಲ. ಯಾವುದನ್ನೂ ಆಶ್ರಯಿಸದೆ ಸ್ವತಂತ್ರವಾದ ಆತ್ಮನಿಗೆ ಆಶ್ರಯನಾಶದಿಂದ ಆಗುವ ನಾಶವೂ ಇಲ್ಲ.

**ನ ಶೋಷಪ್ಲೋಷವಿಕ್ಲೇದಚ್ಛೇದಾಶ್ಚಿನ್ನಭಸೋ ಮಮ।**
**ಸತ್ಯೈರಪ್ಯನಿಲಾಗ್ನ್ಯಮ್ಭಃಶಸ್ತ್ರೈಃ ಕಿಮುತ ಕಲ್ಪಿತೈಃ ॥5॥**

**ಅನುವಾದ:** ಚಿದಾಕಾಶರೂಪನಾದ ನನಗೆ ಸತ್ಯವಾದ ಗಾಳಿ, ಬೆಂಕಿ, ನೀರು ಮತ್ತು ಶಸ್ತ್ರಗಳಿಂದಲೂ ಒಣಗುವುದು, ಉರಿಯುವುದು, ಒದ್ದೆಯಾಗುವುದು ಹಾಗೂ ಒಡೆಯುವುದಾಗಲೀ ಇಲ್ಲ. ಹೀಗಿದ್ದಾಗ ಕಲ್ಪಿತವಾದ ಅನಿಲಾದಿಗಳಿಂದ ಒಣಗುವುದು ಇತ್ಯಾದಿ ಇಲ್ಲವೆಂದು ಹೇಳಬೇಕಾದ್ದೇನಿದೆ?

**ವಿವರಣೆ :** ಆತ್ಮನಲ್ಲಿ ಬಾಹ್ಯವಸ್ತುಗಳ ಸಂಯೋಗದಿಂದ ನಾಶವುಂಟಾಗುವುದಿಲ್ಲ ಎಂಬುದನ್ನು ಇಲ್ಲಿ ವಿವರಿಸಿದ್ದಾರೆ. ಗಾಳಿ, ಬೆಂಕಿ ಮುಂತಾದವು ಸತ್ಯವೇ ಆಗಿರುತ್ತಿದ್ದರೂ ನಿರವಯವ ಚೈತನ್ಯ ಸ್ವರೂಪನಾದ ಆತ್ಮನನ್ನು ಸ್ವೀಕರಿಸಲು ಅವುಗಳಿಂದ ಸಾಧ್ಯವಿರುತ್ತಿರ ಲಿಲ್ಲ. ಹೀಗಿರುವಾಗ ಕಲ್ಪಿತವಾದ ವಾಯ್ವಾದಿಗಳು ಸತ್ಯವಾದ ಆತ್ಮನನ್ನು ಸ್ವೀಕರಿಸುವುದಿಲ್ಲ ಎಂದು ಬೇರೆ ಹೇಳಬೇಕಾಗಿಲ್ಲ. ಯಾಕೆಂದರೆ ಮಿಥ್ಯೆಯಾದ ವಸ್ತು ಸತ್ಯವಸ್ತುವನ್ನು ಸ್ವೀಕರಿಸ ಲಾರದು. ಮರೀಚಿಕೆಯ ನೀರು ಮರುಭೂಮಿಯನ್ನು ಒದ್ದೆಮಾಡಲಾರದು.

ಈ ಶ್ಲೋಕವನ್ನು ಇನ್ನೊಂದು ರೀತಿಯಲ್ಲೂ ಅರ್ಥಮಾಡಿಕೊಳ್ಳ ಬಹುದು. ವ್ಯಾವಹಾರಿಕ ಸತ್ಯವಾದ ಆಕಾಶಕ್ಕೆ ಹೋಲಿಸಿದರೆ ಅನಿಲಾದಿಗಳು ಸತ್ಯ. ಆದರೆ ಪಾರಮಾರ್ಥಿಕವಾದ ಆತ್ಮನ ದೃಷ್ಟಿಯಿಂದ ಅವುಗಳು ಕಲ್ಪಿತ, ಎಂದರೆ ಮಿಥ್ಯೆ. ವ್ಯಾವಹಾರಿಕ ಸತ್ಯವಾದ ಆಕಾಶವನ್ನೇ ಅವುಗಳು ಸ್ವೀಕರಿಸುವುದಿಲ್ಲ. ಯಾಕೆಂದರೆ ಆಕಾಶ ನಿರವಯವವಾದ್ದರಿಂದ ಅಸಂಗವಾಗಿದೆ. ಹೀಗಿರುವಾಗ ಪಾರಮಾರ್ಥಿಕವಾದ ಚಿದಾಕಾಶ ಆತ್ಮನನ್ನು ಅವುಗಳು ಸ್ವೀಕರಿಸುವು ದಿಲ್ಲ ಎಂಬುದು ಅತ್ಯಂತ ಸ್ಪಷ್ಟವಾಗಿದೆ.

**ಅಭಾರೂಪಸ್ಯ ವಿಶ್ವಸ್ಯ ಭಾನಂ ಭಾಸನ್ನಿರ್ಧರ್ವಿನಾ।**
**ಕದಾಚಿನ್ನಾವಕಲ್ಪೇತ ಭಾ ಚಾಹಂ ತೇನಸರ್ವಗಃ ॥6॥**

**ಅನುವಾದ :** ಜಡವಾದ ಜಗತ್ತು ಚೈತನ್ಯದ ಸಂಬಂಧವಿಲ್ಲದೆ ಪ್ರಕಾಶಿಸುವುದು ಎಂದಿಗೂ ಸಾಧ್ಯವಿಲ್ಲ. ಚೈತನ್ಯವು ನಾನೇ. ಹಾಗಾಗಿ ನಾನು ಸರ್ವವ್ಯಾಪಿ.

**ವಿವರಣೆ :** ಚೈತನ್ಯವು ತಾನಾಗಿಯೇ ಬೆಳಗುವುದು. ಆದರೆ ಜಡವು ತಾನೇ ಬೆಳಗಲಾರದು. ಅದು ಚೈತನ್ಯದ ಸಂಬಂಧದಿಂದ ಬೆಳಗಲ್ಪಡುತ್ತದೆ. ಹಾಗಾಗಿ ಎಲ್ಲೆಲ್ಲಿ ಜಗತ್ತು ಇದೆಯೋ ಅಲ್ಲಲ್ಲಿ ಅದನ್ನು ಬೆಳಗುವ ಚೈತನ್ಯವೂ ಇದೆ ಎಂದಾಯಿತು. ಹಾಗಾದರೆ ಚೈತನ್ಯವು ಸರ್ವವ್ಯಾಪಿ ಎಂಬುದು ಸಿದ್ಧವಾಗುತ್ತದೆ. ಆ ಚೈತನ್ಯವು ನನ್ನ ಸ್ವರೂಪವೇ ಆದ್ದರಿಂದ ನಾನು ಸರ್ವವ್ಯಾಪಿ ಎಂದು ತಿಳಿಯಬಹುದು.

**ನ ಹಿ ಭಾನಾದೃತೇ ಸತ್ವಂ ರ್ತೇ ಭಾನಂ ಚಿತೋಚಿತಃ।**
**ಚಿತ್ಸಂಭೇದೋಪಿ ನಾಧ್ಯಾಸಾದೃತೇ ತೇನಾಹಮದ್ವಯಃ ॥7॥**

**ಅನುವಾದ :** ಅರಿವಿಗಿಂತ ಬೇರೆಯಾದ ಇರುವಿಕೆಯಿಲ್ಲ. ಚೈತನ್ಯದ (ಸಂಬಂಧ)ವಿಲ್ಲದೆ ಜಡದ ಅರಿವು ಸಾಧ್ಯವಿಲ್ಲ. ಚೈತನ್ಯದ ಸಂಬಂಧವೂ ಅಧ್ಯಾಸವಿಲ್ಲದೆ ಸಾಧ್ಯವಿಲ್ಲ. ಆದ್ದರಿಂದ ನಾನು ಅದ್ವಯನು.

**ವಿವರಣೆ :** ಒಂದು ವಸ್ತು ಇದೆ ಎನ್ನಬೇಕಿದ್ದರೆ ಅದರ ಜ್ಞಾನವು ಆವಶ್ಯಕ. ಹಾಗಾಗಿ ಜ್ಞಾನಕ್ಕಿಂತ ಬೇರೆಯಾದ ಅಸ್ತಿತ್ವವಿಲ್ಲ. ಚೈತನ್ಯವು ಸ್ವಯಂಪ್ರಕಾಶವಾದ್ದರಿಂದ ಅದರ ಅಸ್ತಿತ್ವವೂ ಸ್ವತಂತ್ರ ಎಂದು ತಿಳಿಯಬಹುದು. ಆದರೆ ಜಡವು ಚೈತನ್ಯದ ಸಂಬಂಧವಿಲ್ಲದೆ ಸ್ವತಃ ಬೆಳಗಲಾರದು. ಆದ್ದರಿಂದ ಜಡದ ಅಸ್ತಿತ್ವವು ಚೈತನ್ಯಸಂಬಂಧದ ಅಧೀನವಾಗಿದೆ. ಜಡ ಹಾಗೂ ಚೈತನ್ಯಗಳ ನಡುವೆ ವಾಸ್ತವವಾದ ಸಂಬಂಧವಿರಲು ಸಾಧ್ಯವಿಲ್ಲ. ಹಾಗಾಗಿ ಅವುಗಳ ನಡುವಿನ ಸಂಬಂಧ ಆಧ್ಯಾಸಿಕ. ಇದರಿಂದ ಜಡ ಪದಾರ್ಥಗಳೂ ಅಧ್ಯಸ್ತ, ಮಿಥ್ಯೆ ಎಂದು ತಿಳಿಯಬಹುದು. ಕೇವಲ ಚೈತನ್ಯವೊಂದೇ ಸತ್ಯವಾದ್ದರಿಂದ ಆತ್ಮನ ಅದ್ವಯತ್ವವು ಸಿದ್ಧವಾಗುತ್ತದೆ.

**ಮುಂದುವರೆಯುವುದು...**

## ಭಾವಪೂರ್ಣ ಶ್ರದ್ಧಾಂಜಲಿ



ಶ್ರೀ ನಂಜುಂಡೇಶ್ವರ ಟ್ರೇಡರ್ಸ್‌ನ ಮಾಲೀಕರು, ಬಸವನಗುಡಿ ಕ್ಷೇತ್ರ ಬ್ರಾಹ್ಮಣ ಸಂಘದ ಸಂಸ್ಥಾಪಕ ಅಧ್ಯಕ್ಷರು, ಗಿರಿನಗರದಲ್ಲಿ ಪ್ರತಿಯೊಬ್ಬರಿಗೂ ಚಿರಪರಿಚಿತರು, ಬನಶಂಕರಿ ವೆಲ್‌ಫೇರ್ ಅಸೋಸಿಯೇಶನ್‌ನ ಅಧ್ಯಕ್ಷರು, ಶ್ರೀ ಶಕ್ತಿ ಗಣಪತಿ ಸೇವಾ ಟ್ರಸ್ಟ್‌ನ ಸಂಸ್ಥಾಪಕ ಅಧ್ಯಕ್ಷರು, ಬಿ.ಜೆ.ಪಿ. ಯಲ್ಲಿ ಸಕ್ರಿಯವಾಗಿ ಗುರುತಿಸಿಕೊಂಡಿದ್ದವರು ಆದ **ಶ್ರೀ ಆರ್.ವಿ ಸುಬ್ರಹ್ಮಣ್ಯರವರು ಇತ್ತೀಚೆಗೆ ನಮ್ಮನ್ನಗಲಿದ್ದಾರೆ.**

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಈ ಬಾರಿಯ ಚುನಾವಣೆಯಲ್ಲಿ ಹಾಲಿ ಅಧ್ಯಕ್ಷರಾಗಿರುವ ಶ್ರೀ ಅಶೋಕ್ ಹಾರನಹಳ್ಳಿರವರ ಚುನಾವಣಾ ಕಾರ್ಯಗಳಲ್ಲಿ ಸಕ್ರಿಯರಾಗಿ ಪಾಲ್ಗೊಂಡಿದ್ದರು. ಸಮಾಜಮುಖಿ ಕಾರ್ಯಗಳಲ್ಲಿ ಮುಂಚೂಣಿ ಯಲ್ಲಿದ್ದವರು, ಹಲವಾರು ಧಾರ್ಮಿಕ ಕಾರ್ಯಕ್ರಮಗಳ ಆಯೋಜಕರು, ವಿಪ್ರ ಸಂಘಟನೆಯಲ್ಲಿ ಕ್ರಿಯಾಶೀಲರು, ಕರೋನಾ ಪಿಡುಗಿನ ಸಮಯದಲ್ಲಿ ಬಸವನಗುಡಿ ಕ್ಷೇತ್ರದಲ್ಲಿ ಎಲ್ಲರ ಸಹಕಾರ ದೊಂದಿಗೆ ಸುಮಾರು 8,000 ಫುಡ್ ಕಿಟ್ ವಿತರಣೆಗೆ ನೆರವಾಗಿ, ಹತ್ತು ಹಲವಾರು ಸಮಾಜಮುಖಿ ಸೇವೆಯಲ್ಲಿ ಭಾಗಿಯಾಗಿ ಸಂಘ ಸಂಸ್ಥೆಗಳೊಂದಿಗೆ ನೆರವಾಗಿದ್ದರು. **ಇವರ ಅಕಾಲಿಕ ಮರಣವು ವಿಪ್ರ ಸಮುದಾಯಕ್ಕೆ ತುಂಬಲಾರದ ನಷ್ಟವಾಗಿದೆ. ಇವರ ಆತ್ಮಕ್ಕೆ ಶಾಂತಿ–ಸದ್ಗತಿ ದೊರೆಯಲೆಂದು ಮಹಾಸಭೆಯ ಪದಾದಿಕಾರಿಗಳು, ಸಮಸ್ತ ಸದಸ್ಯರು ಹಾಗೂ ವಿಪ್ರ ಬಾಂಧವರ ಪರವಾಗಿ ಸಂತಾಪವನ್ನು ಸೂಚಿಸಿ ಶ್ರದ್ಧಾಂಜಲಿಯನ್ನು ಅರ್ಪಿಸುತ್ತದೆ.**

# “ಭೀಮಪಲಾಸ”

–ಕಾರ್ತಿಕ್ ಎಸ್ ಬಾಪಟ್.

## ಸ್ವರ ಸಾಮ್ರಾಟ್ ಭೀಮಸೇನ ಜೋಶಿಯವರ ನೆನಪಿನಲ್ಲಿ



ಗುರುವನ್ನರಸಿ ಉಟ್ಟಬಟ್ಟೆಯಲ್ಲಿ, ಮನೆಮಠವನ್ನು ತೊರೆದು ಹೊರಟ ಬಾಲಕ ಭೀಮಣ್ಣ ಮುಂದೊಂದು ದಿನ ಜಗತ್ತೇ ನಿಬ್ಬೆರ–ಗಾಗುವಷ್ಟರ ಮಟ್ಟಿಗೆ ಬೆಳೆದು ಹಿಂದೂಸ್ಥಾನಿ ಸಂಗೀತಾಸಕ್ತರ ಹೃದಯ ಸಾಮ್ರಾಟ್ ಆಗಿ ವಿರಾಜಮಾನರಾದ ಪರಿ ನಿಜಕ್ಕೂ ಸೋಜಿಗೆ. ತನ್ನ 20ನೇ ವಯಸ್ಸಿನಲ್ಲಿಯೆ ಗಾಯನವನ್ನು ಪ್ರಾರಂಭ ಮಾಡಿದ ಪಂಡಿತ್ ಭೀಮಸೇನ ಜೋಶಿಯವರು ಅಲ್ಲಿಂದ ಎಂದೂ ಹಿಂತಿರುಗಿ ನೋಡಲಿಲ್ಲ. ಹಾಗೆಯೇ ಸಂಗೀತ ಶಾರದೆಯ ಅನ್ವೇಷಣೆಯಲ್ಲಿ ಅವರ ಹಾದಿ ಕೇವಲ ಹೂವುಹಾಸಿನದಾಗಿರಲಿಲ್ಲ.

ಹಾಗೆ ನೋಡಿದರೆ ಪಂಡಿತರು ಸಂಗೀತ ಪರಂಪರೆಯ ಹಿನ್ನೆಲೆಯುಳ್ಳ ಕುಟುಂಬದಿಂದ ಬಂದವರಲ್ಲ. ಆದರೆ ಅವರ ತಾಯಿ ಸಂಜೆಯ ಸಮಯದಲ್ಲಿ ದೇವರ ಮುಂದೆ ದೀಪವನ್ನು ಹಚ್ಚಿ ತಮ್ಮಷ್ಟಕ್ಕೆ ತಾವೇ ಪುರಂದರದಾಸ ಪದಗಳನ್ನು ಗುನುಗಿಕೊಳ್ಳುತ್ತಿದ್ದರಂತೆ, ಅದು ಭೀಮಸೇನರ ಮೇಲೆ ಪ್ರಭಾವ ಬೀರಿತ್ತು. ಹಾಗೂ ಕಲಿಕೆಯಲ್ಲೂ ಬಾಲಕ ಭೀಮಣ್ಣ ಮುಂದಿದ್ದರು. ಆದರೆ ಅವರ ಉತ್ಸಾಹ, ಒಲವು ಎಲ್ಲವೂ ಸಂಗೀತವಾಗಿತ್ತು. ದಿನಂಪ್ರತಿ ಶಾಲೆಗೆ ಹೋಗುವುದು ಶಾಲೆಯಿಂದ ಬರುವಾಗ ಮನೆಯ ಬಳಿಯೇ ಇದ್ದ ಗ್ರಾಮಫೋನ್ ರೆಕಾರ್ಡ್‌ಗಳನ್ನು ಮಾರುವ ಅಂಗಡಿಯ ಬಳಿ ನಿಂತು ಅಲ್ಲಿ ಆ ಗ್ರಾಮಫೋನ್‌ಗಳಲ್ಲಿ ನುಡಿಸುವ ಹಾಡುಗಳನ್ನು ಕೇಳುವುದು ತಮ್ಮ ದಿನಚರಿಯ ಒಂದು ಭಾಗವೇ ಆಗಿಹೋಗಿತ್ತು. ಹೀಗೆ ಒಂದು ದಿನ ಅಬ್ದುಲ್ ಕರೀಂ ಖಾನರ “ಪಿಯ ಬಿನ್ ಚೈನ್ ನಹಿ ಆವತ್” ಗಾಯನವನ್ನು ಆಲಿಸುತ್ತಿದ್ದಾಗ ಈ ಗಾಯನ ಅವರನ್ನು ಬಹುವಾಗಿ ಆವರಿಸಿತ್ತು. ಅದೇ ಗುಂಗಿನಲ್ಲಿದ್ದ ಭೀಮಣ್ಣನವರು ಒಂದು ದಿನ ತನ್ನ ಗುರುವನ್ನು ಅರಿಸಿ ಮನೆಬಿಟ್ಟು ಉಟ್ಟಬಟ್ಟೆಯಲ್ಲಿ ಕೈಯಲ್ಲಿ ಕಿಂಚಿತ್ತು ಕಾಸಿಲ್ಲದೆ ರೈಲುಬಂಡಿಯನ್ನು ಏರಿಯೇ ಬಿಟ್ಟರು.

ಹಾಗೆ ರೈಲಿನಲ್ಲಿ ಹೋಗುವಾಗ ಹಾಡು ಹೇಳಿ ಜನರನ್ನು ರಂಜಿಸಿ ಅವರಿಂದ ಹಣವನ್ನು ಪಡೆದು ಮುಂದೆ ಸಾಗುತ್ತಿದ್ದರಂತೆ, ಕೆಲವೊಮ್ಮೆ ಟಿಕೆಟ್ ಇಲ್ಲದ ಪ್ರಯಾಣಕ್ಕಾಗಿ ರೈಲ್ವೆ ಪೋಲಿಸರು ಭೀಮಣ್ಣನನ್ನು ತಡೆದು ಸ್ಟೇಷನ್‌ನಲ್ಲಿ ಕುಳ್ಳಿರಿಸಿದರಂತೆ. ಆಗ ಭೀಮಣ್ಣ ಅವರನ್ನು ಗಾಯನದ ಮೂಲಕ ರಂಜಿಸಿ ಅವರಿಂದ ಬಿಡಿಸಿಕೊಂಡು ಪ್ರವಾಸ ಕೈಗೊಳ್ಳುತ್ತಿದ್ದರಂತೆ. ಹೀಗೆ ರೈಲಿನಲ್ಲಿ ಸಹ ಪ್ರಯಾಣಿಕರು ನೀಡಿದ ಹಣವನ್ನು ಹಾಗೂ ಸ್ಟೇಷನ್ ಮಾಸ್ಟರ್‌ಗಳ ಕೃಪೆಯಿಂದಾಗಿ ಪ್ರಯಾಣ ಬೆಳೆಸಿ ಪುಣೆ ತಲುಪಿದರು. ಅಲ್ಲಿಂದ ಗ್ವಾಲಿಯರ್, ದೆಹಲಿ, ಕೊಲ್ಕತ್ತಾ, ಲಕ್ನೋ ಹಾಗೂ ರಾಂಪುರದಲ್ಲಿ ಸಣ್ಣಪುಟ್ಟ ಕೆಲಸವನ್ನು ಮಾಡುತ್ತಾ ಸತತ ಮೂರು ವರ್ಷಗಳ ಕಾಲ ಗುರುವಿನ ಅನ್ವೇಷಣೆಯಲ್ಲಿ ತೊಡಗಿಕೊಂಡಿದ್ದರು.

ಆಗ ಸಿಕ್ಕವರೇ ಗ್ವಾಲಿಯರ್‌ನ ಪ್ರಸಿದ್ಧ ಸರೋದ್ ವಾದಕ ಉಸ್ತಾದ್ ಹಜೀಜ್ ಅಲಿಖಾನ್, ಗ್ವಾಲಿಯರ್‌ನಲ್ಲಿ ಅಂದಿನ ಮಹಾರಾಜರು ನಡೆಸುತ್ತಿದ್ದ ಮಾಧವ ಸಂಗೀತ ಶಾಲೆಗೆ ಸೇರಿ ಸಂಗೀತಾಭ್ಯಾಸ ಮುಂದುವರೆಸಿದ್ದರು. ಇತ್ತ ಭೀಮಣ್ಣನ ಹುಡಕಾಟ ಮನೆಯಲ್ಲಿ ನಡೆದಿತ್ತು. ಮನೆಯವರಿಗೆ ಭೀಮಣ್ಣ ಗ್ವಾಲಿಯರ್‌ನಲ್ಲಿರುವ ವಿಷಯ ತಿಳಿದಿತ್ತು.

ಜಲಂಧರನಲ್ಲಿ ಆರ್ಯ ಸಂಗೀತ ವಿದ್ಯಾಲಯದಲ್ಲಿ ದ್ರುಪದ ಕಲಿಯುತ್ತಿದ್ದ ಭೀಮಣ್ಣನವರು ಹರಿವಲ್ಲಭ ಮೇಳಕ್ಕೆ ಬರುತ್ತಿದ್ದ ಸಂಗೀತ ಗಾರರೊಡನೆ ತಂಬೂರಿಯೊಡನೆ ಸಾಥ್ ಕೊಡಲು ಕೂರುತ್ತಿದ್ದರು. ಆಗ ಪೂನಾದ ವಿನಾಯಕರಾವ್ ಪಟವರ್ಧನ ಭೇಟಿಯಾದರು. ಪಟವರ್ಧನ ಅವರ ಸಲಹೆಯಂತೆ ಭೀಮಣ್ಣ ರಾವುಭಾವು ಕುಂದಗೋಳಕರ ಅವರಲ್ಲಿ ಶಿಷ್ಯತ್ವ ಸ್ವೀಕರಿಸಿದರು, ನಂತರ ಸವಾಯಿ ಗಂಧರ್ವರ ಮನೆಯಲ್ಲಿ ಉಳಿದು ಅವರ ಬಳಿ ಸಂಗೀತ ಕಲಿಕೆಯನ್ನು ಪ್ರಾರಂಭಿಸಿದರು. ಆಗ ಈಗಿನಂತೆ ಆಧುನಿಕ ಸೌಲಭ್ಯಗಳು ಇರುತ್ತಿರಲಿಲ್ಲ. ಬೆಳ್ಳಂಬೆಳ್ಳಿಗೆ ನಾಲ್ಕು ಗಂಟೆಗೆ ಎದ್ದು ನಲವತ್ತು, ಐವತ್ತು ಕೊಡ ನೀರು ತುಂಬುವುದು ನಂತರ ಸಂಗೀತ ಪಾಠ ಹೀಗೆ ಸಾಗುತ್ತಿತ್ತಂತೆ ಅವರ ಕಲಿಕಾ ದಿನಗಳು.

ಕಾಲಕ್ರಮೇಣ ಭೀಮಣ್ಣನವರು ಅತ್ಯಂತ ಶ್ರದ್ಧೆಯಿಂದ ಸಂಗೀತ ಕಲಿಕೆಯನ್ನು ಹಲವು ಗಂಟೆಗಳ ಕಾಲ ಸತತವಾಗಿ ಅಭ್ಯಸಿಸುತ್ತಿದ್ದರು. ಒಮ್ಮೊಮ್ಮೆ ಗುರುಗಳಿಗೆ ವಯೋಸಹಜವಾಗಿ ಹೆಚ್ಚು ಹೊತ್ತು ಸಂಗೀತ ವನ್ನು ಆಲಿಸಲು ಆಗುತ್ತಿರಲಿಲ್ಲವಂತೆ, ಆಗ ಭೀಮಣ್ಣ ನಮ್ಮ ಗತಿಯೇನು. ನಮ್ಮನ್ನು ತಿದ್ದುವವರಾರು, ನಮ್ಮ ಸಂಗೀತವನ್ನು ಕೇಳುವರಾರು ಅಂದು ಕೊಳ್ಳುತ್ತಿದ್ದರಂತೆ. ಒಮ್ಮೆ ಹಾಗೆಂದುಕೊಂಡು ಅಭ್ಯಾಸವನ್ನು ಶುರು ಮಾಡಿದಾಗ ಕಪ್ಪು ನಾಯಿಯೊಂದು ಸಂಗೀತಾಭ್ಯಾಸ ಮುಗಿಯುವವರೆಗೆ ಭೀಮಣ್ಣನವರ ಬಳಿ ಬಂದು ಕುಳಿತುಕೊಳ್ಳುತ್ತಿತ್ತಂತೆ, ಹಾಗೆ ಬಂದ ಶ್ವಾನವು ಸಂಗೀತಾಭ್ಯಾಸದ ನಂತರ ಊರೆಲ್ಲಾ ಹುಡುಕಿದರೂ ಎಲ್ಲೂ ಕಾಣಸಿಗುತ್ತಿರಲಿಲ್ಲವಂತೆ. ಇದು ಮಹಾಮಹಿಮ ಗುರುರಾಯರ ಮಹಿಮೆ ಯಲ್ಲದೆ ಇನ್ನೇನು ಎಂದು ಭೀಮಣ್ಣನವರು ಹಲವೆಡೆ ಹೇಳಿದ್ದಾರೆ.

ಹೀಗೆ ಪಂಡಿತ್ ಭೀಮಸೇನ ಜೋಷಿಯವರ ಸಂಗೀತ ಪ್ರೀತಿಯ ಕಥೆಗಳು ಹತ್ತಾರಿವೆ. ಇನ್ನೊಂದು ಸೋಜಿಗದ ಸಂಗತಿಯೆಂದರೆ ಸಾಮಾನ್ಯವಾಗಿ ಆತ್ಮಕಥೆಗಳನ್ನು ಒಂದೂ ಖುದ್ದು ತಾನಾಗಿ ಅಂದರೆ ಯಾರ ಆತ್ಮಕಥೆ ಪ್ರಕಟಗೊಳ್ಳುತ್ತದೊ ಅವರು ಬರೆಯುತ್ತಾರೆ ಇಲ್ಲ ಅವರ ಮಕ್ಕಳು ಅಥವಾ ಅವರ ಹತ್ತಿರದ ಒಡನಾಡಿಗಳು ಬರೆಯುತ್ತಾರೆ. ಆದರೆ ಪಂಡಿತ್ ಭೀಮನಸೇನ ಜೋಷಿ ಅವರ ಆತ್ಮಚರಿತ್ರೆಯನ್ನು ಬರೆದದ್ದು ಅವರ ತಂದೆ ಗುರುರಾಜ ಜೋಷಿಯವರು. ಹೀಗೆ ಭೀಮಸೇನ ಜೋಷಿಯವರ ಜೀವನ ಗಾಥೆ ವಿಶಿಷ್ಟವಾದುದ್ದು.

15ನೇ ಶತಮಾನದಲ್ಲಿ ಕೀರ್ತನಾ ಸಾಹಿತ್ಯ ಮುನ್ನೆಲೆಗೆ ಬಂತು. ಕೀರ್ತನಾ ಸಾಹಿತ್ಯದ ಪ್ರಮುಖ ಲಕ್ಷಣವೆಂದರೆ ಸಂಗೀತ ಪ್ರಧಾನ ವಾಗಿರುವುದು. ಹಾಗೆ ನೋಡಿದರೆ ಕೀರ್ತನೆ ಸಾಹಿತ್ಯದ ಕೊಡುಗೆಯನ್ನು ಸಾಹಿತ್ಯ ಕ್ಷೇತ್ರಕ್ಕಿಂತ ಹೆಚ್ಚಾಗಿ ಸಂಗೀತಕ್ಕೆ ಹೆಚ್ಚು ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ನರಹರಿ ತೀರ್ಥರಿಂದಾದಿಯಾಗಿ ವ್ಯಾಸರಾಯರು, ವಾದಿರಾಜರು, ಪುರಂದರದಾಸರು ಮತ್ತು ಕನಕದಾಸರು ಕೀರ್ತನಾ ಸಾಹಿತ್ಯವನ್ನು ಉತ್ತುಂಗಕ್ಕೆ ಕೊಂಡು ಹೋದರು. ಅದೇ ರೀತಿ 20ನೇ ಶತಮಾನದಲ್ಲಿ ಕೀರ್ತನಾ ಸಾಹಿತ್ಯವನ್ನು ದಾಸವಾಣಿಯ ಮೂಲಕ ಮನೆಮನೆಗಳಿಗೆ ತಲುಪುವಂತೆ ಮಾಡಿದ್ದು ಭೀಮಸೇನ ಜೋಷಿ ಅವರು ಅಂದರೆ ತಪ್ಪಾಗಲಾರದು. ದಾಸರ ಕೀರ್ತನೆ "ಭಾಗ್ಯದ ಲಕ್ಷ್ಮೀ ಬಾರಮ್ಮ" ಅವರ ಕಂಠದಲ್ಲಿ ಎಷ್ಟರಮಟ್ಟಿಗೆ ಜನಜನಿತವಾಗಿದೆ ಎಂದರೆ ಕನ್ನಡ ಬಾರದವರು ಈ ಕೀರ್ತನೆ ಕೇಳಿದಾಕ್ಷಣ ಇಂದಿಗೂ ತಮ್ಮನ್ನು ತಾವೇ ಮರೆಯುತ್ತಾರೆ.

ಹೀಗೆ ಕನ್ನಡ, ಮರಾಠಿ, ಹಿಂದಿ ಭಜನೆಗಳು ಮತ್ತು ಅಭಂಗಗಳು ಖಯಾಲ್ ರೂಪದ ಹಾಡುಗಾರಿಕೆ ಭೀಮಸೇನ ಜೋಷಿಯವರಿಗೆ ಅಪಾರ ಕೀರ್ತಿಯನ್ನು ತಂದುಕೊಟ್ಟಿತು. ಧ್ವನಿಮುದ್ರಿಕೆಗಳಂತೂ ಕೋಟ್ಯಂತರ ಕೇಳುಗರನ್ನು ಪ್ರಸನ್ನಗೊಳಿಸಿದವು. ಅವರ ಸಂಗೀತ ಬೈಠಕ್‌ಗಳನ್ನು ಖುದ್ದಾಗಿ ಆಲಿಸಿದ ಜನರಂತೂ ಇಂದಿಗೂ ಅದರ ಗುಂಗಿನಲ್ಲಿರುವಂತೆ ಕಂಡುಬಂದರೆ ಆಶ್ಚರ್ಯವಿಲ್ಲ. **"ಭೀಮ್ ಪಲಾಸ"** ರಾಗದಲ್ಲಿ ಭೀಮಸೇನ ಜೋಷಿ ಹಾಡಲು ಪ್ರಾರಂಭಿಸಿದರೆ ರಸಿಕರು ತಾವೆಲ್ಲಿದ್ದೇವೆಂಬುದೇ ಮರೆಯುತ್ತಿದ್ದರಂತೆ. ಅದು ಪಂಡಿತ್ ಭೀಮಸೇನರ ಕಂಠಕ್ಕಿದ್ದ ಶಕ್ತಿ.

ಹೀಗೆ ಹಾಡಲೆಂದೇ ಹುಟ್ಟಿದ ಸಾಕ್ಷತ್ ಸರಸ್ವತಿದೇವಿಯೇ ಸಂಗೀತೋಪಾಸನೆಗೆ ಆಯ್ದುಕೊಂಡ ಸ್ವರಸಾಮ್ರಾಟ **"ಭೀಮ"**ಸೇನ ಜೋಷಿ ಅವರು ಇಂದಿಗೆ ನಮ್ಮೊಂದಿಗಿದಿದ್ದರೆ ನೂರು ವರುಷ ಪೂರೈಸುತ್ತಿದ್ದರು. ಆದರೆ ದೈಹಿಕವಾಗಿ ಅವರು ನಮ್ಮೊಂದಿಗಿಲ್ಲದಿದ್ದರೂ ಅವರ ಸ್ವರ, ರಾಗ, ಲಯ, ತಾಳ ಸೂರ್ಯ-ಚಂದ್ರರಿರುವವರೆಗೂ ಅಮರ.

ದೇಶಾದ್ಯಂತ **"ಭಾರತ ರತ್ನ"** ಪಂಡಿತ್ ಭೀಮಸೇನ ಜೋಷಿಯವರ ಜನ್ಮಶತಮಾನೋತ್ಸವವನ್ನು ಅವರ ಅಭಿಮಾನಿಗಳು ಹಾಗೂ ಸರ್ಕಾರ ಆಯೋಜಿಸುತ್ತಿದೆ. ಇಂತಹ ಸಂದರ್ಭದಲ್ಲಿ ಅವರನ್ನು ನೆನೆಯುವುದು ಅವರ ಕುರಿತು ಕೆಲವು ವಿಚಾರಗಳನ್ನು ನಿಮ್ಮೊಡನೆ ಹಂಚಿಕೊಳ್ಳುವ ಅವಕಾಶ ಸಿಕ್ಕಿರುವುದೇ ವಿಪ್ರನುಡಿಯ ಭಾಗ್ಯ ಎನ್ನಬಹುದು.

BADRINATH YATRA SANGH, BELAGAVI-BENGALOORU

**ಬದರಿನಾಥ ಯಾತ್ರಾ ಸಂಘ, ಬೆಳಗಾವಿ-ಬೆಂಗಳೂರು ಇವರಿಂದ**

★ **ವಿಮಾನ ಮತ್ತು ರೈಲು ಮೂಲಕ ಕಾಶ್ಮಿರ ಪ್ರವಾಸ ದಿ. 04/04 ರಿಂದ 11/04/2022 ರವರೆಗೆ ಪ್ರತಿ ಸೀಟಿಗೆ ಬೆಳಗಾವಿ 43000/- ಮತ್ತು ಬೆಂಗಳೂರು ರೂ. 45000/- :** ಗುಲ್ಮಾರ್ಗ, ಪೆಹಲ್ಗಾಮ, ಸೋನಮಾರ್ಗ, ತುಲಿಪಗಾರ್ಡನ, ದಾಲಲೇಕ್, ವೈಷ್ಣೋದೇವಿ ಇತ್ಯಾದಿ. ಡಿಲಕ್ಸ್ ರೂಮಗಳಲ್ಲಿ ವಸತಿ.

★ **ಚಾರಧಾಮ್ ಯಾತ್ರೆ ದಿ. 26-05 ರಿಂದ 05-06-2022 ರವರೆಗೆ (ರೂ. 28500/-)** ಹರಿದ್ವಾರದಿಂದ ಪ್ರಾರಂಭವಾಗಿ ಯಮನೋತ್ರಿ, ಗಂಗೋತ್ರಿ (ಹರ್ಸಿಲ್ ಮಿನಿ ಸ್ವಿಟ್ಜರಲ್ಯಾಂಡ್ ಬಚ್ಚಿಕ), ಕೇದಾರನಾಥ, ಬದರಿನಾಥ, ಹರಿದ್ವಾರದಲ್ಲಿ ಯಾತ್ರೆ ಮುಕ್ತಾಯ. **ರೇಲ್ವೆ ಟಿಕೇಟ ಜನೇವರಿಯಲ್ಲಿ ಪ್ರಾರಂಭವಾಗುತ್ತವೆ. ದಿ. 5/6 ರಿಂದ 8/6/2022 ರವರೆಗಿನ ಕಾಶಿಗೆ ಬರುವ ಯಾತ್ರಿಕರು ರೂ. 5000/- ಹೆಚ್ಚಿಗೆ ಭರಿಸಬೇಕು.**

**ಸೂಚನೆ :** ಈ ಯಾತ್ರೆಯಲ್ಲಿ ಸಂದರ್ಭಕ್ಕನುಸಾರವಾಗಿ 2 X 2, 3 X 3, 4 X 4 ರೂಮ್ ವಸತಿಯೊಂದಿಗೆ ಪ್ರತಿದಿನ ಎರಡು ಬಾರಿ ಚಹಾ/ಕಾಫಿ, ಎರಡು ಊಟ, ಮುಂಜಾನೆ ಉಪಹಾರ ಕೊಡಲಾಗುವುದು. ಯಾತ್ರೆಗೆ ಬರುವವರು ಮರಳಿಸಲಾಗದ ಮುಂಗಡ ಹಣ ರೂ. 6000/- ಗಳನ್ನು ತುಂಬಿ ಇಂದೇ ತಮ್ಮ ಸೀಟನ್ನು ಕಾಯ್ದಿರಿಸಿಕೊಳ್ಳಬೇಕಾಗಿ ವಿನಂತಿ. ಎಲ್ಲ ಯಾತ್ರೆಗಳು ಬೆಳಗಾವಿ-ಬೆಂಗಳೂರಿನಿಂದ ಪ್ರಾರಂಭವಾಗುತ್ತವೆ. ತಮ್ಮ ಊರಿನವರೆಗೆ ರೇಲ್ವೆ ಟಿಕೇಟ್‌ನ ರಿಝರ್ವೇಶನ್ ಮಾಡಿ ಕೊಡಲಾಗುವುದು ಅಥವಾ ನಿಮ್ಮ ಊರುಗಳಿಂದ ಹರಿದ್ವಾರಕ್ಕೆ ಬಂದು ಹೋಗಲು ರೈಲಿನ ಮಾಹಿತಿಯನ್ನು ಸಹ ಕೊಡಲಾಗುವುದು.

★★★

**ಕಾಶಿಯಿಂದ ಅಲಹಾಬಾದ-ಪ್ರಯಾಗ-ಗಯಾ-ಚಿತ್ರಕೂಟ ಮತ್ತು ಕಾಶಿವರೆಗೆ ಧಾರ್ಮಿಕ ಯಾತ್ರೆ**

★ **ಯಾತ್ರಾ ದಿ. 08/06 ರಿಂದ 15/06/2022 ರವರೆಗೆ, ಪ್ರತಿ ಯಾತ್ರಿಕರಿಗೆ ರೂ. 12000/- ಮಾತ್ರ.**

**ಸೂಚನೆ :** ಈ ಯಾತ್ರೆಯಲ್ಲಿ ಸಂದರ್ಭಕ್ಕನುಸಾರವಾಗಿ ರೂಮ್ ಮತ್ತು ಸಾಮಾನ್ಯ ವಸತಿಯೊಂದಿಗೆ ಪ್ರತಿದಿನ ಎರಡು ಬಾರಿ ಚಹಾ/ಕಾಫಿ, ಎರಡು ಊಟ, ಮುಂಜಾನೆ ಉಪಹಾರ ಕೊಡಲಾಗುವುದು. ಯಾತ್ರೆಗೆ ಬರುವವರು ಮರಳಿಸಲಾಗದ ಮುಂಗಡ ಹಣ ರೂ. 5000/- ಗಳನ್ನು ತುಂಬಿ ಇಂದೇ ತಮ್ಮ ಸೀಟನ್ನು ಕಾಯ್ದಿರಿಸಿಕೊಳ್ಳಬೇಕಾಗಿ ವಿನಂತಿ. ಯಾತ್ರೆಯು ಕಾಶಿಯಿಂದ ಪ್ರಾರಂಭವಾಗಿ ಕಾಶಿಯಲ್ಲಿ ಮುಕ್ತಾಯಗೊಳ್ಳುತ್ತದೆ. ತಮ್ಮ ಊರುಗಳಿಂದ ಕಾಶಿಗೆ ಬರುವ ಮತ್ತು ಹೋಗುವ ರೇಲ್ವೆ ಟಿಕೇಟ್‌ನ ರಿಝರ್ವೇಶನ್ ಮಾಡಿಸಿಕೊಳ್ಳಿ ಅಥವಾ ಅದರ ಬಗ್ಗೆ ಮಾಹಿತಿ ಕೊಡಲಾಗುವುದು.

**ಯಾತ್ರಿಕರು ಯಾತ್ರೆಯ ದಿನಾಂಕದಿಂದ 120 ದಿನಗಳ ಮುಂಚಿತವಾಗಿ ಬುಕ್ ಮಾಡಿದಲ್ಲಿ ಖಚಿತವಾಗಿ ರಿಝರ್ವೇಶನ್ ಸಿಗುತ್ತದೆ, ಗಮನಿಸಿ.**

**ಸಂಪರ್ಕಿಸಿ : ಶ್ರೀ ರಾಜೀವ ಜೋಶಿ, ಬೆಳಗಾವಿ. ಫೋನ್ 9448347054**
**ಪದ್ಮಾ ರಾವ್, ಬೆಂಗಳೂರು 7259423165**

**ವಿ.ಸೂ. 30 ಜನ ಸಿದ್ಧರಾದರೆ ಪ್ರತ್ಯೇಕವಾಗಿ ಇಚ್ಛುಕ ಯಾತ್ರೆಯನ್ನು ಮಾಡಿಸಲಾಗುವುದು**

**ಜೀವನದಲ್ಲಿ ಒಮ್ಮೆಯಾದರೂ ಇಂತಹ ಸದವಕಾಶದ ಲಾಭ ಪಡೆದು ಪುನಿತರಾಗಿ**

BADRINATH YATRA SANGH, BELAGAVI-BENGALOORU

ವಿಪ್ರನುಡಿ ಪತ್ರಿಕೆಗೆ ವರದಿ, ಲೇಖನಗಳನ್ನು ಕಳುಹಿಸುವವರು ಬರಹ, ನುಡಿಯಲ್ಲಿ ಟೈಪ್‌ಮಾಡಿ ಈ ಮೇಲ್ ಮುಖಾಂತರವೇ ಕಳುಹಿಸತಕ್ಕದ್ದು.
ಲೇಖನ ವರದಿಗಳನ್ನು ಕಳುಹಿಸಬೇಕಾದ
ಇ-ಮೇಲ್ : **e mail : vipranudi@gmail.com**

**ವಿಪ್ರನುಡಿ ಮಾಸಪತ್ರಿಕೆಗೆ ರೂ. 500/-**
**ಸಂದಾಯಮಾಡಿ ಚಂದಾದಾರರಾಗಿ**

# ಅಕ್ರಮ ಮತಾಂತರಗಳ ನಿಷೇಧ ಅತ್ಯಗತ್ಯ

– ಅಶೋಕ ಹಾರನಹಳ್ಳಿ

ಅಕ್ರಮ ಮತಾಂತರದ ಮೂಲಕ ತಮ್ಮ ಸಂಖ್ಯೆಯನ್ನು ಹೆಚ್ಚಿಸಿಕೊಳ್ಳಬೇಕು ಎಂದು ಯಾರಾದರೂ ಹಪಹಪಿಸುವುದು ಒಂದು ಮಾನಸಿಕ ಸಮಸ್ಯೆ. **"ಮೂಲತಃ ಮತಾಂತರ ಎಂಬುದು ಒಂದು ಮಾನಸಿಕ ಹಿಂಸಾಚಾರ" ಎಂದು "ಆರ್ಷ ವಿದ್ಯಾ ಗುರುಕುಲಂ" ಸಂಸ್ಥಾಪಕರೂ ಮಹಾನ್ವಂತರೂ ಆಗಿದ್ದ ಸ್ವಾಮಿ ದಯಾನಂದ ಸರಸ್ವತಿಯವರು ಹೇಳುತ್ತಿದ್ದರು.** ಮಹಾತ್ಮ ಗಾಂಧಿಯವರೂ ಅದನ್ನೇ ಹಲವು ಬಾರಿ ಹೇಳಿದ್ದಾರೆ. ಗಾಂಧೀಜಿಯವರು ತಮ್ಮ ಸುದೀರ್ಘ ಸಾರ್ವಜನಿಕ ಜೀವನದಲ್ಲಿ ಮತಾಂತರದ ಬಗ್ಗೆ ಹಲವಾರು ಲೇಖನಗಳನ್ನು, ಟಿಪ್ಪಣಿಗಳನ್ನು ಬರೆದಿದ್ದು, ಮತಾಂತರದ ಎಲ್ಲ ಆಯಾಮಗಳನ್ನೂ ನಿರ್ಭೀತಿಯಿಂದ, ನಿಷ್ಪಕ್ಷಪಾತದಿಂದ ವಿಶ್ಲೇಷಿಸಿದ್ದಾರೆ. ಮೊದಲಿಗೆ, ಗಾಂಧೀಜಿಯವರಿಗೆ ತಮ್ಮ ಸ್ವಧರ್ಮದಲ್ಲಿ ಅಚಲವಾದ, ದೃಢವಾದ ನಂಬಿಕೆ ಇತ್ತು. ಅದನ್ನು ಹೇಳಿಕೊಳ್ಳುವುದರಲ್ಲಿ ಯಾವುದೇ ಸಂಕೋಚ, ಹಿಂಜರಿಕೆಯೂ ಇರಲಿಲ್ಲ. ಅವರು ಹೇಳುತ್ತಾರೆ.

"I call myself a Sanatani Hindu, because I believe in the Vedas, the Upanishads, the Puranas, and all that goes by the name of Hindu scripture, and therefore in avataras and rebirth; I believe in the varnashrama dharma in a sense, in my opinion strictly Vedic but not in its presently popular and distorted crude sense; I believe in the protection of cow. I do not disbelieve in murti puja." (Young India: June 10, 1921)

**ಅಕ್ರಮ ಮತಾಂತರಗಳ ವಿಷಯ ಹಾಗಿರಲಿ, 'ಮತಾಂತರ' ಎಂಬ ಪರಿಕಲ್ಪನೆಯ ಬಗ್ಗೆಯೇ ಗಾಂಧೀಜಿಯವರಿಗೆ ಸಮ್ಮತಿ ಇರಲಿಲ್ಲ. ಸರ್ವಧರ್ಮ ಸಮಾನತೆಯನ್ನು ಬಯಸುತ್ತಿದ್ದ ಅವರು ಮತಾಂತರಗಳು ಮೂಲತಃ ಸರ್ವಧರ್ಮಗಳ ಸಮನ್ವಯಕ್ಕೆ ಅಡ್ಡಿಯಾಗುತ್ತವೆ ಎಂದು ನಂಬಿದ್ದರು. ಮತ್ತೊಬ್ಬರನ್ನು ಮತಾಂತರ ಮಾಡುವುದಕ್ಕಿಂತಲೂ ಹೇಯವಾದ ಕೃತ್ಯ ಇನ್ನೊಂದಿಲ್ಲ ಎಂಬುದು ಅವರ ನಿಲುವಾಗಿತ್ತು.**

ಈ ಕೆಳಗಿನ ಉದಾಹರಣೆಗಳು ಗಾಂಧೀಜಿಯವರ ಅಭಿಪ್ರಾಯವನ್ನು ಅತ್ಯಂತ ನಿಖರಾಗಿ ಸಾರುತ್ತವೆ. ಇದನ್ನು ನೋಡಿ.

"I disbelieve in the conversion of one person by another. My effort should never to be to undermine another's faith. This implies belief in the truth of all religions and, therefore, respect for them. It implies true humility." (Young India: April 23, 1931).

"I believe that there is no such thing as conversion from one faith to another in the accepted sense of the word. It is a highly personal matter for the individual and his God. I may not have any design upon my neighbour as to his faith which I must honour even as I honour my own. Having reverently studied the scriptures of the world I could no more think of asking a Christian or a Musalman, or a Parsi or a Jew to change his faith than I would think of changing my own. (Harijan: September 9, 1935).

"It is impossible for me to reconcile myself to the idea of conversion after the style that goes on in India and elsewhere today. It is an error which is perhaps the greatest impediment to the world's progress toward peace. Why should a Christian want to convert a Hindu to Christianity? Why should he not be satisfied if the Hindu is a good or godly man? (Harijan: January 30, 1937)

"ನನಗೆ ಕಾನೂನು ಮಾಡುವ ಅಧಿಕಾರ ಇದ್ದಿದ್ದರೆ ಎಲ್ಲ ಮತಾಂತರಗಳನ್ನು ನಿಷೇಧಿಸುತ್ತಿದ್ದೆ" ಎಂದು ಗಾಂಧೀಜಿಯವರು ಹೇಳಿದ್ದ ಮಾತು ಸುಪ್ರಸಿದ್ಧವಾಗಿದೆ. ಹಿಂದೂ ಕುಟುಂಬಗಳಲ್ಲಿ ಮಿಷನರಿಗಳು ಎಬ್ಬಿಸುತ್ತಿದ್ದ ಬಿರುಗಾಳಿ ಗಾಂಧೀಜಿಯವರ ಮನಸ್ಸನ್ನು ಅಪಾರವಾಗಿ ನೋಯಿಸಿತ್ತು. ಸಾಮಾಜಿಕ ಸಂಘರ್ಷಕ್ಕೆ ಕೌಟುಂಬಿಕ ತಲ್ಲಣಕ್ಕೆ ಹೇಗೆ ಮತಾಂತರಗಳು ಕಾರಣವಾಗುತ್ತವೆ ಎಂಬುದನ್ನು ಚೆನ್ನಾಗಿ ಬಲ್ಲವರಾದ್ದರಿಂದಲೇ ಅವರು ಸ್ಪಷ್ಟವಾಗಿ, "If I had the power and could legislate, I should stop all proselytizing. In Hindu households the advent of a missionary has meant the disruption of the family coming in the wake of change of dress, manners, language, food and drink . (November 5, 1935)"

ಮತಾಂತರದ ಬಗ್ಗೆ ಅವರ ಹೇಳಿಕೆಗಳು ಅಸಂಖ್ಯಾತವಾಗಿವೆ. ಅವೆಲ್ಲದರ ಉದ್ದೇಶ ಒಂದೇ. ಸಾಮಾಜಿಕ ಸಾಮರಸ್ಯ ಹದಗೆಡುವುದನ್ನು ತಡೆಯುವುದು; ಸರ್ವಧರ್ಮ ಸಮಾನತೆಯನ್ನು ಎತ್ತಿ ಹಿಡಿಯುವುದು.

ಮತಾಂತರ ರಾಷ್ಟ್ರಾಂತರವಾಗಿಯೂ ಪರಿಣಮಿಸುತ್ತದೆ ಎಂದು ಸ್ವಾಮಿ ವಿವೇಕಾನಂದರು ಹೇಳಿದ್ದು ಎಲ್ಲರಿಗೂ ಗೊತ್ತಿರುವಂತದ್ದು. ಅಕ್ರಮ ಮತಾಂತರ ಯಾವ ಕಾಲಕ್ಕೂ ಒಪ್ಪತಕ್ಕ ವಿಷಯವಲ್ಲ. ಸ್ವ–ಇಚ್ಛೆಯಿಂದ ಯಾರು ಬೇಕಾದರೂ ಮತಾಂತರ ಹೊಂದಲು ನಮ್ಮ ಸಂವಿಧಾನದಲ್ಲಿ ಅವಕಾಶವಿದೆ. ಆದರೆ ಮತ್ತೊಬ್ಬರನ್ನು ಮತಾಂತರ ಮಾಡುವುದು ತನ್ನ ಹಕ್ಕು ಅಥವ ಕರ್ತವ್ಯ ಎಂದು ಯಾರೂ ಭಾವಿಸುವಂತಿಲ್ಲ. ತನ್ನ ಮತದ ಬಗ್ಗೆ ಪ್ರಚಾರ ಮಾಡುವಾಗಲೂ ಸಂವಿಧಾನ ವಿಧಿಸಿರುವ ಇತಿಮಿತಿಗಳನ್ನು ಮೀರಬಾರದು. ಧಾರ್ಮಿಕ ಹಕ್ಕು ಕೇವಲ ಒಂದು ಮತಕ್ಕೆ ಮಾತ್ರ ಸೀಮಿತವಾದ ಸ್ವಾತಂತ್ರವಲ್ಲ.

**ಇದನ್ನು 1977ರಲ್ಲಿ ಸುಪ್ರೀಂ ಕೋರ್ಟ್ ಸ್ಪಷ್ಟವಾಗಿ ಹೇಳಿದೆ.**

"Article 25 guarantees to all persons right to freedom and conscience and the right freely to profess, practice and propogate religion subject to public order, morality and health. The word 'propogate' has been used in the Article as meaning to transmit or spread from person to person or from place to place. The Article does not grant right to convert other person to one's own religion but to transmit or

spread one's religion by an exposition of its tenets. The freedom of religion enshrined in Art. 25 is not guaranteed in respect of one religion only but covers all religions alike which can be properly enjoyed by a person if he exercises his right in a manner commensurate with the like freedom of persons following other religion. What is freedom for one is freedom for the other in equal measure and there can, therefore, be no such thing as a fundamental right to convert any person to one's own religion." [Rev. Stainislaus vs State Of Madhya Pradesh &Ors on 17 January, 1977, Equivalent citations: 1977 AIR 908, 1977 SCR (2) 611].

ಭಾರತದಲ್ಲಿ ಅಕ್ರಮ ಮತಾಂತರಗಳನ್ನು ಸೂಕ್ತ ಕಾನೂನುಗಳ ಮೂಲಕ ಹತ್ತಿಕ್ಕಬೇಕು ಎಂಬ ಬೇಡಿಕೆ ಬಹಳ ಹಿಂದಿನಿಂದಲೂ ಇದೆ. ಇದು ಕೇವಲ ಒಂದು ಮತವನ್ನು ಉದ್ದೇಶದಲ್ಲಿ ಇಟ್ಟುಕೊಂಡಿದ್ದಲ್ಲ. ಎಲ್ಲರಿಗೂ ಧಾರ್ಮಿಕ ಸ್ವಾತಂತ್ರ ಇದ್ದ ಹಾಗೆಯೆ ಎಲ್ಲರಿಗೂ ತಮ್ಮ ತಮ್ಮ ಧಾರ್ಮಿಕತೆಗಳನ್ನು ಅನ್ಯರ ಅಕ್ರಮಗಳಿಂದ ಸಂರಕ್ಷಿಸಿಕೊಳ್ಳುವ ಹಕ್ಕೂ ಇರುತ್ತದೆ. ಈ ಹಕ್ಕು ಎಲ್ಲ ಮತೀಯರಿಗೂ ಸಮಾನವಾಗಿದೆ.

ಬ್ರಿಟಿಷ್ ಆಡಳಿತ ಕಾಲದಲ್ಲೇ ಕೆಲವು ಪ್ರಾಂತ್ಯಗಳ ರಾಜರುಗಳು ಅಕ್ರಮ ಮತಾಂತರಗಳನ್ನು ಸಾಧ್ಯವಾದ ಮಟ್ಟಿಗೆ ನಿಷೇಧಿಸಿದ್ದರು. ರಾಯಗಡ__________ ಆ್ಯಕ್ಟ್ 1936, ಪಾಟ್ನಾ ಫ್ರೀಡಮ್ ಆಫ್‌ರಿಲಿಜನ್ ಆ್ಯಕ್ಟ್ 1942, ಸರ್ಗುಜ ಸ್ಟೇಟ್ ಅಪೋಸ್ಟಸಿ ಆ್ಯಕ್ಟ್ 1945, ಉದಯಪುರ ಸ್ಟೇಟ್ ಆರ್ಯಂ ಕನ್‌ವರ್ಷನ್ ಆ್ಯಕ್ಟ್ 1946– ಕೆಲವು ಉದಾಹರಣೆಗಳು.

1950ರ ದಶಕದಲ್ಲಿ ಅಕ್ರಮ ಮತಾಂತರಗಳು ಹೆಚ್ಚಾದಾಗ ಅಂದಿನ ಮಧ್ಯಪ್ರದೇಶದ ಕಾಂಗ್ರೆಸ್ ಸರ್ಕಾರ ನಾಗಪುರ ಹೈಕೋರ್ಟಿನ ನಿವೃತ್ತ ಮುಖ್ಯ ನ್ಯಾಯಾಧೀಶ ಭವಾನಿ ಶಂಕರ್ ನಿಯೋಗಿಯವರ ನೇತೃತ್ವದಲ್ಲಿ ಒಂದು ತನಿಖಾ ಸಮಿತಿಯನ್ನು ನೇಮಿಸಿತ್ತು.

ನಿಯೋಗಿ ಸಮಿತಿ ನೂರಾರು ಹಳ್ಳಿಗಳಲ್ಲಿ ಸಂಚರಿಸಿ ತನಿಖೆ ಮಾಡಿತು. ಸಮಿತಿಯ ಮುಂದೆ 375 ಲಿಖಿತ ಹೇಳಿಕೆಗಳು ಬಂದವು. ಸಮಿತಿಯನ್ನು ವಿರೋಧಿಸಿ ರೋಮನ್ ಕ್ಯಾಥೋಲಿಕ್ ಚರ್ಚ್ ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿತು. ಆದರೆ ಕೋರ್ಟ್ ಅದರ ಅರ್ಜಿಯನ್ನು ವಜಾ ಮಾಡಿತು

ವಿದೇಶಿ ಮಿಷನರಿಗಳಿಂದ ಮತಾಂತರ ಪ್ರಯತ್ನ ಹಾಗೂ ಹಿಂದೂ ದೇವರುಗಳ ಅವಹೇಳನ ತೀವ್ರವಾಗಿ ನಡೆಯುತ್ತಿರುವುದನ್ನು ಸಮಿತಿಯ ತನಿಖೆ ಖಚಿತಪಡಿಸಿತು. ಮಿಷನರಿಗಳ ಚಟುವಟಿಕೆ, ಸಾಹಿತ್ಯ, ಭಾಷಣ ಎಲ್ಲವನ್ನೂ ಸಮಿತಿಯ ವರದಿಯಲ್ಲಿ ವಿವರವಾಗಿ ದಾಖಲಿಸಲಾಗಿದೆ. ಮತಾಂತರದ ದುರುದ್ದೇಶ ಇಟ್ಟುಕೊಂಡು ಆಸ್ಪತ್ರೆ ಹಾಗೂ ಶಾಲೆಗಳನ್ನು ದುರ್ಬಳಕೆ ಮಾಡಲಾಗುತ್ತಿದೆ ಎಂದು ದೃಢಪಡಿಸಿದ ನಿಯೋಗಿ ಸಮಿತಿ ಮತಾಂತರಗಳನ್ನು ಶಾಸನಾತ್ಮಕವಗಿ ನಿಷೇಧಿಸಬೇಕು ಎಂದು ಶಿಫಾರಸ್ಸು ಮಾಡಿತು. ಅಕ್ರಮ ಮತಾಂತರ ತಡೆಯುವ ಶಾಸನಗಳು 1967ರಲ್ಲಿ ಒರಿಸ್ಸಾ ಹಾಗೂ 1968ರಲ್ಲಿ ಮಧ್ಯಪ್ರದೇಶಗಳಲ್ಲಿ ಜಾರಿಗೆ ಬಂದವು.

1978ರಲ್ಲಿ ಅರುಣಾಚಲ ಪ್ರದೇಶದಲ್ಲೂ ಈ ಕಾಯ್ದೆ ಜಾರಿಯಾಯಿತು. ಕ್ರಮೇಣ ದೇಶದ ಇನ್ನೂ ಕೆಲವು ರಾಜ್ಯಗಳಲ್ಲಿ ಅಕ್ರಮ ಮತಾಂತರ ನಿಷೇಧ ಕಾಯ್ದೆ ಜಾರಿಯಾಯಿತು.

ಈಗ ಕರ್ನಾಟಕದಲ್ಲೂ ಅಂತಹ ಒಂದು ಕಾನೂನುನನ್ನು ತರುತ್ತಿರುವುದು ಸ್ವಾಗತಾರ್ಹವಾದ ಬೆಳವಣಿಗೆ. ರಾಜ್ಯ ಸರ್ಕಾರ ವಿಧಾನ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆದುಕೊಂಡಿರುವ ಮತಾಂತರ ನಿಷೇಧ ಮಸೂದೆಯನ್ನು ಗಮನಿಸಿದರೆ ಇದು ಯಾವುದೇ ಧರ್ಮದ ವಿರುದ್ದವಾಗಿಲ್ಲ. ಯಾವುದೇ ಧಾರ್ಮಿಕ ಆರಾಧನೆಗಳಿಗೆ ಕುತ್ತು ತರುವುದಿಲ್ಲ ಎನ್ನಬಹುದು.

ಮತಾಂತರ ಸಮಾಜಕ್ಕೆ ಒಳ್ಳೆಯದಲ್ಲ. ಯಾವುದೇ ಮನೆಗಳು ಮತ್ತು ಮನಸ್ಸುಗಳಿಗೆ ಕೆಟ್ಟದ್ದಾಗಬಾರದು. ಬಡವರು ಮತ್ತು ದೀನದಲಿತರು ಇದಕ್ಕೆ ಬಲಿಯಾಗಬಾರದು. ಬಡತನವನ್ನು ದುರುಪಯೋಗಪಡಿಸಿ ಕೊಂಡು ಇನ್ನೊಂದು ಧರ್ಮಕ್ಕೆ ಆಮಿಷ ಅಥವಾ ಬಲವಂತದ ಮತಾಂತರ ಮಾಡುವುದನ್ನು ತಪ್ಪಿಸಬೇಕು ಎನ್ನವುದು ಮುಖ್ಯಮಂತ್ರಿ ಗಳು ನೀಡಿದ್ದ ಹೇಳಿಕೆ.

ಅಕ್ರಮವಾಗಿ ಮತಾಂತರ ಮಾಡುವವರನ್ನು ಗರಿಷ್ಠ 10 ವರ್ಷ ಜೈಲು ಶಿಕ್ಷೆಗೆ ಗುರಿಪಡಿಸುವ ಅಂಶವನ್ನು ಪ್ರಸ್ತುತ ಕರ್ನಾಟಕ ಧಾರ್ಮಿಕ ಹಕ್ಕು ಸಂರಕ್ಷಣಾ ಮಸೂದೆ 2021ರಲ್ಲಿ ಅಳವಡಿಸಲಾಗಿದೆ. ಹಳ್ಳಿಗಳಲ್ಲಿ ಅಕ್ರಮ ಮತಾಂತರ ಇಂದು ದೊಡ್ಡ ಪಿಡುಗಾಗಿರುವ ಹಿನ್ನೆಲೆಯಲ್ಲಿ ಇದನ್ನು ವಿಶ್ಲೇಷಿಸಬೇಕಾಗುತ್ತದೆ. ಮತಾಂತರಕ್ಕಾಗಿ ನಗದು, ಉಡುಗೊರೆ, ಯಾವುದೇ ಪ್ರತಿಫಲ, ಧಾರ್ಮಿಕ ಸಂಸ್ಥೆಗಳು ನಡೆಸುವ ಶಾಲೆ, ಕಾಲೇಜು ಗಳಲ್ಲಿ ಉದ್ಯೋಗ, ಉಚಿತ ಶಿಕ್ಷಣದ ಆಮಿಷ, ಮದುವೆಯಾಗುವುದಾಗಿ ವಾಗ್ದಾನ, ಉತ್ತಮ ಜೀವನ ಶೈಲಿ, ದೈವಿಕ ಸಂತೋಷದ ಆಸೆ ಆಮಿಷ, ಒಂದು ಧರ್ಮಕ್ಕೆ ವಿರುದ್ಧವಾಗಿ ಮತ್ತೊಂದು ಧರ್ಮವನ್ನು ವೈಭವೀಕರಿಸುವುದು ಇವೆಲ್ಲವೂ ವರದಿಯಾಗುತ್ತಿರುವ ವಿದ್ಯಮಾನಗಳು. ಈ ಹಿನ್ನೆಲೆಯಲ್ಲಿ ಒಂದು ಕಾನೂನಾತ್ಮಕ ವ್ಯವಸ್ಥೆಯ ಮೂಲಕವೇ ಇಂತಹ ಪ್ರಕರಣಗಳನ್ನು ಇತ್ಯರ್ಥಪಡಿಸುವುದು ಯಾವಾಗಲೂ ಸೂಕ್ತ. ಹಲವು ಧರ್ಮಗಳಿರುವ ದೇಶ ನಮ್ಮದು. ಇಂತಹ ದೇಶದಲ್ಲಿ ಆಯಾ ಧರ್ಮಗಳ ಅಸ್ಮಿತೆಯ ರಕ್ಷಣೆ ಆಗಬೇಕು. ಮತಾಂತರ ಸ್ವಂತ ಇಚ್ಛೆಯಿಂದ ಕೂಡಿರಬೇಕು. ಬಲವಂತದ ಮತಾಂತರವನ್ನು ಕಾನೂನಿನ ಮೂಲಕ ನಿಯಂತ್ರಿಸುವುದು ತಪ್ಪಲ್ಲ. ಈ ಮಸೂದೆಯು ಅಕ್ರಮ ಮತಾಂತರವನ್ನು ಮಾತ್ರ ನಿರ್ಬಂಧಿಸುತ್ತಿದೆ. ಮತಾಂತರ ಪಿಡುಗಿನ ವಿರುದ್ದ ಅನೇಕ ಧಾರ್ಮಿಕ ಮುಖಂಡರು, ಪ್ರಜ್ಞಾವಂತರು ಮೊದಲಿನಿಂದ ತಮ್ಮ ಅಸಮಾಧಾನ ವ್ಯಕ್ತಪಡಿಸುತ್ತಲೇ ಬಂದಿದ್ದಾರೆ. ಇದು ಸಮಾಜದ ಮೇಲೆ ಉಂತು ಮಾಡುತ್ತಿರುವ ಅಹಿತಕರ ಪರಿಣಾಮದ ಬಗ್ಗೆ ಸರ್ಕಾರವನ್ನು ಎಚ್ಚರಿಸುತ್ತ ಬಂದಿದ್ದಾರೆ.

**ಈ ಹಿನ್ನೆಲೆಯಲ್ಲಿ ಪ್ರಸ್ತುತ ಮಸೂದೆಯಲ್ಲಿ ಸಮಗ್ರ ಸಮಾಜದ ಹಿತ ಅಡಗಿದ್ದರೆ ಅದನ್ನು ಗುರುತಿಸುವುದರಲ್ಲಿ ತೊಡಕೇನಿದೆ?**

ಜಾಹಿರಾತು

॥ ನಂಬಿ ಬಂದವರ ಪಾಲಿಗೆ ಕಾಮಧೇನು, ಭಕ್ತರ ಪಾಲಿಗೆ ಕಲ್ಪವೃಕ್ಷ ॥

# ಶ್ರೀ ಗುರುರಾಘವೇಂದ್ರ ಜ್ಯೋತಿಷ್ಯ ಕೇಂದ್ರ

## ಕಟೀಲು ಶ್ರೀ ದುರ್ಗಾಪರಮೇಶ್ವರಿ ಆರಾಧಕರು



ವೇದಬ್ರಹ್ಮ ಜ್ಯೋತಿಷ್ಯ ರತ್ನಕರ ರಾತ್ರಿಯತ್ರಿಕಲಾ ಜ್ಞಾನಿ : ಆಚಾರ್ಯ ಶ್ರೀ ವಿಜಯೇಂದ್ರ ಗುರುಜೀ ಕೇರಳ ಪ್ರವಾಸ ತಾಂತ್ರಿಕರು ಆದ್ಯಾತ್ಮಿಕ ಚಿಂತಕರು, ಜೊತಿಷ್ಯ ವಾಸ್ತ ಮಂತ್ರಶಕ್ತಿ ಪರಿಣಿತರು ಅಷ್ಟಮಂಗಲ ದೈವಪ್ರಶ್ನೆ ಜಾತಕ ಹಸ್ತ ಫೋಟೋ ನೋಡಿ ನಿಮ್ಮ ಜೀವನದ ಸಂಪೂರ್ಣ ಭವಿಷ್ಯವನ್ನು ಸತ್ಯಸಾರಾಂಶವಾಗಿ ನುಡಿಯುತ್ತಾರೆ. ಜೀವನದಲ್ಲಿ ಮನುಷ್ಯ ಒಂದಲ್ಲ ಒಂದು ಎಷ್ಟೇ ಪ್ರಾಮಾಣಿಕವಾಗಿ ಜೀವನ ನೆಡೆಸದವರು ಸಮಸ್ಯೆಗಳ ಬೆಂಬಿಡದೆ ಕಾಡುತ್ತಿರುತ್ತದೆ. ಚಿಂತಿಸಬೇಡಿ ಭಗವಂತ ನಂಬಿದವರನ್ನು ಎಂದಿಗೂ ಕೈಬಿಡುವುದಿಲ್ಲ. ಒಬ್ಬ ಗುರುವಿನ ರೂಪದಲ್ಲಿ ಬಂದು ಪ್ರತ್ಯಕ್ಷನಾಗಿ ದಾರಿ ತೋರಿಸುತ್ತಾನೆ. ನಿಮ್ಮ ಭವ್ಯ ಭವಿಷ್ಯದ ಕನಸು ನಾನಸಾಗಲು ಆಚಾರ್ಯ ಶ್ರೀವಿಜೇಂದ್ರ ಗೂರುಜಿ ಅವರನ್ನು ಸಂಪರ್ಕಿಸಿ, ಅಪಾರಜ್ಞಾನ ವಾಕ್ ಸಿದ್ಧಿ, ಮಂತ್ರಸಿದ್ಧಿಯಿಂದ ಜನರಲ್ಲಿ ಪ್ರಶಂಸೆ, ಪಡೆದಿದ್ದಾರೆ ಹಾಗೂ ಸಾವಿರಾರು ಜನರಿಗೆ ಸಾರ್ಥಕ ಪರಿಹಾರ ನಿಡಿದ ಕೀರ್ತಿ ಪಡೆದಿದ್ದಾರೆ. ಇದು ನಿಜ ಬದುಕಿನ ದಾರಿ ದೀಪ ಇಂದೆ ಸಂಪರ್ಕಿಸಿರಿ ಶ್ರೀ ಕಟೀಲ ಶ್ರೀ ದುರ್ಗೆ ಪರಮೇಶ್ವರಿ ದೇವಿ ಆರಾಧಕರು.

ನಿಮ್ಮ ಸಮಸ್ಯೆ ಏನೇ ಇರಲಿ ಅದು ಎಷ್ಟೆ ಕಠಿಣವಾಗಿರಲಿ ಕೆರಳ ಅರ್ಥವಣವೇದದ ಅಮಾವಾಸ್ಯೆ ಹುಣ್ಣಿಮೆ, ಗ್ರಹಣಕಾಲದ ಬ್ರಹ್ಮ-ತಂತ್ರ ವಿದ್ಯೆಗಳಿಂದ 100ಕ್ಕೆ 100 ರಷ್ಟು ಶಾಶ್ವತ ಪರಿಹಾರ ಕಲ್ಪಿಸಲಾಗುವುದು..

ನಿಮ್ಮ ಸಮಸ್ಯೆಗೊಂಡ : ಮಾನಸಿಕ ನೆಮ್ಮದಿ ಇಲ್ಲದಿರುವುದು ಮನೆಯಲ್ಲಿ ಅಶಾಂತಿ, ದುಷ್ಟಶಕ್ತಿ ತೊಂದರೆ, ಮಕ್ಕಳ ಅಸಭ್ಯ, ವರ್ತನೆ, ವಿದ್ಯಾಭ್ಯಾಸ ಹಿನ್ನಡೆ ವ್ಯಾಪಾರ-ಉದ್ಯೋಗನಷ್ಟ ಮದುವೆ ವಿಳಂಭ ಪ್ರೇಮವಿಚಾರ, ದಾಂಪತ್ಯ-ಕಲಹ, ಡೈವರ್ಸ್ ತೊಂದರೆ, ಸಂತಸ ಲೈಂಗಿಕ ತೊಂದರೆ ಆರೋಗ್ಯ ಸಮಸ್ಯೆ, ಕೊಡೆಕೇಸ್, ಆಸ್ತಿವಿಚಾರ, ಶತ್ರುಕಾಟ, ಮಾಟ-ಮಂತ್ರ, ವಶೀಕರಣ ನಿವಾರಣೆ ಅತ್ತೆ-ಸೊಸೆ-ಕಲಹ, ಹಣಕಾಸಿನ ಸಮಸ್ಯೆ, ಇನ್ನುಯಾವುದೇ ಸಮಸ್ಯೆಗಳಿಂದ ಜೀವನದಲ್ಲಿ ಮಾನಸಿಕವಾಗಿ ನೊಂದು ಇನ್ನೊಬರ ಬಳಿ ಹೇಳಲಾಗದೆ, ಮನಸ್ಸಿನಲ್ಲಿ ಕೊರಗುತ್ತಿದ್ದರೆ ಚಿಂತಿಸಬೇಡಿ ಉತ್ತಮ ಸಲಹೆ ಶಾಶ್ವತ ಪರಿಹಾರ ಶತಸಿದ್ಧ.

ವಿ.ಸೂ. : ಬಹಳ ವಯಸ್ಸಾಗಿದ್ದರು ಮದುವೆ ಆಗದೆ ಬಳಲುತ್ತಿರುವ ವಧು-ವರರಿಗೆ ಅತಿ ಶೀಘ್ರವಾಗಿ ವಿವಾಹ ಪ್ರಾಪ್ತಿ ಆಗಲು ವಿಶೇಷ ಪರಿಹಾರ ಮಾಡಿಕೊಡುತ್ತೇವೆ.

**ದೂರದ ಊರಿನವರಿಗೆ ದೂರವಾಣಿ ಮೂಲಕ ಪರಿಹಾರ ತಿಳಿಸುತ್ತೇವೆ.**

**99452 22228**

**ಸ್ಥಳ : ಶ್ರೀ ಕ್ಷೇತ್ರ ಮಂತ್ರಾಲಯ,**

**ಶ್ರೀ ಗುರುರಾಘವೇಂದ್ರ ಜ್ಯೋತಿಷ್ಯ-ಸಲಹೆ- ಪರಿಹಾರ ಕೇಂದ್ರ ॥**

ನಂ 157, 1ನೇ ಮಹಡಿ, ಶ್ರೀರಾಮ ಪ್ಲಾಜಾ, ಸತೀಶ್ ಸ್ಟೋರ್ ಎದುರು,
ಡಿ.ವಿ.ಜಿ. ರೋಡ್, ಬಸವನಗುಡಿ, ಬೆಂಗಳೂರು
ಬರುವ ಮೊದಲು ದೂರವಾಣಿ ಮೂಲಕ ಭೇಟಿಮಾಡಿ ಸಮಯವನ್ನು ಖಚಿತ ಪಡಿಸಿಕೊಂಡು ಬನ್ನಿ
ಸಮಯ : ಬೆಳಗ್ಗೆ 11.00 ರಿಂದ ರಾತ್ರಿ 9.00ರ ವರೆಗೆ

ಜಾಹಿರಾತು

# ಶ್ರೀ ವಾದಿರಾಜ ವಿಜಯ ಧಾರ್ಮಿಕ ಮಂದಿರ

# 124, 2ನೇ ಮುಖ್ಯರಸ್ತೆ, ಶ್ರೀ ಮಂಜುನಾಥ ದೇವಸ್ಥಾನದ ಎದುರು, ಸೀತಾ ಸರ್ಕಲ್,
ಬ್ಯಾಂಕ್ ಕಾಲೋನಿ, ಬೆಂಗಳೂರು–560 050.

## ಸ್ಥಳದ ಬಾಡಿಗೆ ಇರುವುದಿಲ್ಲ

ಉಪನಯನ, ಸೀಮಂತ, ನಾಮಕರಣ, ಹುಟ್ಟುಹಬ್ಬ, ಹೋಮಹವನ,
ಸತ್ಯನಾರಾಯಣ ಪೂಜೆ, ಇನ್ನಿತರ ದೇವತಾ ಕಾರ್ಯಗಳು,
“ವೈಕುಂಠ ಸಮಾರಾಧನೆ ಪ್ರಯುಕ್ತ ಅನ್ನದಾನಾದಿಗಳನ್ನು ಹಾಗೂ ಸಂಜೆ ಕಾರ್ಯಕ್ರಮಗಳನ್ನು
ಇತರ ಶುಭ ಧಾರ್ಮಿಕ ಕಾರ್ಯಕ್ರಮಗಳನ್ನು ಮಾಡಬಹುದಾಗಿದೆ.
ಅಡಿಗೆಯನ್ನು ಮಡಿಯಲ್ಲಿ ಮಾಡಲಾಗುವುದು.

**ವಿವರಗಳಿಗೆ ಕಾರ್ಯಾಲಯವನ್ನು ಸಂಪರ್ಕಿಸಿ :**

**ದೂರವಾಣಿ : 080–26793054 ಮೊಬೈಲ್ 8277433666**

ಜಾಹಿರಾತು

# ಶ್ರೀ ಶ್ರೀನಿವಾಸ ನಿಲಯ ಧಾರ್ಮಿಕ ಸಭಾ ಮಂದಿರ

## Sri Srinivasa Nilaya Dharmika Sabha Mandira

ಸೀತಾ ಸರ್ಕಲ್‌ನಿಂದ ಗಿರಿನಗರಕ್ಕೆ ಹೋಗುವ ಮಾರ್ಗ
ಶ್ರೀ ವಿವೇಕಾನಂದ ಪಾರ್ಕ್ ಎದುರು, ಬೆಂಗಳೂರು-560085

ಶ್ರೀ ಶ್ರೀನಿವಾಸ ನಿಲಯ ಧಾರ್ಮಿಕ ಸಭಾ ಮಂದಿರ ಎಂಬ ನೂತನ ಕಟ್ಟಡದಲ್ಲಿ ಉಪನಯನ, ಮದುವೆ, ಸೀಮಂತ, ನಾಮಕರಣ, ಹುಟ್ಟುಹಬ್ಬ, ಹೋಮ-ಹವನ ಸತ್ಯನಾರಾಯಣ ಪೂಜೆ ಇನ್ನಿತರ ದೇವತಾ ಕಾರ್ಯಗಳು, ವೈಕುಂಠ ಸಮಾರಾಧನೆ, ಅನ್ನ ದಾನಾದಿಗಳನ್ನು ಹಾಗೂ ಸಂಜೆ ಕಾರ್ಯಕ್ರಮಗಳನ್ನು ಇತರ ಶುಭ, ಧಾರ್ಮಿಕ ಕಾರ್ಯಕ್ರಮಗಳನ್ನು ಮಾಡಬಹುದಾಗಿದೆ.

ದಕ್ಷಿಣ ಮತ್ತು ಉತ್ತರ ಭಾರತದ
ಅಡುಗೆಯನ್ನು ಮಡಿಯಲ್ಲಿ ಮಾಡಲಾಗುವುದು

**ಸ್ಥಳದ ಬಾಡಿಗೆ ಇರುವುದಿಲ್ಲ.**

**ವಿವರಗಳಿಗಾಗಿ ಕಾರ್ಯಾಲಯವನ್ನು ಸಂಪರ್ಕಿಸಿ**

**ದೂರವಾಣಿ : 2672 2267, 98866 55755**

# AKHILA KARNATAKA BRAHMANA MAHASABHA (R.)

**Donors from different category for the month of January, February & March 2022**

## PLATINUM CLUB DONOR (Rs. 1.00 LAKHS to Rs. 4.99 LAKHS)



Sri Subramanya S K
Hemavathi nagara ,Hassan



Sri Arun Kumar Adiga- Proprietor
Vidyarthi Bhavan, Bengaluru



Sri Yeshu Mishra
High Court Advocate, Bengaluru



Sri Diwakar K
Advocate- Bengaluru



Sri Umesh H
Advocate- Hospet



Sri Ravishankar B S
Bengaluru



Sri Subramanya R
Advocate- Bengaluru



Sri Raghavendra M K
MICO Consultant, Bengaluru



Sri Vishwanath N N
Bengaluru

**GOLD CLUB DONOR (Rs. 50,000 TO Rs. 99,000)**



Sri M Nagaraj Retired HAL Officer
Om Sri Apartments , Uttarahalli , Bengaluru



Sri Sreedhar S J - Secretary
Sir M Vishveshwariah College, Davangere

PERIODICAL RATE
VIPRANUDI KANNADA MONTHLY. Postal Regn. No. RNP/KA/BGS/2275/
& RNI No. KARKAN/2009/29931. Posted at BG PSO, Mysore Road, Bangalore-560 026,
Permitted to Post on 17-03-2022 Date of Publishing 9-03-2022


# ಶುಭಾಶಯಗಳು

## ಡಾ|| ಉದಯ್ ಬಿ. ಗರುಡಾಚಾರ್

## ಶಾಸಕರು, ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರ



**Dr. Uday B. Garudachar**

**MLA, Chickpet Assembly Constituency**

/BGUdayBJP www.udaygarudachar.in


If undelivered please return to :
**VIPRANUDI**
Akhila Karnataka Brahmana Mahasabha (R.)
"Gayathri Bhavana", No. 3070, 9th Main Road
Gayathri Bhavana Road, (14th Cross) BSK 2nd Stage
BANGALORE-560 070. Phone : 26771695

VIPRANUDI-Kannada Monthly, Published & Owned by President, On behalf of Akhila Karnataka Brahamana Mahasabha (R)
"Gayathri Bhavana", No. 3070, 9th Main Road, Gaythri Bhavana Road (14th Cross) BSK 2nd Stage, Bangalore-560 070.
And Printed at Parimala Mudranalaya, No. 184, Allama Prabhu Road, 14th Main, Hanumanthanagar, Bangalore-560 050, Editor : Prof. M.K. Sridhar